MADAM SPEAKER.—The question is :

"That this Assembly agrees with the Eleventh Report of the Committee on Private Members' Bills and Resolutions."

The Motion was adopted

Budget Estimates for 1973-74.

Demands for Grants

Demand Nos. 21, 25 and 27 (Debate continued)

† ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ (ಅಭಿವೃದ್ಧಿ ಮತ್ತು ಸಮಾಜ ಕಲ್ಯಾಣ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸಮುದಾಯ ಅಭಿವೃದ್ಧಿ, ಪಂಚಾಯತ್‌ರಾಜ್ಯ ಸಂಸ್ಥೆಗಳು ಹಾಗೂ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂಥ ಬೇಡಿಕೆಗಳ ಮೇಲೆ ಘನವನ್ನು ಹೊಂದಿದ ಈ ಸಭೆಯ ಮಾನ್ಯ ಸದಸ್ಯರು ಮಾತನಾಡುತ್ತಾ ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಸುಮಾರು 11 ಜನ ಮಾನ್ಯ ಸದಸ್ಯರು ಈ ಬೇಡಿಕೆಗಳ ಚರ್ಚೆಯಲ್ಲಿ ಭಾಗವಹಿಸಿದ್ದರು. ಕಳೆದ ವರ್ಷ ಒಂದು, ಎರಡು, ಹಾಗೂ ಮೂರನೇ ಬೇಡಿಕೆಗಳು ಏನಿವೆ ಅವುಗಳಿಗೆ ಸುಮಾರು 3 ಕೋಟಿ 65 ಲಕ್ಷ 4 ಸಾವಿರ ರೂಪಾಯಿಗಳನ್ನೂ, ಎರಡನೇ ಬೇಡಿಕೆಗೆ 5 ಕೋಟಿ 79 ಲಕ್ಷ ರೂಪಾಯಿಗಳನ್ನೂ ಹಾಗೂ 3ನೇ ಬೇಡಿಕೆಗೆ 11 ಕೋಟಿ 18 ಲಕ್ಷ ರೂಪಾಯಿಗಳನ್ನೂ ಇಡಲಾಗಿತ್ತು. ಈ ಸಾಲಿನಲ್ಲಿ 6 ಕೋಟಿ 6 ಲಕ್ಷ ರೂಪಾಯಿಗಳನ್ನು ರೂರಲ್ ಡೆವಲಪ್ ಕೆಲಸಕ್ಕಾಗಿಯೂ, ಕಮ್ಯೂನಿಟಿ ಡೆವಲಪ್‌ಮೆಂಟ್ ಕೆಲಸಕ್ಕಾಗಿ 6 ಕೋಟಿ 19 ಲಕ್ಷ 66 ಸಾವಿರ ರೂಪಾಯಿಗಳನ್ನೂ ಹಾಗೂ ಮಿಸಲೇನಿಯಸ್, ಸೋಷಿಯಲ್, ಡೆವಲಪ್‌ಮೆಂಟ್ ಆರ್ಗನೈಜೇಷನ್‌ಗೋಸ್ಕರ 1 ಕೋಟಿ 39 ಲಕ್ಷ 37 ಸಾವಿರ ರೂಪಾಯಿಗಳನ್ನು ಇಡಲಾಗಿದೆ: ಮಾನ್ಯ ಸದಸ್ಯರು ಅದರಲ್ಲೂ ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಹಾಗೂ ನಮ್ಮ ಪಕ್ಷದ ಮಾನ್ಯ ಸದಸ್ಯರಾದ ಶ್ರೀಮಾನ್ ಹೆಗರೆಯವರು ಮತ್ತು ಶ್ರೀಮಾನ್ ಬಂಗಿಯವರು ಈ ಬೇಡಿಕೆಯ ಮೇಲೆ ಪ್ರಸ್ತಾಪ ಮಾಡುತ್ತಾ ಅವರು ಬಹಳ ಪ್ರಮುಖವಾಗಿ ಹೇಳಿದ್ದಾರೆ. ಕೆಳಭಾಗದ ಜನಗಳಿಗೆ ಸರ್ಕಾರದವರು ಕೊಡತಕ್ಕ ಈ ಸೌಲಭ್ಯಗಳು ಮುಟ್ಟುತ್ತಾ ಇಲ್ಲ ಎಂದು ಅವರು ಹೇಳಿದ್ದಾರೆ. ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ ಅಭಿವೃದ್ಧಿ ಇಲಾಖೆಯಲ್ಲಿ ಪ್ರಮುಖವಾಗಿ ಹೇಳುವುದಾದರೆ ಬಹುಶಃ ಮೊದಲನೆಯ 3 ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಮೌಲ್ಯ ಮಾಪನ ಮಾಡಿದ ಕೇಂದ್ರ ಸರ್ಕಾರದ ಅಧಿಕಾರಿಗಳ ತಂಡಗಳು ಹಾಗೂ ನಮ್ಮ ದೇಶದ ಅರ್ಥ ಶಾಸ್ತ್ರಜ್ಞರು ಮಾಡಿರತಕ್ಕ ಮೌಲ್ಯಮಾಪನದ ಪ್ರಕಾರವಾಗಿ ನಾವು 3 ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಯಾವ ಒಂದು ಅಭಿವೃದ್ಧಿಗೆ ಸಂಬಂಧಪಟ್ಟ ವೆಚ್ಚವನ್ನು ಮಾಡಿದ್ದೇವೆಯೋ ಅದು ಸಮಾಜದ ಎಲ್ಲಾ ವರ್ಗದ ಜನಗಳಿಗೂ ತಲುಪಿದೆಯೋ ಇಲ್ಲವೋ ಎಂದು ಮೌಲ್ಯ ಮಾಪನದ ಅರ್ಥ ಶಾಸ್ತ್ರಜ್ಞರು ಒಂದು ತೀರ್ಮಾನವನ್ನು ಹೇಳಿದ್ದಾರೆ. ಆ ತೀರ್ಮಾನವನ್ನು ಅನುಸರಿಸಿ ನಮ್ಮ ಪ್ರಧಾನಿಯವರು ನಾಲ್ಕನೇ ಪಂಚವಾರ್ಷಿಕ ಯೋಜನೆಗೆ ಮುನ್ನುಡಿ ಬರೆಯುತ್ತಾ ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ಅವರು ಹೇಳಿದಹಾಗೆ ಸಾಮಾಜಿಕ ನ್ಯಾಯ ಮತ್ತು ಬಡತನ ನಿವಾರಣೆ ಇದು ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಪ್ರಮುಖ ಗುರಿಯಾಗಿರಬೇಕು ಎಂಬ ಮಾತನ್ನು ಮುನ್ನುಡಿಯಲ್ಲಿ ಹೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವೆಲ್ಲರೂ ಕೂಡ ಮಾನ್ಯ ಸಭೆಯ ಸದಸ್ಯರು ಹಾಗೂ ಹೊರಗಡೆ ಇರತಕ್ಕವರು ಈ ಅಭಿವೃದ್ಧಿಕಾರ್ಯಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಅನಧಿಕಾರಿಗಳು ಮತ್ತು ಸಾಮಾಜಿಕ ಸೇವಾ ಸಂಸ್ಥೆಗಳು, ಸಾರ್ವಜನಿಕ ಮುಖಂಡರು ತಾವೆಲ್ಲರೂ ಕೂಡ ಈ ದಿಶೆಯಲ್ಲಿ ಕೆಲಸ ಮಾಡಬೇಕಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದೇ ಒಂದು ಮಾತಿನಲ್ಲಿ ಹೇಳುವುದಾದರೆ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಮತ್ತು ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಒಂದು ಅಭಿವೃದ್ಧಿಗೆ ಸಂಬಂಧಪಟ್ಟಂತಹ ವೆಚ್ಚದಿಂದ ಉತ್ಪತ್ತಿಯಾಗತಕ್ಕಂಥಾ ಸೌಲಭ್ಯಗಳು ಸಮಾಜದ ಎಲ್ಲಾ ವರ್ಗದವರಿಗೂ,

(ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ)

ಹಿಂದುಳಿದ ವರ್ಗದವರಿಗೆ ಬಡವರಿಗೆ ಹಾಗೂ ಕೆಳಭಾಗದಲ್ಲಿ ಬರತಕ್ಕ ರಾಷ್ಟ್ರದ 23 ಕೋಟಿ ಜನರು ಏನಿದ್ದಾರೆ ಆ ಎಲ್ಲಾ ಜನಗಳಿಗೂ ಸೌಲಭ್ಯವನ್ನು ಹೆಚ್ಚಿನ ರೀತಿಯಲ್ಲಿ ದೊರಕಿಸಬೇಕು ಎನ್ನುವುದು ಕೇಂದ್ರ ಸರ್ಕಾರದ ಮತ್ತು ರಾಜ್ಯಸರ್ಕಾರದ ಪ್ರಮುಖವಾದ ಗುರಿಯಾಗಿದೆ ಎಂದು ಹೇಳುತ್ತೇನೆ.

ಮಾನ್ಯ ಸದಸ್ಯರು ಅನೇಕರು ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿಯೂ ಅಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟಹಾಗೆ 11 ಜನ ಮಾನ್ಯ ಸದಸ್ಯರು ಮಾತನಾಡಿದ ಪೈಕಿ ಬಹುಭಾಗದ ಜನರು ಸಮಾಜ ಕಲ್ಯಾಣ ಇಲಾಖೆಯ ಮೇಲೆ ಈ ಚರ್ಚೆಯಲ್ಲಿ ಹೆಚ್ಚಿನ ರೀತಿಯಲ್ಲಿ ಭಾಗವಹಿಸಿದ್ದಾರೆ. ಮಾನ್ಯ ಮಿತ್ರರಾದ ಬಂಗಾರಪ್ಪನವರು ಕರೆಕ್‌ಟೀವ್ ಡೈರಕ್ಟೋರೇಟ್ ಏನಿದೆ ಅದರಲ್ಲಿ ಕೆಲಸ ಸರಿಯಾಗಿ ನಡೆಯುತ್ತಿಲ್ಲ ಎಂದು ಹೇಳಿದರು. ಈ ಇಲಾಖೆಯನ್ನು ಸಾಧ್ಯವಾದಷ್ಟು ಬೇಗ ಪ್ರತ್ಯೇಕವಾದ ಇಲಾಖೆಯನ್ನು ಮಾಡತಕ್ಕದ್ದು ಒಳ್ಳೆಯದು ಎಂದು ಹೇಳಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯ ಡೈರೆಕ್ಟರವರು ಈ ಬಗ್ಗೆ ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸಿದ್ದಾರೆ. ಅದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಈ ಇಲಾಖೆಯನ್ನು ಪುನರ್ ವ್ಯವಸ್ಥಿಗೊಳಿಸುವುದು ಮಾನ್ಯ ಸದಸ್ಯರಿಗೆ ಎಷ್ಟು ತೀವ್ರವಾದ ಆಕಾಂಕ್ಷೆ ಇದೆಯೋ ಅಷ್ಟೇ ಆಕಾಂಕ್ಷೆ ಸರ್ಕಾರಕ್ಕೆ ಇದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಗೆ ಅವರು ಇನ್ನೊಂದು ಆಪಾದನೆಯನ್ನು ಮಾಡಿದ್ದಾರೆ. ಅದರಲ್ಲಿ ಕೆಲವು ವ್ಯಕ್ತಿಗಳಿಗೆ ಸಂಬಂಧಪಟ್ಟ ಆಪಾದನೆಯನ್ನು ಮಾಡಿದ್ದಾರೆ. ಬೆಂಗಳೂರಿನಲ್ಲಿರತಕ್ಕ ಸರ್ಟಿಫೈಯ್ಡ್ ಸ್ಕೂಲುಗಳ ವಿಚಾರದಲ್ಲಿ ಮಾತನಾಡಿ ಅಲ್ಲಿ ಏನು ತೊಂದರೆ ಇವೆ ಆ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ಆದರೆ ನಾನಾದರೂ ಹೇಳುತ್ತೇನೆ ಅಲ್ಲಿಗೆ ಸಂಬಂಧಪಟ್ಟ ಹಾಗೆ ಯಾವ ಒಂದು ಟೆಂಡರು ಬಂದಿತ್ತೋ ಅದನ್ನು ಒಪ್ಪಿಕೊಂಡಿಲ್ಲ. ಅದರಿಂದ ಸರ್ಕಾರಕ್ಕೆ ಒಂದು ಕಾಸೂ ನಷ್ಟವಾಗಿಲ್ಲ. ಮತ್ತು ಅಲ್ಲಿ ಅಧಿಕಾರಿಗಳು ಏನು ಲೋಪದೋಷಗಳನ್ನು ಮಾಡಿದ್ದಾರೆ ಎಂದು ಹೇಳಿದ್ದಾರೆ ಅವರ ಮೇಲೆ ಈಗಾಗಲೇ ತಕ್ಕ ಕ್ರಮವನ್ನು ತೆಗೆದುಕೊಂಡಿದ್ದೇವೆ. ಇಷ್ಟು ಮಾತ್ರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಜಯಪ್ರಕಾಶ್‌ನಾರಾಯಣ್ ಅವರು ಮಾತನಾಡುತ್ತಾ ಅವರು ಅನೇಕ ಉಪಯುಕ್ತವಾದ ಸಲಹೆಗಳನು ಕೊಟ್ಟಿದ್ದಾರೆ. ಅವರು ಪ್ರತಿ ನಿಮ್ನ ವರ್ಗದ ಹರಿಜನಗಿರಿಜನ ಯಾವ ವಿದ್ಯಾರ್ಥಿಯಾಗಲೀ ಅವರಿಗ ವಿದ್ಯಾರ್ಥಿ ವೇತನ ಸಿಕ್ಕಬೇಕು, ವಿದ್ಯಾರ್ಥಿ ನಿಲಯದಲ್ಲಿ ಇರತಕ್ಕ ಒಂದು ಸೌಲಭ್ಯದೊರೆಯಬೇಕು ಎಂದು ಹೇಳಿ ಅದರ ಜೊತೆಗೆ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಕೊಡಬೇಕು ; ಅನಕ್ಷರತೆಯನ್ನು ಕಡಿಮೆ ಮಾಡಬೇಕು, ಅದಕ್ಕಾಗಿ ಹೆಚ್ಚು ಹೆಚ್ಚು ನರ್ಸರಿ ಶಾಲೆಗಳನ್ನು ತೆರೆಯಬೇಕು ; ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ವಿದ್ಯಾಭ್ಯಾಸ ಇಲಾಖೆಯವರು ಸುಮಾರು 90 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ ; ಅದರಲ್ಲಿ ಹೆಚ್ಚು ಹಣವನ್ನು ಹರಿಜನ ಮಕ್ಕಳ ವಿದ್ಯಾಭ್ಯಾಸಕ್ಕೆ ಮಾಡಿಲ್ಲ, ಆದ್ದರಿಂದ ವಿದ್ಯಾ ಇಲಾಖೆಯವರು ಮುಂದೆ ಬಂದು ಹರಿಜನ ಗಿರಿಜನ ಮಕ್ಕಳಿಗೆ ಅನುಕೂಲವಾಗುವಂತೆ ಹೆಚ್ಚು ಹೆಚ್ಚಾಗಿ ನರ್ಸರಿ ಶಾಲೆಗಳನ್ನು ತೆಗೆಯುತಕ್ಕ ಒಂದು ಕೆಲಸವನ್ನು ಮಾಡಿದರೆ ಬಹುಶಃ ಸಾಕ್ಷರತೆ ಜಾಸ್ತಿಯಾಗುತ್ತದೆ ಎನ್ನುವಂಥಾ ಮಾತನ್ನು ಹೇಳಿದ್ದಾರೆ. ಸಾಕ್ಷರತೆ ಹೆಚ್ಚಿಸುವ ಬಗ್ಗೆ ಮತ್ತು ವಿದ್ಯಾರ್ಥಿನಿಲಯಗಳಿಗೆ ಸಂಬಂಧಪಟ್ಟ ಹಾಗೆ ಕ್ರಮ ಕೈಗೊಳ್ಳಲು ಒಂದು ಸಮಿತಿಯನ್ನು ಕೂಡ ಮಾಡಲಾಗಿತ್ತು. ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯನ್ನು ಸರ್ಕಾರದವರು ಒಪ್ಪಿಕೊಂಡು ಅದನ್ನು ಕಾರ್ಯ ರೂಪಕ್ಕೆ ತರುವುದಕ್ಕೆ 70 ಲಕ್ಷ ರೂಪಾಯಿಗಳು ಬೇಕಾಗುತ್ತವೆ ಎಂದು ಅಂದಾಜು ಮಾಡಿ ಆ ವರದಿಯನ್ನು ಅನುಷ್ಠಾನಕ್ಕೆ ತರುವುದಕ್ಕೆ ನಾವು ಪ್ರಯತ್ನವನ್ನು ಈಗಾಗಲೇ ಮಾಡಿದೆ. ಆ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಅದೇ ರೀತಿಯಲ್ಲಿ ಹೆಣ್ಣುಮಕ್ಕಳ ಹೈಸ್ಕೂಲು, ರೆಸಿಡೆನ್ಸಿಯಲ್ ಸ್ಕೂಲ್ ಮತ್ತು ಕ್ರಾಫ್ಟ್ ಟ್ರೈನಿಂಗ್ ಸೆಂಟರುಗಳನ್ನು ತೆಗೆಯಬೇಕೆಂದು ಹೇಳಿದ್ದಾರೆ. ಅವರ ಜೊತೆಯಲ್ಲಿ ಹರಿಜನ ಹಾಸ್ಟೆಲುಗಳಲ್ಲಿ ಹರಿಜನರು 75 ಮತ್ತು ಬೇರೆ ಜಾತಿಯವರು 25 ಪರ್‌ಸೆಂಟ್ ಇರಬೇಕೆಂದು ಸಹ ಕೆಲವು ಸದಸ್ಯರು ಸಲಹೆ ಮಾಡಿದ್ದಾರೆ. ಕೆಲವರು 50 : 50 ಪರ್‌ಸೆಂಟ್ ಇರಬೇಕೆಂದು ಸಹ ಹೇಳಿದ್ದಾರೆ. ಇನ್ನೊಂದು ಪ್ರಾಮುಖ್ಯವಾದ ವಿಚಾರವೇನೆಂದರೆ, ಐ. ಎ. ಎಸ್. ಮತ್ತು ಐ. ಪಿ. ಎಸ್. ಟ್ರೈನಿಂಗ್ ಸೆಂಟರ್, ಡೆಲ್ಲಿ-ಇಲ್ಲಿರುವಂತಹ ಕೇಂದ್ರದಿಂದ ಬಾಕಿ ಇದ್ದ ಕಡೆಗಳಿಂದ ಹೆಚ್ಚು ಜನರು ತೇರ್ಗಡೆ ಹೊಂದುತ್ತಾರೆ. ಅಂಥ ಒಂದು ಅವಕಾಶವನ್ನು ಮೈಸೂರು ರಾಜ್ಯದಲ್ಲ ಪದವೀಧರರಾಗಿರುವ ವಿದ್ಯಾರ್ಥಿಗಳಿಗೂ ಅವಕಾಶ ಮಾಡಿ ಅಲ್ಲಿಗೆ ಕಳಿಸಿ ಕೊಟ್ಟರೆ ಒಳ್ಳೆಯದು ಎಂಬ ಸಲಹೆಯನ್ನು ಸಹ ಕೆಲವರು ಕೊಟ್ಟರು. ಅದು ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ ಎಂಬುದನ್ನು ಮಾತ್ರ ಇಲ್ಲಿ ಹೇಳುತ್ತೇನೆ.

ಆ ಮೇಲೆ ಮಾನ್ಯ ಹನುಮೇಗೌಡರು ಗ್ರಾಮಾಭಿವೃದ್ಧಿ ಮತ್ತು ಗ್ರಾಮ ಸ್ವೈರ್ಮಲ್ಯದ ವಿಷಯವಾಗಿ ಮಾತನಾಡುತ್ತಾ, ಪಂಚಾಯತಿಗಳು ಈ ಕೆಲಸಗಳನ್ನು ಜವಾಬ್ದಾರಿಯುತವಾಗಿ ನಿರ್ವಹಿಸುತ್ತಾ ಇಲ್ಲವೆಂದು ಹೇಳಿದರು. ನಾನಾದರೂ ಹೇಳುತ್ತೇನೆ–ಈ ಪಂಚಾಯತಿ ಸಂಸ್ಥೆಗಳಲ್ಲಿ ಎಲ್ಲೆಲ್ಲಿ ಒಳ್ಳೆಯ ಮುಖಂಡತ್ವ ಇದೆ, ಅಲ್ಲಿ ಉತ್ತಮವಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಮತ್ತು ಫ್ರೀ ಆಡಿಟ್ ಮಾಡತಕ್ಕ ವಿಷಯ ಮತ್ತು ಪಂಚಾಯತ ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ನೇರವಾಗಿ ಚುನಾವಣೆ ಮಾಡುವುದು ಒಳ್ಳೆಯದು ಎಂಬ ಸಲಹೆಯನ್ನು ಸಹ ಕೊಟ್ಟಿದ್ದಾರೆ. ಅದು ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳುತ್ತೇನೆ.

ಇನ್ನು ಡ್ರಿಂಕಿಂಗ್ ವಾಟರ್ ವಿಷಯದಲ್ಲಿ ಕೂಡ ಅವರು ಸುಮಾರು 5 ಕಡೆ ಸರಿಯಾದಂತಹ ಕೆಲಸವಾಗಿಲ್ಲವೆಂದು ಹೇಳಿದ್ದಾರೆ. ನಾನು ಅದನ್ನು ಶೀಘ್ರವಾಗಿ ತನಿಖೆ ಮಾಡಿಸುತ್ತೇನೆಂದು ಮಾತ್ರ ಹೇಳುತ್ತೇನೆ. ಮತ್ತು ಈಗಾಗಲೇ ಎಲ್ಲೆಲ್ಲಿ ಬಾವಿಗಳನ್ನು ತೆಗೆಯುವ ಅವಶ್ಯಕತೆ ಇದೆ ಅಲ್ಲಿ ಬಾವಿಗಳನ್ನು ತೆಗೆಯಬೇಕು ಮತ್ತು ಆಳಪಡಿಸುವಲ್ಲಿ ಆಳಪಡಿಸಬೇಕೆಂದು ತೀರ್ಮಾನ ಮಾಡಿದ್ದೇವೆ ಅದಲ್ಲದೆ ಟ್ಯಾಂಕ್ ಬೆಡ್‌ಗಳಲ್ಲಿ ಅತೀ ಕಡಿಮೆ ವೆಚ್ಚದಲ್ಲಿ ಬಾವಿಗಳನ್ನು ತೆಗೆದರೆ ಬರಗಾಲ ಪ್ರದೇಶಗಳಲ್ಲಿರತಕ್ಕಂತಹ ನೀರಿನ ಕೊರತೆಯನ್ನು ಸಹ ನೀಗಿಸಬಹುದೆಂಬುದನ್ನು ಮನಗಂಡು ನಾವು ಅಧಿಕಾರಿಗಳಿಗೆ ಈಗಾಗಲೇ ಸೂಕ್ತವಾದ ಆದೇಶವನ್ನು ಕೊಟ್ಟಿದ್ದೇವೆ.

ಹಾಗೆಯೇ ಮಾನ್ಯ ಸದಸ್ಯರಾದಂತಹ ಹೆಗರೆಯವರು ಬಡತನ ಮತ್ತು ಅಜ್ಞಾನವನ್ನು ಹೊಡೆದೋಡಿಸಲು ಸಮಾಜ ಕಲ್ಯಾಣ ಇಲಾಖೆಯಲ್ಲಿರತಕ್ಕಂತಹ ಅಧಿಕಾರಿಗಳು ಹೆಚ್ಚಿನ ಆಸ್ಥೆಯನ್ನು ವಹಿಸಬೇಕೆಂದು ಹೇಳಿದ್ದಾರೆ. ಅದರ ಜೊತೆಗೆ ಮಕ್ಕಳಿಗೆ ಕೊಡುವ ಸ್ಕಾಲರ್‌ಷಿಪ್ ಸಕಾಲದಲ್ಲಿ ಕೊಡಬೇಕು, ಅಧಿಕಾರಿಗಳಿಗೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ವಾಹನ ಸೌಕರ್ಯ ಒದಗಿಸಬೇಕು, ಮತ್ತು 18 ಪರ್‌ಸೆಂಟ್ ಹಣ ಟಿ. ಡಿ. ಬಿ. ಬಜೆಟಿನಲ್ಲಿ ಹರಿಜನರಿಗೋಸ್ಕರ ಇಡುವಂತೆ ಮಾಡಬೇಕೆಂದು ಹೇಳಿದರು. ನಾವು ಈ ವಿಷಯದಲ್ಲಿ ಆರ್ಡರನ್ನು ಹೊರಡಿಸಿ ಯಾವುದಾದರೂ ಒಂದು ವರ್ಷದಲ್ಲಿ 18 ಪರ್‌ಸೆಂಟ್ ಖರ್ಚು ಮಾಡುವುದಕ್ಕಾಗದಿದ್ದರೆ, ಅದನ್ನು ಸೇರಿಸಿ ಮುಂದಿನ ವರ್ಷ ಹರಿಜನಾಭಿವೃದ್ಧಿಗೆ ಖರ್ಚ ಮಾಡಬೇಕೆಂದು ಈಗಾಗಲೇ ಹೇಳಿದ್ದೇವೆ.

ಆಮೇಲೆ ಮಾನ್ಯ ಪ್ರಭಾಕರವರು ಮಾತನಾಡುತ್ತಾ, ಕಳೆದ 10 ವರ್ಷಗಳಿಂದ ಸಮಾಜ ಕಲ್ಯಾಣ ಇಲಾಖೆಯಲ್ಲಿ ಹಣ ಖರ್ಚಾಗದೆ ಉಳಿದಿದೆ ಎಂದು ಹೇಳಿದ್ದಾರೆ. ನಾನಾದರೂ ಹೇಳುತ್ತೇನೆ ಈ ಸಾರಿ ಯಾವ ರೀತಿಯಲ್ಲಿಯೂ ಹಣ ಲ್ಯಾಪ್ಸ್ ಆಗದಂತೆ ನೋಡಿಕೊಂಡು ವಿನಿಯೋಗಿಸಿದ್ದೇವೆ. ಇದನ್ನು ಮಾಡುವುದಕ್ಕೆ ನಮ್ಮ ಮಾನ್ಯ ಮುಖ್ಯಮಂತ್ರಿಯವರು, ಹಣಕಾಸಿನ ಸಚಿವರು, ಹಣಕಾಸಿನ ಕಾರ್ಯದರ್ಶಿಯವರು ಮತ್ತು ನಮ್ಮ ಇಲಾಖೆಯಲ್ಲಿರತಕ್ಕಂತಹ ಎಲ್ಲಾ ಅಧಿಕಾರಿ ವರ್ಗದವರು ಸಹ ಸಹಕರಿಸಿ ಸಹಾಯ ಮಾಡಿದ್ದಾರೆ. ಆದ್ದರಿಂದ ಅವರು ಇವರೆ ಬಗ್ಗೆ ಮಾಡಿದಂತಹ ಅತ್ಯುತ್ತಮವಾದ ಕೆಲಸಕ್ಕೆ ನಾನು ನನ್ನ ಕೃತಜ್ಞತೆಯನ್ನು ಸಲ್ಲಿಸಲು ಇಷ್ಟಪಡುತ್ತೇನೆ. ಒಳ್ಳೆಯ ಕೆಲಸವನ್ನು ಮಾಡಿದಾಗ ಯಾರೇ ಆಗಲೀ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ ಎಂದು ಹೇಳತಕ್ಕದ್ದು ಅದು ಮಾನವೀಯತೆ, ಮಾನವ ಧರ್ಮ ಎಂದು ನಾನು ತಿಳಿದುಕೊಂಡಿದ್ದೇನೆ.

1–30 P.M.

ಶ್ರೀ ಕೆ. ಪ್ರಭಾಕರ್.—ಕಳೆದ 10 ವರ್ಷಗಳಲ್ಲಿ ಹೇಗೆ ಲ್ಯಾಪ್ಸ್ ಆಯಿತೆಂಬ ಬಗ್ಗೆ ಚಿತ್ರ ಕೊಡುವುದಕ್ಕೆ ನಾನು ಹೇಳಿದ್ದು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಶ್ರೀ ಆರ್ಮುಗಂ ಅವರು ಮಾತನಾಡುತ್ತಾ ಸರ್ಕಾರದವರು ಪ್ರಾಮುಖ್ಯವಾದಂಥ ಎಲ್ಲಾ ಇಲಾಖೆಗಳಿಗೂ ಸರಿಯಾದಂಥ ಪ್ರಾತಿನಿಧ್ಯ ಈ ವರ್ಷದಲ್ಲಿ ಅಸ್ಪೃಶ್ಯತಾ ಜನಾಂಗದವರಿಗೆ ದೊರಕಿಲ್ಲವೆಂದು ಹೇಳಿದ್ದಾರೆ. ಸರ್ಕಾರದವರು ಪ್ರತಿ ವರ್ಷವೂ ಅದಕ್ಕೆ ಸಂಬಂಧಪಟ್ಟಹಾಗೆ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಹರಿಜನ ಗಿರಿಜನರಿಗೆ ಇತ್ತೀಚೆಗೆ ವಿದ್ಯಾಭ್ಯಾಸವನ್ನು ಹೆಚ್ಚಿನ ರೀತಿಯಲ್ಲಿ ದೊರಕುತ್ತಾ ಇದೆ. ಆದರೆ ಹೆಚ್ಚಿನ ಜನರಿಗೆ ಎಷ್ಟು ಸಿಗಬೇಕೋ ಅಷ್ಟು ಸಿಗದೇ ಇರುವುದಕ್ಕೆ ಕಾರಣ ನಮ್ಮಲ್ಲಿ ಸಾಕಷ್ಟು ಅರ್ಹತೆ ಇರತಕ್ಕಂಥ ವಿದ್ಯಾವಂತರು ಇಲ್ಲದೇ ಇರುವುದು ಆಗಿದೆ. ಈ ಕ್ಷೇತ್ರದಲ್ಲಿ ಹೆಚ್ಚಿನ ರೀತಿಯಲ್ಲಿ ಅವರು ಎಷ್ಟೇ ಭಾವನಾಪರವಶರಾಗಿ ಹೇಳಿದರೂ ಕೂಡ ನಮ್ಮಲ್ಲಿ ಕ್ಯಾಂಡಿಡೇಟ್ಸ್ ಇದ್ದರೆ ಆ ವಿದ್ಯಾಭ್ಯಾಸ ಸೌಕರ್ಯವನ್ನು ಕೊಡಬೇಕೇ ಹೊರತು ಕ್ಯಾಂಡಿಡೇಟ್ಸ್ ಇಲ್ಲದೇ ಇದ್ದಾಗ ಆ ರೀತಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳಬಹುದು. ಕೆಲವು ಕಡೆಗಳಲ್ಲಿ ಈಗಾಗಲೇ ಸರ್ಕಾರದವರು ಸಾಧ್ಯ

(ಶ್ರೀ ಕೆ. ಪ್ರಭಾಕರ್)

ವಾದಷ್ಟನ್ನು ಕೊಟ್ಟಿದ್ದಾರೆ. ಇನ್ನು ಕೆಲವು ಸದಸ್ಯರು ಮಾತನಾಡುತ್ತಾ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಹೆಚ್ಚಿಗೆ ನಮಗೆ ಇಷ್ಟಿಷ್ಟು ಸ್ಥಾನಗಳು ದೊರಕಬೇಕಾಗಿತ್ತೆಂದು ಹೇಳಿದ್ದಾರೆ. ನಾನಾದರೂ ಅದಕ್ಕೆ ಉತ್ತರವಾಗಿ ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಸುಮಾರು 10 ವರ್ಷಗಳಿಂದಲೂ ಈ ಇಲಾಖೆಯಲ್ಲಿ ಡೈರೆಕ್ಟ್ ರೆಕ್ರೂಟ್‌ಮೆಂಟ್ ಆಗದೇ ಇದ್ದುದರಿಂದ, ಪ್ರೊಮೋಷನ್ಸ್ ಕೊಡುತ್ತಾ ಇದ್ದುದರಿಂದ ಹರಿಜನ ಹಾಗೂ ಗಿರಿಜನರಿಗೆ ನ್ಯಾಯ ದೊರಕಬೇಕಾದ ಪ್ರಮಾಣದಲ್ಲಿ ಸ್ಥಾನಮಾನಗಳು ದೊರಕುತ್ತಾ ಇಲ್ಲ. ಡೈರೆಕ್ಟ್ ರೆಕ್ರೂಟ್‌ಮೆಂಟನ್ನು ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ಮಾಡಬೇಕು. ಕೊರತೆ ಏನಾಗಿದೆಯೋ ಅದನ್ನು ತುಂಬಬೇಕು. ಈಗಾಗಲೇ ನಾವು ಒಂದು ತೀರ್ಮಾನಕ್ಕೆ ಬಂದಿದ್ದೇವೆಂದು ಹೇಳುವುದಕ್ಕೆ ಈ ಸಂದರ್ಭದಲ್ಲಿ ನಾನು ಇಷ್ಟಪಡುತ್ತೇನೆ. ಮತ್ತೆ ನಾಲ್ಕೈದು ಜನ ಮಾನ್ಯ ಸದಸ್ಯರು ಮಾತನಾಡುತ್ತಾ ಅಸ್ಪೃಶ್ಯತೆಯ ವಿಷಯದಲ್ಲಿ ಪೋಲೀಸರು ಸಾಕಷ್ಟು ಶ್ರದ್ಧೆಯನ್ನು ವಹಿಸುತ್ತಾ ಇಲ್ಲ. ಕೇವಲ 7 ಜನರನ್ನು ಮಾತ್ರ ಅಸ್ಪೃಶ್ಯತೆ ನಿವಾರಣೆಗೋಸ್ಕರವಾಗಿ ಪ್ರೊಪೊಗ್ಯಾಂಡಿಸ್ಟ್‌ಗಳಾಗಿ ನೇಮಕಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಪ್ರತಿ ಜಿಲ್ಲೆಯಲ್ಲಿಯೂ ಇಬ್ಬರು ಪ್ರಚಾರಕರು ಇರಬೇಕೆಂದು ಅವರು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅದನ್ನು ಒಂದು ಪೈಲೆಟ್ ಸ್ಕೀಂ ಆಗಿ ಒಂದು ಪ್ರಯೋಗವಾಗಿ ತೆಗೆದುಕೊಂಡಿದ್ದೇವೆ. ಅವರ ಜೊತೆಗೆ ನಮ್ಮ ಸಹೋದ್ಯೋಗಿಗಳು ಮೊದಲ್ಗೊಂಡು ಎಲ್ಲಾ ಜಿಲ್ಲೆಗಳಲ್ಲಿಯೂ ಈ ಅಸ್ಪೃಶ್ಯತಾ ನಿವಾರಣಾ ಪ್ರಚಾರಕರೂ ಬೇಕಾಗಿದೆ. ಆದ್ದರಿಂದ ಕನಿಷ್ಠಪಕ್ಷ 20 ಜನರು ಇರಬೇಕೆಂದು ಈಗಾಗಲೇ ವಿಚಾರಮಾಡುತ್ತಿದ್ದಾರೆ. ಆ ವಿಷಯದಲ್ಲಿಯೂ ಸರ್ಕಾರದವರು ತೀವ್ರವಾಗಿ ಪರಿಶೀಲನೆಮಾಡಿ ಜಿಲ್ಲೆಗೆ ಒಬ್ಬೊಬ್ಬ ಪ್ರಾಪೊಗ್ಯಾಂಡಿಸ್ಟನ್ನು ಈಗ ನೇಮಕ ಮಾಡಬೇಕೆಂಬುದೇ ಸರ್ಕಾರದ ಇಚ್ಛೆಯಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರ ಜೊತೆಗೆ ಅಸ್ಪೃಶ್ಯತಾ ನಿವಾರಣೆಯಾಗಬೇಕಾದರೆ ಅಡಿಷನಲ್ ಹೋಂ ಸೆಕ್ರೆಟರಿ, ಹಾಗೂ ಸಮಾಜ ಕಲ್ಯಾಣ ಸೆಕ್ರೆಟರಿಯವರಿಗೆ ಕಮಿಷನರ್ ಹುದ್ದೆ ಕೊಟ್ಟರೂ ಸೂಪರ್ ಟೈಂ ಸ್ಕೇಲ್ ಕೊಡಬಾರದು, ಅವರಿಗೆ ಅಡಿಷನಲ್ ಹೋಂ ಸೆಕ್ರೆಟರಿ ಪವರ್ಸ್ ಕೊಡಬೇಕೆಂದು ಮಾನ್ಯ ಶ್ರೀ ಆರ್ಮುಗಂ ಅವರು ಹೇಳಿದ್ದಾರೆ. ಮತ್ತು ಅಸ್ಪೃಶ್ಯತಾ ನಿವಾರಣೆಗೆ ಸಂಬಂಧಪಟ್ಟ ಇತರ ಸದಸ್ಯರೂ ಸಹ ಹಾಗೆಯೇ ಹೇಳಿದ್ದಾರೆ. ನಾನು ಹೇಳುವುದಿಷ್ಟೇ. ಅಸ್ಪೃಶ್ಯತೆ ಎಂಬುದೇನಿದೆ ಅದು ಬಡತನ, ಅಜ್ಞಾನಗಳಿಂದ ಕೂಡಿ ಸರ್ವಶಕ್ತ, ಸರ್ವಾಂತರ್ಯಾಮಿಯಾಗಿದೆ. ಎಲ್ಲಾ ಜಾತಿಗಳಲ್ಲೂ ಈ ಅಸ್ಪೃಶ್ಯತೆ ಎಂಬುದು ಇರುತ್ತದೆ. ಆದರೆ ಅದು ಕಾಲಕ್ರಮೇಣ ಹೋಗಲೇ ಬೇಕು. ನಾನು ಹಿಂದೆಯೇ ಈ ವಿಚಾರದ ಬಗ್ಗೆ ಒಂದು ಸಪ್ಲಿಮೆಂಟರಿ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದ್ದೇನೆ. ಮೂಲಭೂತವಾದ ಹಕ್ಕುಗಳನ್ನು ರಾಜ್ಯಾಂಗದಲ್ಲಿ ಸೇರಿಸಿದ ಕೂಡಲೇ ಅವು ಜಾರಿಗೆ ಬರುತ್ತವೆ ಎಂಬುದಾಗಿ ನಾನು ಹೇಳುವುದಿಲ್ಲ. ಸಮಾಜದ ಮಾರಲ್ ಅಂಡ್ ಸೋಷಿಯಲ್ ಕಾನ್ಷನ್ಸ್ ಏನಿದೆ ಅದರಂತೆ ಆ ಹಕ್ಕುಗಳನ್ನು ನಾವು ಮೊದಲು ಕಾಪಾಡಬೇಕು. ಅವರ ಹಕ್ಕುಗಳು ಫಂಡಮೆಂಟಲ್ಸ್ ಅಥವಾ ಅಲ್ಲವೋ ಆದರೂ ಅವನ್ನು ಕಾಪಾಡಬೇಕು. ಅವರಿಂದ ಈ ಜನಾಂಗದವರಿಗೆ ಹೆಚ್ಚಿಗೆ ಉಪಯೋಗವಾಗಬೇಕು. ಇದನ್ನು ಬರೀ ಕಾನೂನಿನಿಂದಲೇ ಪಾಲನೆ ಮಾಡುತ್ತೇವೆಂದು ಹೇಳಿದರೆ ಅದು ಸಾಧ್ಯವಾಗುವುದಿಲ್ಲ. ಅಜ್ಞಾನ ಇರುವ ದೇಶದಲ್ಲಿ ಜಾತಿಗಳು ಉದ್ಭವವಾಗುವುದು ಸಹಜ. ಅಸ್ಪೃಶ್ಯತೆ ಹೋಗಬೇಕಾದರೆ ಸಮಾಜ ಸುಧಾರಕರು, ಸಮಾಜ ಮುಖಂಡರು, ಹಾಗೂ ಅಧಿಕಾರಿಗಳು—ಇವೆಲ್ಲರೂ ಕೂಡ ಹೆಚ್ಚಿನ ರೀತಿಯಲ್ಲಿ ಆಸಕ್ತಿಯನ್ನು ವಹಿಸಿ ಈಗ ಏನು ನಮ್ಮ ಸಮಾಜಕ್ಕೆ ಒಂದು ಕಳಂಕ ಇದ್ದ ಹಾಗೆ ಇದೆ ಅದನ್ನು ಹೋಗಲಾಡಿಸುವುದಕ್ಕೆ ಎಲ್ಲರೂ ಪ್ರಯತ್ನಮಾಡಬೇಕು. ಆಗ ಅದು ನಿವಾರಣೆಯಾಗುತ್ತದೆ. ಮಾನ್ಯ ಶ್ರೀ ಬಂಗಿಯವರು ಮಾತನಾಡುತ್ತಾ ಹೇಳಿದರು. ಸುಮಾರು 200 ಬಾವಿಗಳಲ್ಲಿ ಎಷ್ಟೋ ಬಾವಿಗಳ ಹತ್ತಿರ ಗಡಿಗೆಗಳನ್ನು ಹಿಡಿದುಕೊಂಡು ಹರಿಜನರ ಹೆಣ್ಣುಮಕ್ಕಳು ನಿಂತಿರುತ್ತಾರೆ. ನಮ್ಮ ಮಂತ್ರಿಗಳು ಆ ಚಿತ್ರವನ್ನು ನೋಡಬೇಕೆಂದು ಹೇಳಿದರು. ಅದು ಇರಬಹುದು. ಇನ್ನು ಕೆಲವರು ಸುಮಾರು ಎಷ್ಟೋ ಮೈಲಿಗಳ ದೂರದವರೆಗೆ ಕುಡಿಯುವ ನೀರಿನ ಬಾವಿಗಳು ಇಲ್ಲವೆಂದು ಹೇಳಿದರು. ಅದಕ್ಕೆ ಸರ್ಕಾರದವರು ಯಾವ ರೀತಿಯಲ್ಲಿ ಉತ್ತರ ಕೊಡಬೇಕೋ ಆ ರೀತಿಯಲ್ಲಿ ಅದಕ್ಕೆ ಕೊಟ್ಟಿದ್ದಾರೆ. ನನ್ನ ಹತ್ತಿರ ಮತ್ತೆ ಬಂದು ಕೆಲವರು ಹೇಳಿದರು. ಇರ್ರಿಗೇಷನ್ ವೆಲ್ಸ್‌ನಲ್ಲಿ ಕೆಲವು ಗ್ರಾಮಗಳಲ್ಲಿ ಹರಿಜನರು ನೀರು ತೆಗೆದುಕೊಳ್ಳುತ್ತೇವೆಂದರೆ ಅವರಿಗೆ ಪ್ರತ್ಯೇಕ ಬಾವಿಗಳಿಲ್ಲವೆಂದು. ನಾನು ಹೇಳಿದೆ ಮಾರಲ್ ಅಂಡ್ ಸೋಷಿಯಲ್ ಕಾನ್ಷನ್ಸ್ ಬೇಕು ಎಂಬುದಾಗಿ, ಯಾವ ಒಂದು ಸಮಾಜದಲ್ಲಿಯೇ ಆಗಲಿ, ಸಮಾಜದ ಜನರು ಅವರು ನಮ್ಮವರು, ನಮ್ಮ ದೇಶದವರು ಎಂಬ ಮನೋಭಾವನೆ ಅವರಲ್ಲಿ

ಬರಬೇಕು. ಆಗ ಯಾರೇ ಆಗಲಿ ಅವರಿಂದ ನೀರನ್ನು ಒಂದೇ ದಿವಸದಲ್ಲಿ ಒತ್ತಾಯಮಾಡಿ ಪಡೆಯಬಹುದು. ಪೋಲೀಸ್ ಅಧಿಕಾರಿಗಳಿಂದ ಯಾವ ಕಿರುಕುಳವೂ ಉಂಟಾಗಲಾರದು. ಶಾಶ್ವತವಾಗಿ ಅವರು ನೀರನ್ನು ಬಾವಿಗಳಿಂದ ತೆಗೆದುಕೊಳ್ಳುವುದಕ್ಕೆ ಬೇರೆಯಾವರೂ ಬೇಕಿಲ್ಲ, ಬೇರೆ ಅಧಿಕಾರಿಗಳೂ ಬೇಕಿಲ್ಲ. ಅವರು ನಮ್ಮ ಸಹೋದರರು ನಮ್ಮ ದೇಶದವರು ಎಂಬುದಾಗಿ ಹೇಳಿ ನೀರನ್ನು ತಗೆದುಕೊಳ್ಳಿ ಎಂಬುದಾಗಿ ಹೇಳಿದರೆ ಸಾಕು. ಸ್ವಾತಂತ್ರ್ಯ ಬಂದು 25 ವರ್ಷಗಳಾದರೂ ಇನ್ನೂ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲಿಕ್ಕಾಗಿಲ್ಲವೆಂದು ಕೆಲವರು ಹೇಳಿದರು. ಇತ್ತೀಚೆಗೆ ಒಂದೊಂದು ಜಾತಿಯವರೇ ಪ್ರತ್ಯೇಕವಾಗಿ ಬಾವಿಗಳನ್ನು ಕಟ್ಟುತ್ತಾ ಹೋಗುತ್ತಿದ್ದಾರೆ. ಆದರೂ ಇನ್ನೂ ಈ ಸಮಸ್ಯೆ ಬಗೆಹರಿದಿಲ್ಲ. ನಾರ್ತ್ ಕೆನರಾ ಮತ್ತು ಧಾರವಾಡದಲ್ಲಿ 4½ ಸಾವಿರಕ್ಕಿಂತ ಹೆಚ್ಚು ಬಾವಿಗಳಿವೆ. ನಮ್ಮ ಮೈಸೂರು ರಾಜ್ಯದಲ್ಲಿ 25 ಸಾವಿರ ಹಳ್ಳಿಗಳಿದ್ದರೆ 45 ಸಾವಿರಕ್ಕಿಂತ ಹೆಚ್ಚಿಗೇ ಬಾವಿಗಳಿವೆ. ಅಷ್ಟೊಂದು ಬಾವಿಗಳು ಏಕೆ ಬೇಕೆಂದು ನನಗನ್ನಿಸುತ್ತದೆ. ಆದರೂ ಕೂಡ ನಾನು ಆ ವಿಷಯದಲ್ಲಿ ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಬಹುಶಃ ಈ ಅಸ್ಪೃಶ್ಯತೆಯೆಂಬ ಒಂದು ಜಾಡ್ಯ ಏನಿದೆಯೋ ಅದು ಹೋಗಬೇಕಾದರೆ ಬಹುಶಃ ಸೇಕಡ 80 ರಷ್ಟು ಇರತಕ್ಕ ಸವರ್ಣೀಯರು ಏನಿದ್ದಾರೆ ಅವರು ಈ ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಪ್ರಯತ್ನದಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿ ಸೇಕಡ 20 ರಷ್ಟು ಇರುವ ಹರಿಜನರನ್ನು ಇದರಿಂದ ಮುಕ್ತರನ್ನಾಗಿ ಮಾಡಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಅಸ್ಪೃಶ್ಯರಲ್ಲಿ ಅಸ್ಪೃಶ್ಯತೆ ಇದೆಯೆಂದು ಹೇಳಿದರು.

ಶ್ರೀ ಎಚ್. ಎಸ್. ಸಿದ್ದಪ್ಪ.—ನಿಮ್ಮಲ್ಲಿ ಯಾರು ಇದ್ದಾರೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅಸ್ಪೃಶ್ಯತೆ ಎಂಬುದು ಒಂದು ರೀತಿಯಲ್ಲಿ ನೋಡಿದರೆ ಎಲ್ಲರಲ್ಲಿಯೂ ಇದೆ. ಬರೀ ಅಷ್ಟೇ ಅಲ್ಲ. ಮುಸಲ್ಮಾನರು, ಕ್ರೈಸ್ತರು, ಇತರ ಹಿಂದೂಗಳು ಮತಾಂತರ ಹೊಂದಿ ಬೇರೆ ಬೇರೆ ಹಳ್ಳಿಗಳಿಗೆ ಹೋಗಿ ಸೇರಿಕೊಂಡಿದ್ದಾರೆ. ಮಾನ್ಯ ಶ್ರೀ ಭಗವಾನ್ ದಾಸ್ ಎಂಬತಕ್ಕವರು ಇವರ ಬಗ್ಗೆ ಒಂದು ಗ್ರಂಥವನ್ನೇ ಬರೆದಿದ್ದಾರೆ. ಅಥರ್ನ್ ಎಂಬುವರು ಪಾಶ್ಚಿಮಾತ್ಯದೇಶದವರು. ಅವರೂ ಸಹ ಇವರ ಬಗ್ಗೆ ಒಂದು ದೊಡ್ಡ ಗ್ರಂಥವನ್ನೇ ಬರೆದಿದ್ದಾರೆ. ಇಂಡಿಯಾದೇಶದಲ್ಲಿ ಯಾರು ವ್ಯಾಪಾರ ಮಾಡುತ್ತಾರೋ ಅವರು ಎಡಗೈ ಎಂತಲೂ, ಯಾರು ವ್ಯವಸಾಯಮಾಡುತ್ತಾರೋ ಅವರು ಬಲಗೈ ಎಂತಲೂ ವಿಭಾಗಮಾಡಿದ್ದಾರೆಂದು ನಾನು ಮಾನ್ಯ ಶ್ರೀ ಸಿದ್ದಪ್ಪನವರಿಗೆ ಉತ್ತರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಷ್ಟನ್ನು ಹೇಳುತ್ತಾ, ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ದೇವೇಗೌಡರವರು ಕ್ರಾಷ್ ಪ್ರೋಗ್ರಾಂ ಮೇಲೆ ಮಾತನಾಡುತ್ತಿದ್ದಾಗ ಅವರು ಕೆಲಸದ ಅಳತೆಯಲ್ಲಿ ಹಣವನ್ನು ಕೊಡುತ್ತಿಲ್ಲ ಎಂಬುದಾಗಿ ಹೇಳಿದ್ದಾರೆ. ಅವರು ಹೀಗೆ ಮಾತನಾಡುತ್ತಿದ್ದ ಕಾಲದಲ್ಲಿ ಮೂರು ರೂಪಾಯಿಗಳನ್ನು ತೆಗೆದುಕೊಳ್ಳತಕ್ಕ ಕಡೆ ಒಂದು ರೂಪಾಯಿ ಕೆಲಸ ಕೂಡ ಆಗುತ್ತಿಲ್ಲ ಎಂಬುದಾಗಿ ಹೇಳಿದ್ದಾರೆ; ಆದರೆ ಈ ಎಸ್.ಎಫ್.ಡಿ.ಎ., ಎಂ.ಎಸ್.ಇ.ಎಲ್ ಮತ್ತು ಎನ್.ಆರ್.ಡಬ್ಲ್ಯು.ಎಸ್. ಈ ಸ್ಕೀಮುಗಳ ವಿಚಾರದಲ್ಲಿ ಅವರು ಮಾತನಾಡುತ್ತಾ ಈ ಮಾತುಗಳನ್ನು ಹೇಳಿದರು. ಆದರೆ ನಾನು ಹೇಳುತ್ತೇನೆ ಇಡೀ ಭಾರತಖಂಡದಲ್ಲೇ ಇತ್ತೀಚೆಗೆ ಈ ಕೆಲಸ ಕಾರ್ಯಗಳು ನಡೆಯುತ್ತಿರುವುದನ್ನು ನೋಡಿದರೆ ಇವುಗಳ ಅಭಿವೃದ್ಧಿ ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತಿಲ್ಲ ಎಂಬುದನ್ನು ನಾನು ಕೂಡ ಒಪ್ಪಿಕೊಳ್ಳಲೇಬೇಕು. ಏಕೆಂದರೆ ನನ್ನ ಸ್ವಭಾವ ಯಾವಾಗಲೂ "ಅಹುದಾದರುಹುದೆನ್ನಿ ಇಲ್ಲವಾದರೆ ಇಲ್ಲವೆನ್ನಿ" ಎಂಬುದು. ಆದರೆ ಈ ಯೋಜನೆಗಳ ಬಗ್ಗೆ ಮೊದಲೇನು ಜನರಲ್ಲಿ ಪ್ರಾರಂಭದಲ್ಲಿ ಒಂದು ಉತ್ಸಾಹ ಉತ್ತೇಜನಗಳಿದ್ದವು ಅವು ಇತ್ತೀಚೆಗೆ ಬಹಳ ಕಡಿಮೆಯಾಗಿವೆ. ಆದರೆ ಈ ರಾಷ್ಟ್ರೀಯ ಸಾಮುದಾಯಿಕ ವಿಸ್ತರಣಾಭಿವೃದ್ಧಿ ಯೋಜನೆ ಪ್ರಾರಂಭವಾದುದು 1952 ರಲ್ಲಿ. ಈ ಒಂದು ಕಲ್ಪನೆ ದಿವಂಗತ ಭಾರತರತ್ನ ಜವಹರಲಾಲ್ ನೆಹರೂರವರ ಗರ್ಭಾಂಬುಧಿಯಲ್ಲಿ ಜನಿಸಿತು. ಈ ಯೋಚನೆಯಿಂದ ದೇಶದಲ್ಲಿರತಕ್ಕ ಬಹುತರ ಸಮಸ್ಯೆಗಳು ಬಗೆಹರಿಯುತ್ತವೆಂದು ಅವರು ಭಾವಿಸಿದ್ದರು. ಇದೇ ರೀತಿಯಲ್ಲಿ ಭಗವಂತರಾಯಮೆಹ್ತಾ ಅವರು ಕೂಡ ಪಂಚಾಯತ್ ರಾಜ್ಯದ ಬಗ್ಗೆ ಒಂದು ವರದಿಯನ್ನು ಒಪ್ಪಿಸತಕ್ಕ ಕಾಲದಲ್ಲಿ ಅವರು ಈ ಸಂಸ್ಥೆಗಳು ರಾಜಕೀಯ ಮತ್ತು ಸಾಂಸ್ಕೃತಿಕ ಮತ್ತು ನೈತಿಕ ಬುನಾದಿಗಳ ಮೇಲೆ ನಿಲ್ಲುವಂತೆ ಮಾಡಬೇಕೆಂದು ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಆದರೆ ನಾನು ಹೇಳುತ್ತೇನೆ—ಪ್ರಾರಂಭದಲ್ಲಿ ಜನರಿಗೆ ಯಾವ ಉತ್ಸಾಹ ಪಂಚವಾರ್ಷಿಕ ಯೋಜನೆಯು ಪ್ರಾರಂಭದಲ್ಲಿ ಇತ್ತೋ ಅದು ದಿನಕ್ರಮೇಣ ಕಡಿಮೆಯಾಗುತ್ತಿದೆ. ಆದರೆ ಇದಕ್ಕೇನು ಕಾರಣ ? ಜನರಿಗೆ ಪ್ರಜಾಪ್ರಭುತ್ವದ ಮೇಲೆ ಇರತಕ್ಕ ಉಪೇಕ್ಷೆಯೋ ಅಥವಾ ಇನ್ನಾವ ಕಾರಣವೋ ಎಂಬುದನ್ನು ನಾವೀಗ ಪರಿಶೀಲನೆಮಾಡಬೇಕಾಗಿದೆ.

(ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ)

ಜನತೆ ಒಬ್ಬರಿಗೊಬ್ಬರಲ್ಲಿ ಒಂದು ಸೌಹಾರ್ದ ಹಾಗೂ ಪುರಸ್ಕಾರಭಾವನೆಗಳನ್ನು ತೋರಿಸದಿದ್ದರೆ, ಈ ದಿಶೆಯಲ್ಲಿ ಜನತೆ ಒಂದು ಸಕ್ರಿಯ ಪಾತ್ರವನ್ನು ವಹಿಸದಿದ್ದರೆ ನಮಗೆ ಯಾವ ಅಭಿವೃದ್ಧಿಕಾರ್ಯಗಳೂ ಸಿದ್ಧಿಸುವುದಿಲ್ಲ. ಭಾರತದಲ್ಲಿ ಎಲ್ಲಿ ಹೋಗಿ ನೋಡಲಿ ಕಡಮೆ ಆದಾಯದಲ್ಲಿ ಕೆಲಸ ಮಾಡತಕ್ಕ ಜನರೇ ಜಾಸ್ತಿಯಾಗಿ ಕಾಣುತ್ತಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಬೇಸಾಯದಲ್ಲಿ ತೊಡಗಿರತಕ್ಕ ಜನರು, ಸೆಲ್ಫ್ ಎಂಪ್ಲಾಯ್ಡ್ ಜನರು ಏನಿದ್ದಾರೆ ಇವರ ವರಮಾನ ಬಹಳ ಕೆಳಮಟ್ಟದಲ್ಲಿದೆ. ಅವರು ಅವರ ಕೆಲಸ ಕಾರ್ಯಗಳಿಗೆಲ್ಲಾ ಸಾಧ್ಯವಾದಷ್ಟುಗೂ ತಮ್ಮ ತಮ್ಮ ಸಂಬಂಧೀಕರನ್ನೇ ಇಟ್ಟುಕೊಂಡು ಕೆಲಸಗಳನ್ನು ನಡೆಸುತ್ತಾರೆ. ಅಂಥ ಕಡೆಯಲ್ಲೂ ಕೂಡ ಒಂದು ಮಿನಿಮಂ ವೇಜಸನ್ನು ಫಿಕ್ಸ್ ಮಾಡಲಾಗಿದ್ದರೂ ಇದು 'ಡಿಮ್ಯಾಂಡ್ ಅಂಡ್ ಸಪ್ಲೈ' ತತ್ವದ ಮೇಲೆ ಹೋಗುತ್ತದೆ. ಕೆಲವು ಕಡೆಗಳಲ್ಲಿ ಒಬ್ಬ ಮನುಷ್ಯನಿಗೆ ದಿನಕ್ಕೆ 60-70 ಪೈಸೆ ಕೂಲಿ ಸಿಕ್ಕಿದರೆ ಇನ್ನು ಕೆಲವು ಕಡೆಗಳಲ್ಲಿ ದಿನಕ್ಕೆ ಒಬ್ಬ ವ್ಯಕ್ತಿಗೆ 7-8 ರೂಪಾಯಿಗಳ ಕೂಲಿ ದೊರೆಯುತಕ್ಕ ನಿದರ್ಶನಗಳೂ ಇವೆ. ಈ ಕ್ರಾಷ್ ಪ್ರೋಗ್ರಾಮನ್ನು ಪ್ರಪ್ರಥಮವಾಗಿ ಪ್ರೊ: ದಾಂಡೇಕರ್ ಭಗವತಿ ಎನ್ನತಕ್ಕವರು ಪ್ರಾರಂಭ ಮಾಡಿದರು. ದೇಶದಲ್ಲಿರತಕ್ಕ ಸಣ್ಣ ಸಣ್ಣ ರೈತರ ಮತ್ತು ನಿರುದ್ಯೋಗಿಗಳ ಬವಣೆ ಪರಿಹಾರ ಮಾಡುವುದಕ್ಕಾಗಿ ಅವರು, ಈ ಒಂದು ಯೋಜನೆಯನ್ನು ಮಾಡಿದರು. ಆದರೆ ಈಗಿನ ಕಾಲಕ್ಕೆ ಇದರಲ್ಲಿ ಏನಾದರೂ ಲೋಪದೋಷಗಳಿವೆ ಎಂಬುದಾಗಿ ಕಂಡು ಬಂದರೆ ಅವುಗಳನ್ನು ನಾವೆಲ್ಲರೂ ಸೇರಿ ಸರಿಪಡಿಸಬೇಕಾದ್ದು ನಮ್ಮಗಳ ಕರ್ತವ್ಯ. ಆದರೆ ಕೆಲವು ಮಾನ್ಯ ಸದಸ್ಯರುಗಳು ಈ ಎನ್.ಆರ್.ಡಬ್ಲ್ಯು.ಎಸ್. ಸ್ಕೀಮಿನಲ್ಲಿ ಭೂಮಿಯನ್ನು ಕೊಡುವುದಕ್ಕೆ ಬದಲಾಗಿ ಈ ನೀರಿನ ತೊಂದರೆಗೆ ಸಿಕ್ಕಿರತಕ್ಕ 92 ಪಂಚಾಯಿತಿಗಳಿಗೆ ಲ್ಯಾಂಡ್ ರೆವಿನ್ಯೂ ಅಸ್ಸೆಸ್‌ಮೆಂಟ್ ಏಕೆ ಕೊಡಬಾರದೆಂದು ಹೇಳಿದ್ದಾರೆ. ಆದರೆ ಈ ಸಂದರ್ಭದಲ್ಲಿ ಇದೊಂದು ಪರಿಶೀಲನಾರ್ಹವಾದ ಉತ್ತಮ ಸಲಹೆ ಎಂದು ಹೇಳಿದರೆ ಸಾಕೆಂದು ಕಾಣುತ್ತದೆ. ಆದರೆ ನಾವು ಈ ಗ್ರಾಮಪಂಚಾಯಿತಿಗಳಿಗೆ ಗ್ರಾಂಟನ್ನು ಕೊಡತಕ್ಕ ಕಾಲದಲ್ಲಿ ಅವರಿಂದ ಎಲ್ಲಾ ಮುಚ್ಚಳಿಕೆಗಳನ್ನೂ ಮಾಡಿಕೊಂಡೇ ಕೊಟ್ಟರೂ ಅವುಗಳು ಅದರಂತೆ ನಡೆದುಕೊಳ್ಳುತ್ತಿಲ್ಲ. ಇಲ್ಲಿ ಕೆಲವು ಮಾನ್ಯ ಸದಸ್ಯರು ಹೇಳಿದಂತೆ ಕೆಲವು ಪಂಚಾಯಿತಿಗಳು ಉತ್ತಮವಾಗಿ ಕೆಲಸಮಾಡುತ್ತಿದ್ದರೆ ಇನ್ನು ಕೆಲವು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದನ್ನೆಲ್ಲಾ ಸರಿಪಡಿಸಬೇಕಾಗಿದೆ.

ಇನ್ನು ಇಲ್ಲಿಯವರೆಗೂ ಸಮಾಜ ಕಲ್ಯಾಣದ ಇಲಾಖೆ ಕಾಲೇಜ್ ಹಾಸ್ಟಲುಗಳನ್ನು ಕಟ್ಟಿಸತಕ್ಕ ಕೆಲಸವನ್ನು ಕೈಗೊಂಡಿರಲಿಲ್ಲ. ಆದರೆ ಈ ವರ್ಷ ಇದನ್ನೂ ಕೈಗೊಂಡು ತಾಲ್ಲೂಕ್ ಬೋರ್ಡ್‌ಗಳ ವಂತಿಕೆಯನ್ನೂ ಪಡೆದುಕೊಂಡು 62 ಕಾಲೇಜ್ ಹಾಸ್ಟೆಲುಗಳನ್ನು ಕಟ್ಟಿಸುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದೆ. ಆ 62ರಲ್ಲಿ ಬೆಂಗಳೂರು ನಗರದಲ್ಲಿ 2ನ್ನು ಕಟ್ಟಿಸಲಾಗುತ್ತಿದೆ. ಒಂದನ್ನು ಮೈಸೂರು ನಗರದಲ್ಲಿ ಕಟ್ಟಿಸಲಾಗುತ್ತಿದೆ. ಹಾಸನದಲ್ಲಿ ಸುಮಾರು 6 ಲಕ್ಷದ ವೆಚ್ಚದಲ್ಲಿ ಒಂದು ಜನರಲ್ ಕಾಲೇಜ್ ಹಾಸ್ಟೆಲನ್ನು ಕಟ್ಟುವುದಕ್ಕೆ ಸರ್ಕಾರ ಪ್ರಯತ್ನಗಳನ್ನು ನಡೆಸುತ್ತಿದೆ. ಇದಕ್ಕೆ ನಮ್ಮ ಮುಖ್ಯಮಂತ್ರಿಗಳ ಹಾಗೂ ಅರ್ಥ ಸಚಿವರ ಸಹಕಾರ ಪೂರ್ಣವಾಗಿ ದೊರಕಿದೆ. ಮುಂದೆ ಐದನೇಯ ಪಂಚವಾರ್ಷಿಕ ಯೋಜನೆಯಲ್ಲಿ ಒಂದೊಂದು ಜಿಲ್ಲೆಯ ಕಸಬೆಯಲ್ಲೂ ಒಂದೊಂದು ಇಂಥ ಹಾಸ್ಟಲನ್ನು ಕಟ್ಟಿಸಬೇಕೆಂಬ ಅಂದಾಜನ್ನು ಸರ್ಕಾರ ಇಟ್ಟುಕೊಂಡಿದೆ. ಅದರ ಒಂದು ಮೊದಲನೆಯ ಕಂತಾಗಿ ಈಗ ಈ ಕಾಲೇಜ್ ಹಾಸ್ಟಲುಗಳನ್ನು ಕಟ್ಟಿಸಲಾಗುತ್ತಿದೆ. ಈ ಸಮಾಜ ಕಲ್ಯಾಣ ಇಲಾಖೆಗೆ ಕೊಡತಕ್ಕ ಹಣ ಮತ್ತು ಬೇರೆ ಇಲಾಖೆಗಳಿಗೂ ಕೊಡತಕ್ಕ ಹಣದಲ್ಲಿ ಶೇ 18ರಷ್ಟನ್ನು ಹರಿಜನ ಗಿರಿಜನರಿಗೆ ಉಪಯೋಗವಾಗುವಂತೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಎಲ್ಲಾ ಇಲಾಖೆಗಳೂ ಸಹಕರಿಸುತ್ತಿವೆ. ಈ ಇಲಾಖೆಗೆ ಕೊಡುವ ಗ್ರಾಂಟು ಸಾಕಷ್ಟಿಲ್ಲವೆಂದು ಹೇಳಿದ್ದಾರೆ. ನಮ್ಮ ಇಲಾಖೆಗೆ ಏನು ಹಣ ಕೊಡುತ್ತಾರೋ ಅದು ಸಪ್ಲಿಮೆಂಟರಿ ಇನ್ ನೇಚರ್. ಆದರೂ ಗ್ರಾಂಟನ್ನು ಪ್ರತಿ ವರ್ಷ ಹೆಚ್ಚಿಸಿಕೊಂಡು ಬಂದಿದ್ದೇವೆ. 1971-72ರಲ್ಲಿ 411.26 ಲಕ್ಷ, 1972-73ರಲ್ಲಿ 5(2.36 ಲಕ್ಷ, 1973-74ರಲ್ಲಿ ಸುಮಾರು 678 ಲಕ್ಷ ರೂಪಾಯಿ ಹೀಗೆ ಕೊಡಲಾಗಿದೆ. ಈ ವರ್ಷ ನಾವು ಪ್ಲಾನ್‌ನಲ್ಲಿ ಒಟ್ಟು 200 ಲಕ್ಷ ಈ ಅಭಿವೃದ್ಧಿಗೆ ಇಟ್ಟಿದ್ದೇವೆ. ಈ ಇಲಾಖೆ ಒಳ್ಳೆಯದು ಮತ್ತು ಜನರ ಅಭಿವೃದ್ಧಿಗೆ ಕಾರಣವಾಗಿದೆ.

ಸರ್ವಿಸ್‌ನಲ್ಲಿ ಬಹುಶಃ ಕ್ಲಾಸ್ ಒಂದರಲ್ಲಿ ಒಟ್ಟು 1,924 ಜನರಿದ್ದರೆ ತಾರೀಖು 1-1-72ರಲ್ಲಿ ಷೆಡ್ಯೂಲ್ ಕ್ಯಾಸ್ಟಿನವರು 82 ಜನರಿದ್ದರು, ಇದು ಸೇಕಡ 4.6 ಪರ್ಸೆಂಟ್ ಆಯಿತು. ಕ್ಲಾಸ್ ಟು ಆಫೀಸರುಗಳು ಒಟ್ಟು 6,270 ಜನರಿದ್ದಾರೆ, ಅದರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿನವರು 302 ಜನರಿದ್ದಾರೆ, ಕ್ಲಾಸ್ ಮೂರರ ಆಫೀಸರುಗಳು ಒಟ್ಟು 2,11,566 ಜನರಿದ್ದು ಅದರಲ್ಲಿ ಷೆಡ್ಯೂಲ್ಡ್

ಕ್ಯಾಸ್ಟಿನವರು 15,766 ಜನರಿದ್ದಾರೆ, ಅಂದರೆ ಸೇಕಡ 4 ರಷ್ಟಾಯ್ತು. ಕ್ಲಾಸ್ ಫೋರ್‌ನಲ್ಲಿ ಸುಮಾರು ಒಟ್ಟು 43,879 ಜನರಿದ್ದಾರೆ, ಅದರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿನವರು 8,250 ಜನರಿದ್ದಾರೆ, ಸುಮಾರು ಸೇಕಡ 19 ಜನರಿದ್ದಾರೆ. ಹೀಗೆಯೇ ಷೆಡ್ಯೂಲ್ಡ್ ಟ್ರೈಬ್ಸ್ ಬಗ್ಗೆ ಕೂಡ ಬಹಳವಟ್ಟಿಗೆ ಇದೇ ಚಿತ್ರವಿದೆ.

ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಕೂಡ ಬಹುಶಃ ನಮ್ಮ ಇಲಾಖೆ ಹಣದಲ್ಲಿ ಸೇಕಡ 70 ಭಾಗ ಖರ್ಚು ಮಾಡುತ್ತಿದ್ದೇವೆ. ವಿದ್ಯಾಭ್ಯಾಸ ದೊರೆತರೆ ಅವರನ್ನು ಅಭಿವೃದ್ಧಿ ಮಾಡಲು ಸಾಧ್ಯ ಎಂದ ರಿತು ಇದಕ್ಕೆ ಹೆಚ್ಚು ಖರ್ಚುಮಾಡುತ್ತಿದ್ದೇನೆ. ಸುಮಾರು 7,371 ಜನರು 1972ರಲ್ಲಿ ಎಸ್.ಎಸ್.ಎಲ್.ಸಿ.ಗೆ ಕುಳಿತಿದ್ದರು, ಇವರು ಷೆಡ್ಯೂಲ್ಡ್ ಕ್ಯಾಸ್ಟಿನವರು, ಇದರಲ್ಲಿ ಶೇಕಡ 24 ರಷ್ಟು ಪಾಸಾಗಿದ್ದಾರೆ, ಹೆಣ್ಣುಮಕ್ಕಳು 2,478 ಜನರು ಕುಳಿತಿದ್ದರು, ಅವರಲ್ಲಿ ಸೇಕಡ 15.8 ಜನರು ಪಾಸಾಗಿದ್ದಾರೆ. ಷೆಡ್ಯೂಲ್ಡ್ ಟ್ರೈಬ್ಸ್ ಹುಡುಗರು 234 ಜನರು ಕುಳಿತಿದ್ದು, ಸೇಕಡ 48.6 ಜನರು ಪಾಸಾಗಿದ್ದಾರೆ. ಹೆಣ್ಣುಮಕ್ಕಳು 56 ಜನರು ಕುಳಿತಿದ್ದರು, ಅವರಲ್ಲೂ ಹೆಚ್ಚು ಮಂದಿ ಪಾಸಾಗಿದ್ದಾರೆ. ಲಿಟರಸಿ ಪರ್ಸೆಂಟೇಜ್ ಈಗ ಜಾಸ್ತಿಯಾಗಿದೆ. ಅಂಕಿಅಂಶ ಕೊಡಲು ಕಾಲ ಜಾಸ್ತಿ ಇಲ್ಲದಿರುವುದರಿಂದ ಹೆಚ್ಚಿಗೆ ಹೇಳುವುದಿಲ್ಲ.

ಕೊನೆಯದಾಗಿ ಹೇಳುತ್ತಾ ಮಾನ್ಯ ದೇವೇಗೌಡರು ಹಾಗೂ ಇತರ ಸದಸ್ಯರು ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಸಂಬಧಪಟ್ಟ ಹಾಗೆ ಚುನಾವಣೆ ವಿಷಯದಲ್ಲಿ ಮಾತನಾಡುತ್ತಿದ್ದರು, ನಿನ್ನೆ ಕೂಡ ವಿರೋಧ ಪಕ್ಷದ ನಾಯಕರು ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಚುನಾವಣೆ ಮಾಡಲೇ ಬೇಕು ಎಂಬು ಯಾವುದೇ ಕಾರಣದಿಂದ ಮಾಡುವುದಕ್ಕಾಗದಿದ್ದರೆ, ಬರಗಾಲ ಪರಿಸ್ಥಿತಿ ಇದೆ ಎಂದು, ಜನರು ಕೆಲಸ ಹುಡುಕಿಕೊಂಡು ವಲಸೆ ಹೋಗುತ್ತಿದ್ದಾರೆ ಎಂದು ಈ ಕಾರಣದಿಂದ ಚುನಾವಣೆ ಮಾಡುವುದಕ್ಕಾಗದಿದ್ದರೆ ಇರತಕ್ಕ ತಾಲ್ಲೂಕು ಅಭಿವೃದ್ಧಿ ಮಂಡಲಗಳು ಮತ್ತು ಪಂಚಾಯಿತಿಗಳ ಲೈಫನ್ನು ಮುಂದುವರಿಸಿ ಎಂದು ಕೂಡ ಅವರು ಸಲಹೆಯನ್ನು ಕೊಟ್ಟಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಪಕ್ಷಗಳು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ದೇವೇಗೌಡರಿಗೆ ಇಲ್ಲಿ ಬೋಧಿಸಬೇಕಾಗಿಲ್ಲ. ಪಕ್ಷಗಳು ಹೇಗಾದರೂ ಮಾಡಿಕೊಳ್ಳಬಹುದು. ಆದರೆ ಸರಕಾರ ನಿಷ್ಪಕ್ಷಪಾತವಾಗಿ ಪರಿಶೀಲಿಸಬೇಕು. ಈಗ ಚುನಾವಣೆಯನ್ನು ಮುಂದಕ್ಕೆ ಹಾಕಿದ್ದೇವೆ. ತಾತ್ಕಾಲಿಕವಾಗಿ ಹಾಗೆ ಮಾಡಿದ್ದೇವೆ. ಈಗ ಆಕ್ಟು ಪ್ರಕಾರ 6 ವರ್ಷ ಕಾಲ ಮುಂದುವರೆಸಬಹುದು. ಹಿಂದೆ ಎಕ್ಸ್‌ಟ್ರಾ ಆರ್ಡಿನರಿ ಸಂದರ್ಭದಲ್ಲಿ 8 ವರ್ಷ ಮುಂದುವರೆಸಿದ್ದಾರೆ. ಆ ರೀತಿ ಮುಂದುವರೆಸುವುದಕ್ಕಾಗುವುದಿಲ್ಲ, ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವವರು ಚುನಾವಣೆ ನಡೆಸಲೇಬೇಕು. ಅದನ್ನು ಸಕಾಲದಲ್ಲಿ ಮಾಡುತ್ತೇವೆ. ಬಹುಶಃ ಡಿಸೆಂಬರಿನಲ್ಲಿ ಮಾಡಲು ಪ್ರಯತ್ನ ಪಡುತ್ತೇವೆ. ಬರಗಾಲ ಪರಿಸ್ಥಿತಿ ಅಷ್ಟಾಗಿ ಸುಧಾರಿಸದಿದ್ದರೆ ಇನ್ನೂ ಸ್ವಲ್ಪ ದಿವಸ ಮುಂದಕ್ಕೆ ಹಾಕಬಹುದು. ಬಹುಶಃ ಒಂದೆರಡು ತಿಂಗಳು ಮುಂದೆ ಹೋಗಬಹುದು. ಸರಕಾರ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡುತ್ತಿದೆ, ಸೂಪರ್ ಸೀಡ್ ಮಾಡುತ್ತಿದೆ ಎಂದು ಹೇಳುತ್ತಿದ್ದಾರೆ. ನಾನಾದರೂ ಹೇಳುತ್ತೇನೆ, ಪ್ರಜಾಪ್ರಭುತ್ವದಲ್ಲಿ ನಮಗೆ ನಂಬಿಕೆಯಿದೆ, ಪಕ್ಷ ಹೇಳುವಂತೆ ಸರಕಾರ ನಡೆಸಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಆಕ್ಟಿನಲ್ಲಿ ಅಧಿಕಾರವಿರುವಂತೆ 6 ವರ್ಷ ಮುಂದುವರಿಸುವಿರಾ ಅಥವ ಮುಂಚೆ ಚುನಾವಣೆ ಮಾಡುವಿರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸೂಕ್ತ ತೀರ್ಮಾನವನ್ನು ಸಕಾಲದಲ್ಲಿ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈಗ ಸಕಾಲವಾಗಿದೆ, ಖಚಿತವಾದ ಅಭಿಪ್ರಾಯ ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅನಿರ್ದಿಷ್ಟ ಕಾಲ ಮುಂದಕ್ಕೆ ಹಾಕುವುದಿಲ್ಲ. ಪರಿಶೀಲಿಸಿ ಒಂದು ಅಖೈರು ತೀರ್ಮಾನಕ್ಕೆ ಬರುತ್ತೇವೆ ಎಂದು ಇಷ್ಟು ಮಾತ್ರ ಹೇಳುತ್ತೇನೆ.

2-00 P. M.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ತಾವು ತಮ್ಮ ಇಲಾಖೆಯ ಡಿಮ್ಯಾಂಡ್ ಬಗ್ಗೆ ಉತ್ತರ ಕೊಡುತ್ತಾ ಇದ್ದೀರಿ. ಈ ಚರ್ಚೆ ಪ್ರಾರಂಭವಾಗಿ ಅನೇಕ ದಿವಸಗಳು ಆಗಿವೆ. ಇಷ್ಟರವರೆಗೆ ಯಾವ ತೀರ್ಮಾನಕ್ಕೆ ಬರುವುದಕ್ಕೆ ಆಗಲಿಲ್ಲ. ಇದು ಪ್ರಜಾಪ್ರಭುತ್ವದ ಆರೋಗ್ಯಕರವಾದ ನಡವಳಿಕೆಗೆ ಹಿತಕರವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದರ ಸಾಧಕ ಬಾಧಕಗಳನ್ನು ನಾವು ಸೂಕ್ಷ್ಮವಾಗಿ ಪರಿಶೀಲನೆ ಮಾಡಿ ಅಂತಿಮವಾಗಿ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಒಂದು ತೀರ್ಮಾನವಿಲ್ಲದೆ ಹೇಳುವುದು ಅಷ್ಟು ಪ್ರಜಾಪ್ರಭುತ್ವದಲ್ಲಿ ಸುಲಭವಲ್ಲ. ಪ್ರಜಾಪ್ರಭುತ್ವದಲ್ಲಿ ನಮ್ಮನ್ನು ಎಲ್ಲರೂ ನೋಡುತ್ತಾರೆ. ನಮ್ಮ ತೀರ್ಮಾನಗಳನ್ನು ಒರೆ ಹಾಕುತ್ತಾರೆ, ಆದ್ದರಿಂದ ಇದನ್ನು ಪರಿಶೀಲನೆ ಮಾಡಿ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎಂದು ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಿಮ್ಮ ಮೇಲೆ ಕಪ್ಪು ಚುಕ್ಕೆ ಹಾಕತಕ್ಕ ಪ್ರಯತ್ನ ಮಾಡುತ್ತಿದ್ದಾರೆ. ಸಕಾಲ ಬಂದಾಗ ಚುನಾವಣೆ ಮಾಡಿ, ಚುನಾವಣೆಯಾಗುವವರೆಗೆ ಚುನಾಯಿತರಾಗಿರತಕ್ಕ ಪ್ರತಿನಿಧಿಗಳು ಆಡಳಿತ ಮಂಡಲಿಗಳನ್ನು ನಡೆಸುವುದಕ್ಕೆ ತಮ್ಮ ಖಚಿತ ಅಭಿಪ್ರಾಯ ಏನು ?

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಇದರ ಬಗ್ಗೆ ಒಂದು ಗೊತ್ತುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಈಗ ತಮ್ಮಿಂದ ಉತ್ತರ ಬಂದರೆ, ಅದರ ಅವಶ್ಯಕವಿಲ್ಲ. ಈಗ ಸ್ಪಷ್ಟವಾಗಿ ಸರ್ಕಾರದಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತೇವೆ. ಕೊಡುವುದಕ್ಕಾಗುವುದಿಲ್ಲ ಎಂದರೆ, ಮಾತ್ರ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ ; ಇದಕ್ಕೆ ಸಮಯ ಬೇಕು ಎಂದರೆ ನಾನು ಬೇಡ ಎಂದು ಹೇಳುವುದಿಲ್ಲ, ಇದರ ಬಗ್ಗೆ ಸರ್ಕಾರದಿಂದ ಸ್ಪಷ್ಟವಾದ ಉತ್ತರ ಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಮಂತ್ರಿಗಳು, ಅಸೆಂಬ್ಲಿ ಅಡ್ಜರ್ನ್ ಆಗುವುದರೊಳಗೆ ಅವರ ನಿರ್ದಿಷ್ಟ ನಿರ್ಣಯ ಏನು ಎಂದು ಹೇಳುವುದಾದರೆ, ಅಡ್ಡಿ ಇಲ್ಲ. ಅದು ಇಲ್ಲದಿದ್ದರೆ ರೂಲ್ 59ರ ಪ್ರಕಾರ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಇದರಲ್ಲಿ ಎರಡು ಇಷ್ಯೂ ಇದೆ, ಒಂದು ಚುನಾವಣೆಗಳನ್ನು ಮಾಡುವುದಕ್ಕೆ ಸಾಧ್ಯವಿದೆಯೇ ? ಸಾಧ್ಯವಿಲ್ಲದೆ ಹೋದರೆ ಈಗಿರುವ ತಾಲ್ಲೂಕು ಅಭಿವೃದ್ಧಿ ಮಂಡಲಿ ಮತ್ತು ಪಂಚಾಯಿತಿಗಳನ್ನು ಮುಂದುವರಿಸುತ್ತೀರಾ ? ಈ ಎರಡು ಇಷ್ಯೂ ಮೇಲೆ ಸ್ವಚ್ಛ ಹೃದಯ ಇಟ್ಟುಕೊಂಡಿದ್ದರೆ ಜಗ್ಗಿ ಹೇಳಿಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ನಾನು ಸಾಕಷ್ಟು ಮಾತುಗಳಲ್ಲ ಪದಗಳನ್ನು ಉಪಯೋಗಿಸಿ ಹೇಳಿದ್ದೇನೆ. ನಮಗೆ ಪ್ರಜಾಪ್ರಭುತ್ವದಲ್ಲಿ ಅಚಲವಾದ ನಂಬಿಕೆ ಇದೆ.

ಶ್ರೀ ಕೋಣಂದೂರು ಲಿಂಗಪ್ಪ.—ಚೈನಾದಲ್ಲಿ ಪೀಪಲ್ಸ್ ಡೆಮಾಕ್ರಸಿ ಇದೆ. ಆ ತರಹ ಪ್ರಜಾಪ್ರಭುತ್ವ ಇದ್ದರೆ ಹೇಳಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಚುನಾವಣೆಯ ವಿಷಯದಲ್ಲಿ ತೀರ್ಮಾನ ಹೇಳುತ್ತೀರೋ, ಅಥವಾ ಮಂತ್ರಿಮಂಡಲ ಬದಲಾವಣೆಯಾಗುತ್ತದೆ, ಅದಾದಮೇಲೆ ಇದರ ಬಗ್ಗೆ ತೀರ್ಮಾನವನ್ನು ಹೇಳುತ್ತೀರೋ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮುಂದೆ ಏನಾಗುತ್ತದೆ ಎಂದು ಭವಿಷ್ಯ ಹೇಳುವುದು ಯಾರ ಕೈಯಲ್ಲಿಯೂ ಇಲ್ಲ. ಭೂತ ಕಾಲದಲ್ಲಿ ಕಳೆದುಹೋಗಿರುವುದಕ್ಕೆ ಯೋಚನೆ ಮಾಡಬೇಡಿ. ಮುಂದೆ ಏನಾಗುತ್ತದೆ ಎಂದು ಯೋಚನೆ ಮಾಡಬಾರದು. ವರ್ತಮಾನಕಾಲದಲ್ಲಿ ಪರಿಸ್ಥಿತಿಗೆ ಅನುಸಾರವಾಗಿ ಯಾವರೀತಿ ನಡೆಯಬೇಕು ಅದನ್ನು ಕಲಿತುಕೊಳ್ಳೋಣ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗಾಗಲೇ ನಾನು ಮಾನ್ಯ ಸದಸ್ಯರಿಗೆ ಹೇಳಿದ್ದೇನೆ, ಚುನಾವಣೆಯನ್ನು ಮುಂದಕ್ಕೆ ಹಾಕಿದ್ದೇವೆ ಎಂದು. ಅದಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಕೂಡ ನಾವು ಒಳ್ಳೆಯ ರೀತಿಯಲ್ಲಿ ಪರಿಶೀಲನೆ ಮಾಡಿ ಅಂತಿಮವಾಗಿ ತೀರ್ಮಾನವನ್ನು ಅತಿ ಶೀಘ್ರವಾಗಿ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಭವಿಷ್ಯದ ಪ್ರಶ್ನೆ ಬೇಡ ಎಂದು ತಾಳ್ಮೆಯಿಂದ ಮಂತ್ರಿಗಳ ಭಾಷಣವನ್ನು ಗಲಾಟೆ ಇಲ್ಲದೆ ಕೇಳಿದ್ದೇವೆ. ಈ ಇಷ್ಯೂ ಅನ್ನು ಅವರ ಪಕ್ಷದ ಧೋರಣೆ ಎಂದು ತಿಳಿದುಕೊಂಡು ಹೇಳಿದರು. ಪಕ್ಷದ ಧೋರಣೆ ಎಂದರೆ ನಿಮ್ಮ ಪಕ್ಷದಲ್ಲಿ ನಡೆಯುವ ವ್ಯವಹಾರಕ್ಕೂ ನಮಗೂ ಸಂಬಂಧವಿಲ್ಲ. As a Government what are you going to do, spell out. ಈ ಇಷ್ಯೂ ಬಗ್ಗೆ ಶಾಸನ ಸಭೆ ಮುಗಿಯುವುದರೊಳಗೆ ಹೇಳುತ್ತೀರಾ, ಇಲ್ಲವೇ ಸ್ಪಷ್ಟೀಕರಣ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅತಿ ಶೀಘ್ರವಾಗಿ ಎಂದು ಹೇಳಿದರೆ, ಈ ಕಾಲದಲ್ಲಿ ಆಗಬಹುದು......

ಶ್ರೀ ಬಿ. ಪುಟ್ಟಸ್ವಾಮಯ್ಯ.—ಚುನಾವಣೆ ಆಗದೆ ಇರಬಹುದು ಎಂದು ಅರ್ಥವಾಗಬಹುದು. ಮಾನ್ಯ ಸಚಿವರು ಸ್ಪಷ್ಟವಾದ ವಿವರಣೆ ಕೊಡಬೇಕು, ಹೇಳಿಕೆ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ. -ಇದಕ್ಕಿಂತ ಹೆಚ್ಚಿಗೆ ಏನೂ ಹೇಳುವುದಕ್ಕೆ ಇಷ್ಟಪಡದೆ ಮಾನ್ಯ ಸದಸ್ಯರು ಸಂಬಂಧಪಟ್ಟ ಬೇಡಿಕೆಗಳು ಏನು ಇವೆ, ಅದಕ್ಕೆ ಒಪ್ಪಿಗೆ ನೀಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಸೆಕ್ಷನ್ (3)ರ ಪ್ರಕಾರ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡ ಬೇಕಾದರೂ ಇವರು ಹೇಳುವ ರೀತಿಯಲ್ಲಿ ಮಾಡುವುದಕ್ಕೆ ಬರುವುದಿಲ್ಲ. ಅದಕ್ಕೆ ಕಾನೂನು ತಿದ್ದು ಪಡಿ ಮಾಡಬೇಕಾಗುತ್ತದೆ. ಈ ಅಧಿವೇಶನದಲ್ಲಿ ಮಾಡುವುದಾದರೆ, ತಿದ್ದುಪಡಿಯನ್ನು ತರಲೇ ಬೇಕಾಗುತ್ತದೆ. ಇಲ್ಲದೇ ಹೋದರೆ, ಅಧಿವೇಶನ ಮುಗಿಯುವುದರೊಳಗೆ ಆರ್ಡಿನೆನ್ಸ್ ಮಾಡುವು ದಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಾರೆ ಎನ್ನುವ ಅನುಮಾನ ಬಂದಿದೆ. ನೀವು ಅಡ್ಮಿನಿಸ್ಟ್ರೇಟರನ್ನು ಮಾಡುವುದೇ ಸರಿ ಎನ್ನುವುದಾದರೆ ಕಾನೂನಿಗೆ ತಿದ್ದುಪಡಿ ತರಬೇಕಾಗುತ್ತದೆ. ಇಲ್ಲದಿದ್ದರೆ ಮಾಡುವುದಕ್ಕೆ ಆಗುವುದಿಲ್ಲ. ಅಧಿವೇಶನ ಮುಗಿದ ಮೇಲೆ ಮಾಡೋಣ ಎನ್ನುವ ಉದ್ದೇಶ ಇಟ್ಟು ಕೊಂಡಿದ್ದ ಹಾಗೆ ಕಾಣುತ್ತದೆ. ಆದ್ದರಿಂದ ಈ ಅಧಿವೇಶನದಲ್ಲಿಯೇ ಸರ್ಕಾರದಿಂದ ಒಂದು ತೀರ್ಮಾನ ಬೇಕು ಎಂದು ಕೇಳುವುದು.

ಅಧ್ಯಕ್ಷರು.—ಅವರು ಉತ್ತರ ಕೊಡಲಿಕ್ಕೆ ನಿರಾಕರಿಸುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಅಧಿವೇಶನ ಮುಗಿಯುವುದರೊಳಗೆ ಒಂದು ತೀರ್ಮಾನ ಮಾಡುತ್ತೀರೋ ಇಲ್ಲವೋ ?

ಶ್ರೀ ಎಚ್. ಡಿ. ದೇವೇಗೌಡ.—ವಿರೋಧಪಕ್ಷದವರು ಎಕ್ಸ್‌ಟ್ರಿಮಿಟೀಸ್‌ಗೆ ಹೋಗುತ್ತಾರೆ ಎಂದು ತಾವು ಒಂದೊಂದು ಸಾರಿ ವಿವೇಕ ಹೇಳುತ್ತೀರಿ. ಈ ಅಧಿವೇಶನ ಇನ್ನೂ 20ದಿವಸ ನಡೆಯ ಬಹುದು. ಅಧಿವೇಶನ ಮುಗಿದ ಮೇಲೆ ಆರ್ಡಿನೆನ್ಸ್ ಮೂಲಕ ಮಾಡುತ್ತೇವೆ ಎಂದು ಹೇಳಿದರೆ ಅದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ನಿಮ್ಮ ವೈಯುಕ್ತಿಕ ಅಭಿಪ್ರಾಯ ಏನು ಎಂದು ನಾವು ತಿಳಿದುಕೊಂಡಿದ್ದೇವೆ, ನಿಮ್ಮ ಮನಸ್ಸಿನ ಮೇಲೆ ನೋವು ಮಾಡಬೇಕು ಎಂದು ಇಲ್ಲ. ಆದ್ದರಿಂದ ಶಾಸನ ಸಭೆಯನ್ನು ಮುಂದೂಡುವುದಕ್ಕೆ ಮುಂಚೆ ಈ ವಿಷಯದಲ್ಲಿಸ್ಪಷ್ಟೀಕರಣ ನೀಡಲಿ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗಾಗಲೆ ಉತ್ತರ ಹೇಳಿದ್ದೇನೆ, ಸರ್ಕಾರ ಪಕ್ಷಾತೀತ ವಾದಂಥಾದ್ದು. ಕಾನೂನಿನ ಚೌಕಟ್ಟಿನೊಳಗೆ ಯಾವ ತೀರ್ಮಾನವನ್ನು ತೆಗೆದುಕೊಳ್ಳಬೇಕೋ ಅ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಸಾಧ್ಯವಾದಷ್ಟು ಈ ಅಧಿವೇಶನದ ಸಂದರ್ಭದಲ್ಲಿ ಆ ತೀರ್ಮಾನವನ್ನು ಹೇಳುವುದಕ್ಕೆ ಸರ್ವಪ್ರಯತ್ನ ಮಾಡುತ್ತೇವೆ ಎಂದು ನಾನು ಹೇಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ತಾಲ್ಲೂಕು ಬೋರ್ಡುಗಳಿಗೆ ಖರ್ಚು ಮಾಡತಕ್ಕ ಹಣದಲ್ಲಿ ಶೇಕಡ 18 ಅನ್ನು ತಾವು ಖರ್ಚು ಮಾಡಬೇಕು ಎಂದು ಸರ್ಕಾರದ ಹುಕುಂ ಇದೆ. ಏತಕ್ಕೆ ಖರ್ಚು ಮಾಡ ಬೇಕು ಎನ್ನುವುದರ ಬಗ್ಗೆ ಆಬ್ಲಿಗೇಟರಿ ಡ್ಯೂಟೀಸ್ ನಲ್ಲಿ ಮೊದಲನಿಂದಲೂ ಇದನ್ನು ವಾಲಂಟರಿ ರೂಪದಲ್ಲಿ ಎಂದು ತಿಳಿದುಕೊಂಡು ಆ ದುಡ್ಡನ್ನು ಖರ್ಚುಮಾಡುತ್ತಾ ಇಲ್ಲ. ಈ ಬಗ್ಗೆ ಅವರು ಖರ್ಚುಮಾಡುವುದನ್ನು ಹೆಚ್ಚಿಸಿ, ಕಂಪಲ್ಸರಿಯಾಗಿ ಖರ್ಚುಮಾಡಬೇಕು ಎಂದು ಸರ್ಕಾರ ಹುಕುಂ ಮಾಡಬೇಕು ಎಂದು ನಾನು ಸಲಹೆ ಕೊಡುತ್ತೇನೆ. ಆ ಬಗ್ಗೆ ಖಚಿತವಾದ ಉತ್ತರ ಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಗುಜರಾತ್ ಮತ್ತು ಪಂಜಾಬ್‌ನಲ್ಲಿ ಈ ರೀತಿ ಮಾಡಿ ದ್ದಾರೆ ಎಂದು ಕೇಳಿದ್ದೇನೆ. ಮಾನ್ಯ ಸದಸ್ಯರೂ ಸಹ ನಿನ್ನೆ ಮಾತನಾಡುತ್ತಾ ಹೇಳಿದ್ದಾರೆ. ಬಹುಶಃ ಇದು ಡಿಸ್ಕ್ರಿಷನರಿ ಫಂಕ್ಷನ್ಸ್ ಎಂದು ಉಳಿದರೆ ಹೆಚ್ಚಿನ ರೀತಿಯಲ್ಲಿ ಆಸಕ್ತಿಯನ್ನು ವಹಿಸಿ ಹಣವನ್ನು ಖರ್ಚುಮಾಡದೆ ಇರಬಹುದು. ಆದ್ದರಿಂದ ಇದನ್ನು ಆಬ್ಲಿಗೇಟರಿ ಫಂಕ್ಷನ್ಸ್ ಮಾಡ ಬೇಕು ಎಂದು ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳಿಗೆ ಒಂದು ವಿಷಯ ವನ್ನು ನಾನು ಗಮನಕ್ಕೆ ತರಬೇಕಾಗಿದೆ, 18 ಪರ್ಸೆಂಟ್ ಎಂ. ಎರ್. ಎ. ಗೆ ಎಂದು ಏನು ಹೇಳುತ್ತಾರೋ ಆ ವಿಷಯದಲ್ಲಿ ಉತ್ತರ ಕೊಡುವಾಗ ಪ್ಲಾನ್ ಮತ್ತು ನಾನ್ ಪ್ಲಾನ್ ಸ್ಕೀಂನಲ್ಲಿ ಎಲ್ಲಾ ಡಿಪಾರ್ಟ್‌ಮೆಂಟಿಗೂ 18 ಪರ್ಸೆಂಟ್ ಇಡಬೇಕು ಎಂದು ಪ್ಲಾನಿಂಗ್ ಕಮಿಷನ್‌ನಿಂದ

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಡೈರೆಕ್ಷನ್ ಇದೆ. ಕಡ್ಡಾಯವಾಗಿ ಮಾಡುತ್ತೇನೆ ಎಂದು ಉತ್ತರ ಹೇಳಲಿಲ್ಲ. 5ನೇ ಪಂಚವಾರ್ಷಿಕ ಯೋಜನೆಯಲ್ಲಿ 1,000 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೀರಿ. ಅದರಲ್ಲಿ 18 ಪರ್ಸೆಂಟ್ ಎಂದರೆ 180 ಕೋಟಿ ರೂಪಾಯಿಗಳನ್ನು ವೀಕರ್ ಸೆಕ್ಷನ್ಸ್, ಬ್ಯಾಕ್‌ವರ್ಡ್ ಕ್ಲಾಸ್, ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಖರ್ಚುಮಾಡತಕ್ಕ ಪ್ರಯತ್ನ ಮಾಡುತ್ತೇವೆಂದು ಹೇಳಲಿಲ್ಲ, ದಯವಿಟ್ಟು ಇದನ್ನು ಕ್ಲಾರಿಫೈ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇಲಾಖೆಗೆ ಕೊಡತಕ್ಕ ಗ್ರ್ಯಾಂಟ್ಸ್, ಸಪ್ಲಿಮೆಂಟರಿ ಗ್ರಾಂಟ್ಸ್ ಎಲ್ಲವೂ ಕೂಡ ಅಭಿವೃದ್ಧಿ ಇಲಾಖೆಗಳು ಖರ್ಚು ಮಾಡಬೇಕು ಎನ್ನುವುದೇ ನಮ್ಮ ಸರ್ಕಾರ, ಕೇಂದ್ರ ಸರ್ಕಾರ ಮತ್ತು ನಮ್ಮೆಲ್ಲರ ಆಸೆ.

ಶ್ರೀ ಆರ್. ಎಸ್. ಪಾಟೀಲ್. ನಮ್ಮ ದೇಶದಲ್ಲಿ ಪಂಚಾಯತಿಗಳು ನಿಷ್ಕ್ರಿಯವಾಗತಕ್ಕ ಗತಿಗೆ ಬರುತ್ತಿವೆ, ಬರಬೇಕಾದ ಬಾಕಿ ವಸೂಲು ಮಾಡುವ ಬಗ್ಗೆ ವ್ಯವಸ್ಥೆಯಿಲ್ಲ. ಆದ್ದರಿಂದ ಬರತಕ್ಕದ್ದು ಬರದೆ ಬಾಕಿ ಉಳಿದಿದೆ, ನಿಷ್ಕ್ರಿಯವಾಗಿದೆಯೆಂದು ಹೇಳುತ್ತೇನೆ. ಡ್ರೈನೇಜ್ ಕೆಲಸದ ಬಗ್ಗೆ ಮೌಲ್ಯ ಮಾಪನ ಮಾಡುವ ಸಲುವಾಗಿ ಯಾವ ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಎಚ್. ಡಿ ದೇವೇಗೌಡ.—ತಮ್ಮ ಅಭಿಪ್ರಾಯದಲ್ಲಿ ಸೂಪರ್‌ಸೀಡ್ ಮಾಡಿ ಅಡ್ಮಿನಿಸ್ಟ್ರೇಟರ್ ಹಾಕಿದರೆ ವಸೂಲುಮಾಡುತ್ತಾರೆ ಎಂದು ನಿಮ್ಮ ಅರ್ಥ. ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟು ನೋಡಿದರೆ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ್ದು ಎಷ್ಟು ಬಾಕಿ ಎಂಬುದು ಗೊತ್ತಾಗುತದೆ. ಅಧಿಕಾರಿಗಳು ವಸೂಲು ಮಾಡುವುದು ಎಷ್ಟು ಎಂಬುದು ಗೊತ್ತಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಈಗ ಇರತಕ್ಕ ಪರಿಸ್ಥಿತಿಯಲ್ಲಿ ತಾಲ್ಲೂಕು ಬೋರ್ಡುಗಳು ಮತ್ತು ಪಂಚಾಯತಿಗಳ ಪೋಸ್ಟ್ ಆಡಿಟ್ ಕ್ರಮ ಏನು ಇದೆ ಇದರಿಂದ ತಾಲ್ಲೂಕು ಬೋರ್ಡಿನಲ್ಲಿ ಲಕ್ಷಾಂತರ ರೂಪಾಯಿ ಆಡಿಟ್ ಆಗದೆ ಇದೆ. ಅದನ್ನು ತಪ್ಪಿಸಿ ಸಮರ್ಪಕವಾಗಿ ಕೆಲಸ ನಡೆಯಬೇಕಾದರೆ ಮುನಿಸಿಪಾಲಿಟಿಯಲ್ಲಿ ಇರುವಹಾಗೆ ಪ್ರೀ ಆಡಿಟ್ ಸಿಸ್ಟಂ ಜಾರಿಗೆ ತರುವುದು ಸೂಕ್ತವಲ್ಲವೇ ? ಎರಡನೇಯ ಅಭಿಪ್ರಾಯ ಹಾಸನ್ ಟೌನ್‌ನಲ್ಲಿ ಇರುವ ಹರಿಜನ ಹಾಸ್ಟಲ್ ಬಗ್ಗೆ ನಿಲುವಳಿ ಸೂಚನೆ ಬಂದಿದೆ. ಹಾಸ್ಟಲ್ ಭಾಗದಲ್ಲಿ ಅನೇಕ ಸಂಸಾರಿ ಮನೆಗಳು ಇವೆ. ಮನೆಗೆ ಸಂಬಂಧವಾದ ಅನೇಕ ಕಲಹಗಳು ನಡೆಯುತ್ತಿರುತ್ತವೆ. ಆದ್ದರಿಂದ ಹಾಸ್ಟಲ್‌ಗಳನ್ನು ಸಂಸಾರಿ ಮನೆಗಳಿಗೆ ದೂರದಲ್ಲಿ ಮಾಡುವುದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ, ಯಾವರೀತಿ ಅಡಚಣೆ ಇರುವುದಿಲ್ಲ. ಮಧ್ಯದಲ್ಲಿ ಇರುವ ಹಾಸ್ಟಲ್ ಬೇರೆ ಕಡೆಗೆ ವರ್ಗಾಯಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ಪಾಟೀಲ್‌ರು ಕೇಳತಕ್ಕ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ, ಉತ್ತರ ಕೊಡಬೇಕು. ವಸೂಲಾತಿ ಬಗ್ಗೆ ಸರ್ಕಾರ ಏನು ಆಲೋಚನೆ ಮಾಡಿದೆ ? ಇನ್ನೊಂದು ನೆರೆ ರಾಜ್ಯದಲ್ಲಿ ಇರುವಂತೆ ಮೈಸೂರು ರಾಜ್ಯದಲ್ಲಿ ಜಿಲ್ಲಾಪರಿಷತ್ತುಗಳನ್ನು ರಚನೆ ಮಾಡುವುದಕ್ಕೆ ಸರ್ಕಾರದವರು ಯೋಚನೆ ಮಾಡಿದ್ದಾರೆಯೇ ? ಹಿಂದೆ ಇದರಬಗ್ಗೆ ಒಂದು ಬಿಲ್ ಇಂಟರ್‌ಡ್ಯೂಸ್ ಆಗಿರುವುದು ನೆನಪು ಇದೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇರತಕ್ಕ ಎರಡು ಟೈರ್ ಸಿಸ್ಟಂ ಏನು ಇದೆ ಪಂಚಾಯತಿಗಳು ಮತ್ತು ತಾಲ್ಲೂಕು ಬೋರ್ಡು ಮಂಡಲಿಗಳು ಅವುಗಳ ಮೂಲಕ ಚೆನ್ನಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡೋಣ, ಆಮೇಲೆ 3 ಟೈರ್ ಸಿಸ್ಟಂ ಇರಬೇಕೇ ಬೇಡವೇ ಎಂಬುದನ್ನು ಯೋಚನೆ ಮಾಡೋಣ.

MADAM SPEAKER.—I will put the demands to the Vote of the House. The question is :

"That a sum not exceeding Rs. 6,06,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 21 'Rural Development.'"

"That a sum not exceeding Rs. 6,19,66,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 25. 'Community Development' etc.,"

"That a sum not exceeding Rs 14,39,37,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 27 'Miscellaseous, Social and Developmental Organisation'."

The motion was adopted and the demands were granted.

DEMAND NOS. 17 AND 37 AND 17A.

SRI A. R. BADARINARAYANA (Minister for Education).—Madam, on the recommendation of the Governor, I beg to move:

"That a sum not exceeding Rs. 67,01,40,000 inclusive of the sum granted 'on account' be granted to the Government to defray the charges which will come in the course of payment during the financesl year ending 31st day of March 1974, in respect of Demand No. 17. 'Education (exluding Youth Services)'."

Madam, on the recommendation of the Governor, I beg to move:

"That a sum not exceeding Rs. 1,98,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 37. 'Stationery and Printing'."

MADAM SPEAKER.—Motion moved:

"That a sum not exceeding Rs. 67,01,40,000, inclusive of the some granted 'on account' be granted to the Government to defray the charges which will come in course of payment during the financil year ending 31st day of March 1974, in respect of Demand No. 17. 'Education (excluding Youth Services)'."

"That a sum not exceeding Rs. 1,98,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 37. 'Stationery and Printing'."

SRI V. S. KOUJALGI (Minister of State for Youth Services):—Madam, on the recommendation of the Governor, I beg to move:

"That a sum not exceeding Rs. 60,01,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 17-A. 'Youth Services'."

MADAM SPEAKER.—Motion moved:

"That a sum not exceeding Rs. 60,01,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 17-A. 'Youth Services'."

Mr. Deve Gowda will initiate the Debate.

ಶ್ರೀ ಎಚ್. ಡಿ. ದೇವೇ ಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಣಿಯವರೇ, ಈ ವಿದ್ಯಾ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಈ ಮನೆ ಮುಂದೆ ಒಪ್ಪಿಗೆಗಾಗಿ ಶ್ರೀಮಾನ್ ಬದರಿನಾರಾಯಣ್‌ರವರು ಇಟ್ಟಿದ್ದಾರೆ. ಈ ವಿದ್ಯಾಭ್ಯಾಸ ಇಲಾಖೆ ಬಗ್ಗೆ ಚರ್ಚೆ ಮಾಡತಕ್ಕ ಕಾಲದಲ್ಲಿ ನಮ್ಮ ವಿದ್ಯಾಭ್ಯಾಸದ ಇಂದಿನ ಪರಿಸ್ಥಿತಿಯ ಬಗ್ಗೆ ಪ್ರಪ್ರಥಮವಾಗಿ ಹೇಳುವುದಾದರೆ ನಮ್ಮ ವಿದ್ಯಾ ಮಂತ್ರಿಗಳು ಬಹುಶಃ ಈ ಇಲಾಖೆಗೆ ಹೆಚ್ಚು ಹೊರೆಯನ್ನು ಹೇರಲಿಕ್ಕೆ ಬಹಳ ಸೌಮ್ಯ ಸ್ವಭಾವದವರಾಗಿರುವುದರಿಂದ ಅವರಿಗೆ ಕಷ್ಟವಿದೆ ಎಂದು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ ನಾನು ಮೊದಲೇ ಹೇಳಿದೆ. ವಿದ್ಯಾಭ್ಯಾಸದ ಇಲಾಖಾ ಮಂತ್ರಿಗಳು ಬಹಳ ಒಳ್ಳೆಯವರು ಎಂದು. ನಿಜ. ಅವರಿಗೆ ಮಂತ್ರಿಯಾಗಬೇಕು ಎನ್ನುವ ಆಸೆ ಇತ್ತು ಅಂತ ಕಾಣುತ್ತದೆ.

ಶ್ರೀ ಎ. ಆರ್. ಬದರಿನಾರಾಯಣ್.—ನನಗೆ ಆ ಆಸೆ ಏನೂ ಇಲ್ಲ. ನನಗೆ 67 ವಯಸ್ಸಾಗಿರುವಾಗ ಈಗ ಯಾವ ಆಸೆ ಇರುತ್ತದೆ ?

ಶ್ರೀ ಎಚ್. ಡಿ. ದೇವೇ ಗೌಡ.—ಅವರ ಆಸೆ ಏನು ಇತ್ತು ಅದು ಪೂರೈಸಿ ಸಂತೃಪ್ತರಾಗಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ನಾನು ಅವರ ಮೇಲೆ ಅಂಥಾದ್ದು ಯಾವುದನ್ನೂ ಅಪಾದನೆ ಮಾಡಲಿಕ್ಕೆ ತಯಾರಿಲ್ಲ. ಆದರ ಒಂದೇ ಒಂದು ಅಪಾದನೆ ಏನೆಂದರೆ ಅವರ ಸಹೃದಯ ಏನು ಇದೆ ಅದು ಈ ಬೃಹತ್ ಇಲಾಖೆಯನ್ನು ಅವರ ಹತೋಟಿಯಲ್ಲಿ ಇಟ್ಟುಕೊಳ್ಳುವುದು ಕಷ್ಟ ಇದೆ. ಈ ವಿದ್ಯಾಭ್ಯಾಸದ ಇಲಾಖೆ ಅನ್ನುವುದು ಬಹಳ ವಿಸ್ತಾರವಾದುದು. ಇದನ್ನು ನಿರ್ವಹಣೆ ಮಾಡಬೇಕಾದರೆ ಒಂದು ಸಾರಿ ಆರೋಗ್ಯ ಸಚಿವರು ಹೇಳಿದ್ದು ನನಗೆ ಜ್ಞಾಪಕ ಇದೆ. ಅದನ್ನು ಪುನಃ ಉಚ್ಚಾರಣೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಒಂದು ವಿಷಯ ಹೇಳುವುದಾದರೆ ಹಾವು ಬುಸಗುಟ್ಟದೇಹೋದರೆ ಹುಡುಗರು ಹೊಡೆಯುವುದಕ್ಕೆ ಷುರು ಮಾಡುತ್ತಾರೆ, ಅದು ಬುಸುಗುಟ್ಟಲೇ ಬೇಕು. ಅದೇ ರೀತಿ ತಮ್ಮ ಬುದ್ಧಿವಂತಿಕೆಯನ್ನು ಮೆಚ್ಚಿದರೂ ಕೂಡ ಅದರಲ್ಲಿ ಸ್ವಲ್ಪವಾದರೂ ಸಹ ಕಠಿಣ ಹೃದಯ ಇರಬೇಕು ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತೇನೆ. ಈವೊತ್ತು ತಾವು 67 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಈ ಸಭೆಯ ಮುಂದೆ ಬೇಡಿಕೆಯನ್ನು ಮಂಡಿಸಿದ್ದೀರಿ. ಇಂದು ನಮಗೆ ಸ್ವಾತಂತ್ರ್ಯ ಬಂದು 25 ವರ್ಷಗಳಾದರೂ ಕೂಡ ನಮ್ಮ ದೇಶದಲ್ಲಿ ವಿದ್ಯಾವಂತರ ಸಂಖ್ಯೆ ಕೇವಲ 27 ರಿಂದ 28 ಪರ್ಸೆಂಟ್ ಹೆಚ್ಚೆಂದರೆ 30 ಪರ್ಸೆಂಟ್‌ಗಿಂತ ಹೆಚ್ಚಾಗಿರಲಾರದು. ಈ ರೀತಿ 30 ಪರ್ಸೆಂಟ್ ಜನಕ್ಕೆ ವಿದ್ಯಾಭ್ಯಾಸ ನಮ್ಮ ಜನತೆಗೆ ದೊರಕಿದೆ ಎಂದರೆ ಇನ್ನು ಉಳಿದ 70 ಪರ್ಸೆಂಟ್ ಜನ ಹೆಬ್ಬೆಟ್ಟು ಒತ್ತುವವರು ಇದ್ದಾರೆ. ನಮ್ಮ ಈ ವರ್ಷದ ಸ್ವಾತಂತ್ರ್ಯದ ಬೆಳ್ಳಿ ಹಬ್ಬದ ಸಮಾರಂಭದಲ್ಲಿ ಇದನ್ನು ಎದುರಿಸಬೇಕಾಗಿದೆ, ಇಲ್ಲದೇ ಹೋದರೆ ನಮ್ಮ ಪ್ರಜಾಪ್ರಭುತ್ವ ಆರೋಗ್ಯಕರವಾಗಿ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಈ 70 ಪರ್ಸೆಂಟ್ ಅವಿದ್ಯಾವಂತರನ್ನು ಶೋಷಣೆ ಮಾಡಲಿಕ್ಕೆ ಈ 30 ಪರ್ಸೆಂಟ್ ಜನ ಏನು ಇದ್ದಾರೋ ಅವರು ರುಜು ಹಾಕುವುದಿಲ್ಲ. ಪುಡಾರಿ ಕೆಲಸ ಮಾಡುತ್ತಿದ್ದಾರೆ. ಈ 30 ಪರ್ಸೆಂಟ್ ವಿದ್ಯಾವಂತರು ಅನಿಸಿಕೊಂಡಂಥಾವರು ಸಾಮಾನ್ಯವಾಗಿ ರುಜು ಹಾಕತಕ್ಕಂಥ ಶಕ್ತಿ ಇದ್ದವರು ಮೊದಲುಗೊಂಡು ರಾಷ್ಟ್ರಾಧ್ಯಕ್ಷರವರೆಗೂ ಕೂಡ ಈ 70 ಪರ್ಸೆಂಟ್ ಇರುವ ಅವಿದ್ಯಾ

ವಂತರನ್ನು ಹಂತಹಂತವಾಗಿ ಶೋಷಣೆ ಮಾಡುತ್ತಿದ್ದಾರೆ. ಇದಕ್ಕಾಗಿ ನಾನು ವಿಷಾದ ಪಡಬೇಕಾಗಿದೆ. ಈ ಒಂದು ದಿಶೆಯಲ್ಲಿ ನಮ್ಮ ದೇಶದಲ್ಲಿ ಸಾಕಷ್ಟು ವಿದ್ಯಾಭ್ಯಾಸದ ಪ್ರಗತಿ ಆಗಿಲ್ಲ, ಆದುದರಿಂದ ಮಾನ್ಯ ವಿದ್ಯಾ ಮಂತ್ರಿಗಳು ತಮ್ಮ ಮಾನಸ್ಸನ್ನು ಅತ್ತ ಕಡೆ ಹರಿಸಬೇಕು ಎಂದು ಹೇಳುತ್ತೇನೆ. ಈವೊತ್ತು ತಾವು ಅಧಿಕಾರಕ್ಕೆ ಬಂದಿರುವುದರಿಂದ ಈ ಬಗ್ಗೆ ಸ್ವಲ್ಪ ಸಂಕ್ಷಿಪ್ತವಾಗಿ ಹೇಳುವುದಕ್ಕೆ ಇಷ್ಟಪಡುತ್ತೇವೆ.

ಈ ಪ್ರೀಪ್ರೈಮರಿ ಎಜುಕೇಷನ್ ಬಗ್ಗೆ ಹೇಳುವುದಾದರೆ ಇದಕ್ಕೆ ಒಂದು ಯೂನಿಫಾರಂ ಆಗಿ ಗ್ರಾಂಟ್ ಇನ್ ಕೋಡ್ ತರುತ್ತೇವೆ ಎಂದು ಹೇಳಿದಿರಿ. ಒಂದು ವರ್ಷವಾದರೂ ಕೂಡ ತಂದಿಲ್ಲ. ಇದರಲ್ಲಿ ಏನು ತೊಂದರೆ ಇದೆ ಎನ್ನುವುದು ಗೊತ್ತಾಗಲಿಲ್ಲ. ಇದು ಈಗ ಯಾವ ಹಂತದಲ್ಲಿದೆ ತಿಳಿಸಿ. ಈವೊತ್ತಿನ ದಿವಸ ಪ್ರೈಮರಿ ಎಜುಕೇಷನ್ ಮತ್ತು ಪ್ರೀಪ್ರೈಮರಿ ಎಜುಕೇಷನ್ ಇವೆರಡೂ ವಿದ್ಯಾಭ್ಯಾಸಕ್ಕೆ ಬೇಸಿಕ್ ಫೌಂಡೇಷನ್ ಇದ್ದ ಹಾಗೆ. ಮೇಲಾಗಿ ಈ ಎಜುಕೇಷನ್‌ಗೆ ಇದು ಒಂದು ತಳಹದಿ ಇದ್ದ ಹಾಗೆ. ಇದರಲ್ಲಿ ಈ ಒಂದು ಭದ್ರತೆ ಇಲ್ಲದೇ ಹೋದರೆ ಈ ವಿದ್ಯಾಭ್ಯಾಸ ನೀವು ನಿರೀಕ್ಷಿಸಿದ ಮಟ್ಟದಲ್ಲಿ ಬೆಳೆಯುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತೇನೆ. ಈ ಒಂದು ದಿಶೆಯಲ್ಲಿ ತಮ್ಮ ಕಾರ್ಯವನ್ನು ಚುರುಕುಗೊಳಿಸುತ್ತಾರೆ ಎನ್ನುವ ಆಸೆ ಇದೆ. ಈವೊತ್ತಿನ ದಿವಸ ಈ ಒಂದು ಪ್ರೈಮರಿ ಎಜುಕೇಷನಗೆ ಕೊಡಬೇಕಾದಂಥ ಗ್ರಾಂಟ್ ಅದರಲ್ಲೂ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ನಿರೀಕ್ಷಿಸಿದಷ್ಟು ಮಟ್ಟಿಗೆ ದೊರೆಯುತ್ತಾ ಇಲ್ಲ. ಈ ಕಾರ್ಯದಲ್ಲಿ ತಮ್ಮ ಒಂದು ಕರ್ತವ್ಯವನ್ನೂ ಕೂಡ ಚುರುಕುಗೊಳಿಸಬೇಕು ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಈವೊತ್ತು ಪ್ರೈಮರಿ ಎಜುಕೇಷನ್ ಎಷ್ಟು ಮುಖ್ಯವೋ ಅಷ್ಟೇ ಪ್ರೀಪ್ರೈಮರಿ ಎಜುಕೇಷನ್ ಕೂಡ ಮುಖ್ಯವಾದುದು. ಪ್ರಿಪ್ರೈಮರಿ ಎಜುಕೇಷನ್‌ಗೆ ಬಂದರೆ ಅದರ ಪರಿಸ್ಥಿತಿಯೂ ಕೂಡ ಉತ್ತಮವಾಗಿಲ್ಲ. ಏತಕ್ಕೆಂದರೆ ಪ್ರೀಪ್ರೈಮರಿ ಎಜುಕೇಷನ್ ಇದು ನಗರ ಪ್ರದೇಶದಲ್ಲಿ ಹೆಚ್ಚಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಪ್ರೀಪ್ರೈಮರಿ ಎಜುಕೇಷನ್‌ಗೆ ಇನ್ನೂ ಸಾಕಷ್ಟು ಉತ್ತೇಜನ ಕೊಡುವುದಾದರೆ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಆಗದೇ ಇದ್ದರೂ ಕೂಡ ಅಲ್ಪಸ್ವಲ್ಪವಾಗಿಯಾದರೂ ಬೆಳೆಯುವುದಕ್ಕೆ ಸಾಧ್ಯ ಇದೆ. ಇದು ಹೆಚ್ಚಿಗೆ ಇರತಕ್ಕಂಥಾದ್ದು ನಗರ ಪ್ರದೇಶಗಳಲ್ಲಿ. ತಾಲ್ಲೂಕು ಬೋರ್ಡ್ ವತಿಯಿಂದ ನಡೆಸುವುದಾಗಲಿ, ಮಹಿಳಾ ಮಂಡಲಿಯಿಂದ ನಡೆಸುವುದಾಗಲಿ ಅದು ಅಷ್ಟೊಂದು ಉತ್ತೇಜನ ಕಾರಿಯಾಗಿಲ್ಲ. ಆದರೆ ಪ್ರೈಮರಿ ಎಜುಕೇಷನ್‌ನಲ್ಲಿ ನೋಡಿದರೆ ಇದು ಕಾತುರದಲ್ಲಿ ದೊಡ್ಡದಾಗಿ ಬೆಳೆದಿದೆಯೇ ಹೊರತು ಗುಣಮಟ್ಟದಲ್ಲಿ ಚೆನ್ನಾಗಿಲ್ಲ. ಆದುದರಿಂದ ಈ ಬಗ್ಗೆ ಒಂದು ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಇದಕ್ಕೆ ಎಷ್ಟೇ ಹಣ ಖರ್ಚಾದರೂ ಪರವಾಯಿಲ್ಲಾ ಅದಕ್ಕೆ ಹಣ ಒದಗಿಸಬೇಕೆಂದು ಹೇಳುತ್ತೇನೆ. ಏತಕ್ಕೆಂದರೆ ಪ್ರೈಮರಿ ಎಜುಕೇಷನ್ ಈವೊತ್ತಿನ ದಿವಸ ಇರತಕ್ಕಂಥ ಪರಿಸ್ಥಿತಿ ನೋಡಿದರೆ ನಾವು ತಲೆತಗ್ಗಿಸಬೇಕಾಗುತ್ತದೆ. ನಮ್ಮ ಹಿಂದಿನ ಸಹೋದ್ಯೋಗಿಗಳಾದ ಶ್ರೀಮಾನ್ ಶಂಕರೇಗೌಡರು ಈ ಬಗ್ಗೆ ಹೇಳುತ್ತಿದ್ದರು. ಇದಕ್ಕೆ ಪೀಠೋಪಕರಣಗಳು, ಇನ್ನೂ ಇತರ ಉಪಕರಣಗಳು ಇಲ್ಲ, ಆದುದರಿಂದ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಆಗಲಿಲ್ಲ ಎಂದು. ಅವರು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದುದನ್ನು ಕೇಳಿದ್ದೇನೆ. ಈವೊತ್ತಿನ ದಿವಸ ಈ ದೇಶದಲ್ಲಿ ಈ ಬಗ್ಗೆ ಏನು ಪ್ರಗತಿಯನ್ನು ಸಾಧಿಸಿದ್ದೀರಿ ಎನ್ನುವುದನ್ನು ನಾವು ಆಲೋಚನೆ ಮಾಡಬೇಕು. ನೀವು ಕೊಟ್ಟಿರತಕ್ಕಂಥ ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ನೋಡಿದ್ದೇನೆ. ತಾವು ಈ ಪ್ರೈಮರಿ ಶಾಲೆಗಳಿಗೆ ಎಷ್ಟು ಹಣವನ್ನು ಒದಗಿಸಿದ್ದೀರಿ ಎನ್ನುವುದನ್ನು ನೋಡಿದ್ದೇನೆ. ಎಲ್ಲ ವಿಷಯಗಳನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಇಂಟರ್‌ನ್ಯಾಷನಲ್ ಎಜುಕೇಷನ್ ಇಯರ್‌ನಲ್ಲಿ ಏನು ಹೇಳಿದ್ದೀರಿ ಎಂದರೆ ಈ ಬಗ್ಗೆ ಸಾಧ್ಯವಾದಷ್ಟು ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದೀರಿ. ಆದರೆ ಈವೊತ್ತು ತತ್ರಾಪಿ ನಮ್ಮ ರಾಜ್ಯದಲ್ಲಿ ಇರತಕ್ಕಂಥಾದ್ದನ್ನು ನೋಡಿದರೆ ಈ ಡೈರೆಕ್ಟೊರೇಟ್ ಸಾಕಷ್ಟು ದೊಡ್ಡದಾಗಿ ಬೆಳೆದಿದೆ. ನೀವು ಈ ಅಡ್ಮಿನಿಸ್ಟ್ರೇಷನ್ ನಡೆಸತಕ್ಕಂಥ ಕಾಲದಲ್ಲಿ ಈ ಬಗ್ಗೆ ಸ್ವಲ್ಪ ಬಿಗಿ ಹಾಕಬೇಕು. ನೀವು ಈ ಇಲಾಖೆಯಲ್ಲಿ ಕೆಲವು ಹುದ್ದೆಗಳನ್ನು ನಿರ್ಮಾಣ ಮಾಡಿದ್ದೀರಿ. ಪ್ರತಿಯೊಂದು ತಾಲ್ಲೂಕಿನಲ್ಲೂ 3 ಜನ ಇನ ಸ್ಪೆಕ್ಟರ್‌ಸ್, ಪ್ರತಿ ಜಿಲ್ಲೆಗೂ ಒಬ್ಬ ಡಿ. ಪಿ. ಐ. ಮತ್ತು ಡಿವಿಷನಲ್ ಲೆವಲ್‌ನಲ್ಲಿ ಹೊಸದಾಗಿ ಕೆಲವು ಹುದ್ದೆಗಳನ್ನು ಕ್ರಿಯೇಟ್ ಮಾಡಿದ್ದೀರಿ. ಈವೊತ್ತಿನ ಈ ಒಂದು ವಿಷಯದಲ್ಲಿ ಗುಣಮಟ್ಟ ಆಗಿದೆಯೆಂದು ಹೇಳುತ್ತೇನೆ. ಆದರೆ ಇದರಲ್ಲಿ ಈ ಒಂದು ವಿದ್ಯಾಭ್ಯಾಸದ ಪ್ರಗತಿ ಸಾಕಷ್ಟು ಸಾಧನೆಯಾಗಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಈವೊತ್ತು ಈ ಒಂದು ಇಲಾಖೆಯಲ್ಲಿ ಅಧಿಕಾರಿಗಳ ತಂಡ ಹೆಚ್ಚಾದ ಮಾತ್ರಕ್ಕೆ ಮಕ್ಕಳ ಬೆಳವಣಿಗೆಗೆ ಅವಶ್ಯಕವಾದಂಥ ವಾತಾವರಣವನ್ನು ನಿರ್ಮಾಣ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಅನೇಕ ಕಡೆ ಶಾಲೆಗಳು ಮರಗಳ ಕೆಳಗೆ ನಡೆಯುವುದನ್ನು, ದೇವಸ್ಥಾನದ ಜಗುಲಿ ಮೇಲೆ ನಡೆಯುವುದನ್ನು, ಚಾವಡಿಯಲ್ಲಿ ನಡೆಯುವುದನ್ನು ನೋಡಿದ್ದೇವೆ.

(ಶ್ರೀ ಎಚ್. ಡಿ. ದೇವೇಗೌಡ)

ಕೂಡುವುದಕ್ಕೆ ಮಣೆ ಇಲ್ಲ. ಎಲ್ಲ ಕಡೆಯೂ ಟ್ರೈನ್ಡ್ ಟೀಚರ್ಸ್ ಒದಗಿಸುವುದಕ್ಕೆ ಸಾಧ್ಯವಾಗಿಲ್ಲ. ಶ್ರೀಮಾನ್ ಎ. ಸಿ. ದೇವೇಗೌಡರ ಕಮಿಟಿ ರಿಪೋರ್ಟಿನಲ್ಲಿ ಮದ್ರಾಸಿನಲ್ಲಿ 95 ಪರ್ಸೆಂಟ್ನ ಟ್ರೈನ್ಡ್ ಟೀಚರ್ಸ್ ಇದ್ದಾರೆಂದು 1969 ರಲ್ಲಿಯೇ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ 70 ಪರ್ಸೆಂಟ್ ಮುಟ್ಟುವುದಕ್ಕೆ ಕೂಡ ಸಾಧ್ಯವಾಗಿಲ್ಲ. ಈ ಎಲ್ಲ ದೆಸೆಯಿಂದ ಈ ಹೊತ್ತು ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಗಿಲ್ಲ. ಹಿಂದೆ ಈ ಸಭೆಯಲ್ಲಿ ಚರ್ಚೆ ಮಾಡತಕ್ಕ ಕಾಲದಲ್ಲಿ ಕೂಡ ನಾನು ಹೇಳಿದ್ದೇನೆ, ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಪ್ರತ್ಯೇಕ ಡೈರೆಕ್ಟೊರೇಟ್ ಮಾಡಿ ಎಂದು ಹೇಳಿದ್ದೇನೆ. ಈ ದಿಶೆಯಲ್ಲಿ ಎಲ್ಲ ರೀತಿಯ ಕಾರ್ಯಕ್ರಮಗಳನ್ನೂ ಹಾಕಲಿಕ್ಕೆ ಅವಕಾಶ ಮಾಡಿಕೊಡತಕ್ಕದ್ದು ಸೂಕ್ತ ಎನ್ನುವುದನ್ನು ನಾವು ಪದೇ ಪದೇ ಹೇಳಿದ್ದೇವೆ. ಪುನಃ ನಾನು ಆ ಒತ್ತಾಯವನ್ನು ಸರ್ಕಾರದ ಮೇಲೆ ಹಾಕಲಿಕ್ಕೆ ಇಚ್ಛೆಪಡುತ್ತೇನೆ.

2-30 P.M.

ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಖರ್ಚುಮಾಡುವ ಹಣದ ಲೆಕ್ಕವನ್ನು ಹಿಡಿದರೆ ಒಬ್ಬ ಹುಡುಗನಿಗೆ ಸರಾಸರಿ 40 ರೂಪಾಯಿ ಖರ್ಚುಮಾಡುತ್ತಾರೆ, ಅದೇ ಉನ್ನತ ಪ್ರಾಥಮಿಕ ಶಾಲೆಗಳಲ್ಲಿ 70 ರೂಪಾಯಿಗಳವರಗೂ ಖರ್ಚು ಮಾಡುತ್ತಾರೆ, ಪ್ರೌಢ ಶಾಲೆಗಳಲ್ಲಿ 140 ರೂಪಾಯಿ ಖರ್ಚು ಮಾಡುತ್ತಾರೆ. ಕಾಲೇಜು ವಿದ್ಯಾಭ್ಯಾಸಕ್ಕೆ 400 ರೂಪಾಯಿಗಳವರೆಗೂ ಖರ್ಚು ಮಾಡುತ್ತಾರೆ. ಟೆಕ್ನಿಕಲ್ ಎಜುಕೇಷನ್ ವಿಷಯ ಬೇರೆ ಆಗುತ್ತದೆ. ಸಾಮಾನ್ಯ ವಿದ್ಯಾಭ್ಯಾಸದ ದೃಷ್ಟಿಯಿಂದ ಹೇಳುವುದಾದರೆ ಕಾಲೇಜು ವಿದ್ಯಾರ್ಥಿಗಳಿಗೆ 400 ರೂಪಾಯಿ ಖರ್ಚು ಮಾಡುವಾಗ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗೆ ಖರ್ಚು ಮಾಡುವುದು 40 ರೂಪಾಯಿ ಮಾತ್ರ. ಬೇಸಿಕ್ ಫೌಂಡೇಷನ್ ಹಾಕುವುದಕ್ಕೆ ಸರಿಯಾದ ರೀತಿಯ ಕಾರ್ಯಕ್ರಮ ಹಾಕಿಕೊಳ್ಳದೆ ಹೋದರೆ ಜನರಲ್ ಎಜುಕೇಷನ್ನಿಗೆ ಬರುವ ಸರ್ವೇಸಾಧಾರಣ ಹುಡುಗ ನಗರ ಪ್ರದೇಶಗಳಲ್ಲಿ ವ್ಯಾಸಂಗ ಮಾಡುವವರ ಜೊತೆಯಲ್ಲಿ ಕಾಂಪೀಟ್ ಮಾಡುವುದಕ್ಕೆ ಬೇಕಾದ ಅರ್ಹತೆಗಳಿರುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳಿಗೆ ಖರ್ಚು ಮಾಡತಕ್ಕ ಹಣ ಬಹಳ ಕಡಮೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ನಾವು ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಬೇಕಾಗುತ್ತದೆ. ಮೆರಿಟ್ ಯುಗ, ಸ್ಪರ್ಧೆಯ ಯುಗದಲ್ಲಿದ್ದೇವೆ. ಸ್ಪರ್ಧೆಯಲ್ಲಿ ಗೆದ್ದು ತಾನು ತನ್ನ ಕೆಲಸವನ್ನು ಸಾಧನೆ ಮಾಡಿಕೊಳ್ಳಬೇಕಾಗುತ್ತದೆ. ಸರ್ಕಾರಿ ಕೆಲಸಕ್ಕೆ ಅರ್ಜಿ ಹಾಕಲಿ, ಪದವೀಧರನಾಗುವುದಕ್ಕೆ ಕಾಲೇಜು ಪ್ರವೇಶಕ್ಕೆ ಅರ್ಜಿ ಹಾಕಲಿ, ಯಾವುದೇ ರಂಗದಲ್ಲಿ ಹೋಗಬೇಕಾದರೂ ಮೆರಿಟ್ ಎನ್ನುವುದೇ ಮೇನ್ ಕ್ರೈಟೀರಿಯಾ. ಗ್ರಾಮಾಂತರ ಪ್ರದೇಶಗಳಲ್ಲಿ ಓದತಕ್ಕ ಮಕ್ಕಳಿಗೆ ಪೌಷ್ಟಿಕವಾದ ಆಹಾರ ಕೂಡ ದೊರೆಯುವುದಿಲ್ಲ. ಅವರ ತಂದೆತಾಯಿಗಳ ಪರಿಸ್ಥಿತಿ ಅಷ್ಟು ಚಿಂತಾಜನಕವಾಗಿದೆ. ಈಗ ಮಾನ್ಯ ಮಂತ್ರಿಗಳು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಹೇಳುವುದಾದರೆ ಬಿಲೋ ಪಾವರ್ಟಿಲೈನ್ ಇರುವವರ ಸಂಖ್ಯೆ 23 ಕೋಟಿ ಈ ದೇಶದಲ್ಲಿರಬೇಕಾದರೆ ಈ ಮಕ್ಕಳು ಅದರಲ್ಲಿಯೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಬಡವರ ಮಕ್ಕಳಿಗೆ ಒಳ್ಳೆಯ ವಾತಾವರಣವನ್ನು ನಿರ್ಮಿಸಬೇಕಾದ್ದು ಸರ್ಕಾರದ ಧರ್ಮ, ಕರ್ತವ್ಯ. ಈ ಬಗ್ಗೆ ಹೆಚ್ಚು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳುತ್ತೇನೆ.

ಬೋಧನೆಯ ಕ್ರಮ ಕೂಡ ಪದೇ ಪದೇ ಬದಲಾಗುತ್ತಿದೆ. ಇದು ಕೂಡ ನಿಲ್ಲಬೇಕು. ಒಬ್ಬೊಬ್ಬರು ಒಂದೊಂದು ರೀತಿಯ ಪ್ರಯೋಗ ಮಾಡುವುದಕ್ಕೆ ಹೋಗುತ್ತಾರೆ. ಇದರ ಅವಶ್ಯಕತೆ ಇಲ್ಲ. ಇದು ಇನ್ನು ಮುಂದಾದರೂ ಕೊನೆಗಾಣಬೇಕು, ಕೊನೆ ಮುಟ್ಟಬೇಕು. ಈ ದಿಶೆಯಲ್ಲಿ ನಿರ್ದಿಷ್ಟವಾದ ನಿಲುವನ್ನು ತಾಳಬೇಕಾಗುತ್ತದೆ. ವಿದ್ಯಾಭ್ಯಾಸ ಮತ್ತು ಬೋಧನೆಯ ಬಗ್ಗೆ ನಿಮ್ಮ ಧೋರಣೆ ಏನು, ನೀತಿ ಏನು, ಎನ್ನುವ ದಿಸೆಯಲ್ಲಿ ನಾವು ಒಂದು ಶ್ವೇತಪತ್ರವನ್ನು ಹೊರಡಿಸುವುದು ಸೂಕ್ತ ಎನ್ನುವುದನ್ನು ಶಿಕ್ಷಣ ತಜ್ಞರಾದ ಶ್ರೀ ಎ. ಸಿ. ದೇವೇಗೌಡರು ಹೇಳಿದ್ದಾರೆ. ಅವರ ಸಲಹೆಯನ್ನು ತಾವು ಅಂಗೀಕರಿಸುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಕಳೆದ ಸಾರಿ ಕೇಳಿದಾಗ ಪರಿಶೀಲನೆ ಮಾಡುತ್ತೇವೆಂದು ಹೇಳಿದರು. ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂದು ಕೇಳುತ್ತೇನೆ. ಈ ಹೊತ್ತು ಪ್ರಾಥಮಿಕ ಶಿಕ್ಷಣದ ಸ್ಥಿತಿಯನ್ನು ಹೆಚ್ಚು ಲಂಬಿಸಿ ಉದಹರಿಸಬೇಕಾಗಿಲ್ಲ. ಇದು ದಿನನಿತ್ಯ ನೋಡಬಹುದಾದ ಪರಿಸ್ಥಿತಿ. ಇದರ ಬಗ್ಗೆ ಕಾಲಹರಣ ಮಾಡುವುದಕ್ಕೆ ಹೋಗವುದಿಲ್ಲ. ಕಟ್ಟಡಗಳನ್ನು ಒದಗಿಸುವ ಬಗ್ಗೆ ಪಂಚಾಯಿತಿಯ ಅಥವಾ ಗ್ರಾಮದ ಜನ ಕಾಂಟ್ರಿಬ್ಯೂಷನ್ ಕೊಡಲಿ ಎಂದು ಅವರ ಮೇಲೆ ಒತ್ತಡ ಮಾಡುವುದಕ್ಕೆ ಬದಲಾಗಿ, ಸರ್ಕಾರದಿಂದ ಏನು ಹಣ ಕೊಡುತ್ತೀರಿ ಅದರಲ್ಲಿಯೇ ಸ್ವಲ್ಪ ಚೆನ್ನಾಗಿರುವಂತೆ ಶಾಲಾ ಕಟ್ಟಡವನ್ನು ಕಟ್ಟಿ ಅಲ್ಲಿಗೆ ಬೇಕಾದ ಕನಿಷ್ಠ ಆವಶ್ಯಕತೆಗಳನ್ನು ಒದಗಿಸಿಕೊಡುವುದಕ್ಕೆ ಅವಕಾಶ ಮಾಡಿಕೊಡತಕ್ಕದ್ದು

ಸೂಕ್ತವೆನ್ನುವುದನ್ನು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಶಾಲೆಗಳಿಗೆ ಬೇಕಾದ ಪೀಠೋಪಕರಣಗಳನ್ನು ಒದಗಿಸತಕ್ಕದ್ದು, ಟ್ರೇನ್ಡ್ ಟೀಚರ್ಸ್ ಒದಗಿಸತಕ್ಕದ್ದು, ಇನ್‌ಸ್ಪೆಕ್ಟೊರೇಟ್ ಬಿಗಿಯಾಗಿ ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡುವುದಕ್ಕೆ ಮೇಲ್ಪಟ್ಟ ಅಧಿಕಾರಿಗಳವರು ವಿಚಕ್ಷಣೆಯಿಂದ ನಿರ್ವಹಣೆ ಮಾಡಿದರೆ ಒಳ್ಳೆಯದು. ಪೌಷ್ಟಿಕ ಆಹಾರ ಕೊಡುವ ವಿಚಾರದಲ್ಲಿ ಕೇರ್ ಸಂಸ್ಥೆಯವರು ಕೊಡುವ ಆಹಾರವನ್ನು ಉಪಯೋಗ ಮಾಡುವುದರಲ್ಲಿ ಅಧ್ವಾನವಾಗಿದೆ. ಇದನ್ನು ತಡೆಗಟ್ಟುವುದಕ್ಕೆ ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸುತ್ತೇನೆ.

ಯೂನಿವರ್ಸಿಟಿ ಎಜುಕೇಷನ್ ವಿಚಾರದಲ್ಲಿ ನ್ಯಾಷನಲ್ ಎಜುಕೇಷನಲ್ ಪಾಲಿಸಿ ಏನು ಎಂಬುದನ್ನು ನಾವು ಮಾಡಿಕೊಳ್ಳಲು ಸಾಧ್ಯವಾಗಿದೆಯೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ಹೊತ್ತು ನಮ್ಮ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಒಂದು ನೀತಿ ಇಲ್ಲ. ಕಳೆದ 25 ವರ್ಷಗಳಲ್ಲಿ ಹಲವಾರು ಮಾರ್ಪಾಡುಗಳಾಗಿವೆ. ಇಂಟರ್‌ಮೀಡಿಯೆಟ್ ಎರಡು ವರ್ಷ, ಡಿಗ್ರಿ ಕೋರ್ಸ್ ಎರಡು ವರ್ಷ ಇದ್ದುದು, ಪ್ರಿ ಯೂನಿವರ್ಸಿಟಿ ಒಂದು ವರ್ಷ ಮತ್ತು ಡಿಗ್ರಿ ಕೋರ್ಸ್ ಮೂರು ವರ್ಷ ಮಾಡಿದರು. ಈಗ ಪುನಃ ಅವನ್ನು ಬದಲಾವಣೆ ಮಾಡಿದ್ದಾರೆ. ಹೀಗೆ ಮಕ್ಕಳ ಮೇಲೆ ಪ್ರಯೋಗ ಮಾಡತಕ್ಕದ್ದು ಸರಿಯಾದುದಲ್ಲ. ಇದರ ಜೊತೆಗೆ ಈ ಹೊತ್ತು ನಮ್ಮ ರಾಷ್ಟ್ರದಲ್ಲಿ ಕಾಡುತ್ತಿರತಕ್ಕ ನಿರುದ್ಯೋಗ ಸಮಸ್ಯೆಯನ್ನು ಕೂಡ ನಾವು ಗಮನದಲ್ಲಿಟ್ಟುಕೊಂಡು ನಮ್ಮ ವಿದ್ಯಾಭ್ಯಾಸದ ಕ್ರಮ ಹೇಗೆ ಇರಬೇಕು ಎನ್ನುವುದರ ಬಗ್ಗೆ ನ್ಯಾಷನಲ್ ಪಾಲಿಸಿ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ನಮ್ಮ ಸರ್ಕಾರ ಒತ್ತಾಯ ಮಾಡಬೇಕು. ನನಗೆ ತಿಳಿದಿರುವ ಅಂಕಿಅಂಶಗಳಿಂದ ಹೇಳುವುದಾದರೆ ಸುಮಾರು ಮೂರು ಲಕ್ಷ ಜನ ಪದವೀಧರರು ಒಂದು ವರ್ಷಕ್ಕೆ ಹೊರಗೆ ಬರುತ್ತಾರೆ; 40–50 ಸಾವಿರ ಪೋಸ್ಟ್‌ಗ್ರಾಜುಯೇಟ್ಸ್ ಬರುತ್ತಾರೆ, 60–65 ಸಾವಿರ ಟೆಕ್ನಿಕಲ್ ಎಜುಕೇಷನ್ ಡಿಗ್ರಿ ಪಡೆಯುವವರು ಹೊರಗೆ ಬರುತ್ತಾರೆ. ಈ ಪರಿಸ್ಥಿತಿಯನ್ನು ನೋಡಿದಾಗ ನ್ಯಾಷನಲ್ ಎಜುಕೇಷನ್ ಪಾಲಿಸಿಯ ಆವಶ್ಯಕತೆ ಈ ಹೊತ್ತು ನಮಗೆ ಹೆಚ್ಚಾಗಿದೆ. ಶ್ರೀಮಾನ್ ಮೋಹನ್ ಧಾರಿಯಾ ಅವರು 25 ಸಾವಿರ ನಿರುದ್ಯೋಗಿ ಇಂಜಿನಿಯರುಗಳಿಗೆ ಉದ್ಯೋಗ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಕಳೆದ ಸಾರಿ 15 ಸಾವಿರ ಜನರಿಗೆ ಉದ್ಯೋಗ ಒದಗಿಸಿದ್ದೇವೆ ಎಂದು ಹೇಳಿರುವುದು ಪತ್ರಿಕೆಗಳಲ್ಲಿ ಬಂದುದನ್ನು ನಾವು ನೋಡಿದ್ದೇವೆ. ಈ ಹೊತ್ತು ಎಲ್ಲ ಕಾಲೇಜುಗಳನ್ನು ಮುಚ್ಚಿದರೂ ಇನ್ನು 10 ವರ್ಷವಾದರೂ ಹುಡುಗರಿಗೆ ಉದ್ಯೋಗವನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಈ ಶಿಕ್ಷಣ ಸಮಸ್ಯೆ ಇನ್ನೂ ಜಟಿಲವಾಗುತ್ತದೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ನಮ್ಮ ವಿದ್ಯಾಭ್ಯಾಸದ ನೀತಿಯನ್ನು ಮಾರ್ಪಾಡು ಮಾಡತಕ್ಕದ್ದರ ಅವಶ್ಯಕತೆ ಇದೆ. ಕೊಠಾರಿ ಕಮಿಷನಿನವರು ಜೂನಿಯರ್ ಕಾಲೇಜುಗಳನ್ನು ತೆಗೆಯಬೇಕೆಂದು ಹೇಳಿದ ಉದ್ದೇಶವೂ ಅದೇ ಆಗಿದೆ. ಜೂನಿಯರ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಹೊರಗೆ ಬರತಕ್ಕ ಕಾಲದಲ್ಲಿ ಯಾವ ಒಂದು ದಿಸೆಯಲ್ಲಿ ನಮ್ಮ ವಿದ್ಯಾಭ್ಯಾಸದ ನೀತಿ ಹೋಗಬೇಕು, ಯಾವ ದಿಸೆಯಲ್ಲಿ ನಮ್ಮ ವಿದ್ಯಾಭ್ಯಾಸದ ಧೋರಣೆ ಮಾರ್ಪಾಡಾಗಬೇಕು, ನಮ್ಮ ಸಮಾಜಕ್ಕೆ ಅನ್ವಯವಾಗತಕ್ಕ ರೀತಿಯಲ್ಲಿ ಹೇಗೆ ಮಾರ್ಪಾಡಾಗಬೇಕು, ಸಮಾಜಕ್ಕೆ ಏನು ಹೊರೆಯಾಗುತ್ತಿದೆ ಅದನ್ನು ತಪ್ಪಿಸುವುದಕ್ಕೆ ನಮ್ಮ ನೀತಿಯನ್ನು ಮಾರ್ಪಾಡು ಮಾಡಬೇಕು ಎನ್ನುವ ಉದ್ದೇಶದಿಂದ ಜೂನಿಯರ್ ಕಾಲೇಜುಗಳನ್ನು ತೆರೆದಿದ್ದೇವೆ. ಆ ದೃಷ್ಟಿಯಿಂದ ಎಷ್ಟುಮಟ್ಟಿಗೆ ನಮ್ಮ ಧೋರಣೆ ಮುಂದೆ ಹೋಗಿದೆ ಎಂದು ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಜೂನಿಯರ್ ಕಾಲೇಜುಗಳನ್ನು ಮಾಡಿರುವುದರ ಬಗ್ಗೆ ಬಹಳ ಆತುರಾತುರವಾಗಿ ಮಾಡಿದ್ದಾರೆ ಎಂದು ಹೇಳುತ್ತೇನೆ. ಕೆಲವು ಕಡೆ ಇರುವ ಜೂನಿಯರ್ ಕಾಲೇಜುಗಳಲ್ಲಿ ಸರಿಯಾದ ಲ್ಯಾಬರೇಟರಿಗಳೇ ಇಲ್ಲ ಮತ್ತು ಎಕ್ವಿಪ್‌ಮೆಂಟೇ ಇಲ್ಲ. ಇಂತಹ ಸನ್ನಿವೇಶದಲ್ಲಿ ಜೂನಿಯರ್ ಕಾಲೇಜುಗಳನ್ನು ಮಾಡಲು ಹೊರಟಿದ್ದೀರಿ. ಸರಕಾರಕ್ಕೆ ಒತ್ತಡವೇನೋ ಬರುತ್ತಿದೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದು ಇಲ್ಲವೇ ಎರಡು ಜೂನಿಯರ್ ಕಾಲೇಜುಗಳನ್ನು ಮಾಡಬೇಕೆಂದು. ಇದಕ್ಕೆ ಅವಕಾಶ ಕೊಡಬಾರದು. ಹಾಗೆ ಮಾಡಿದರೆ ಇದರಿಂದ ವಿದ್ಯಾಭ್ಯಾಸದ ಗುಣಮಟ್ಟ ಕಡಿಮೆಯಾಗುತ್ತ ಹೋಗುತ್ತದೆ, ಇದನ್ನು ಹೇಗೆ ಸರಿಪಡಿಸಬಹುದು ಅದರ ಬಗ್ಗೆ ಸರಕಾರ ವಿಚಾರ ಮಾಡುವುದು ಯೋಗ್ಯ ಎಂದು ನಾನು ಹೇಳುತ್ತೇನೆ. ಶ್ರೀ ದೇವೇಗೌಡರ ರಿಪೋರ್ಟಿನಲ್ಲಿ ಪ್ರೈಮರಿ ಎಜುಕೇಷನ್‌ನಲ್ಲಿ ಯಾವ ರೀತಿ ವೇಸ್ಟೇಜು ಹಾಗೂ ಸ್ಟ್ಯಾಗ್ನೇಷನ್ನಾಗುತ್ತಿದೆ ಎನ್ನುವುದರ ಬಗ್ಗೆ ಒಂದು ಕಡೆ ವಿವರವಾಗಿ ಹೇಳಿದ್ದಾರೆ. ಅವರು ಹೇಳುವಂತೆ ಒಬ್ಬ ವಿದ್ಯಾರ್ಥಿಗೆ ಸರಾಸರಿ ಖರ್ಚು 35.7 ಇಲ್ಲವೇ 40ರೂಪಾಯಿಗಳಷ್ಟು ಬರುತ್ತದೆ ಎಂದು ಇದನ್ನು 1957—58ರಲ್ಲಿ ಕೊಟ್ಟಿರುವುದು. ಇದರಂತೆ ಅವರೇ ಹೇಳಿರುವುದು ಮೊದಲನೆ ವರ್ಷದಲ್ಲಿ 7.52 ಲಕ್ಷ ಹುಡುಗರಿದ್ದರು, ಎರಡನೇ ವರ್ಷ ಇದು 4.81 ಲಕ್ಷ ಹುಡುಗರಿಗೆ ಇಳಿಯಿತು. ಅನಂತರ ಮೂರನೇ ವರ್ಷಕ್ಕೆ ಇದು 2.71 ಲಕ್ಷ ಹುಡುಗ

(ಶ್ರೀ ಎಚ್. ಡಿ. ದೇವೇಗೌಡ)

ರಿಗೆ ಇಳಿಯಿತು. ಈ ರೀತಿಯಾಗಿ ಓದುವ ಹುಡುಗರ ಸಂಖ್ಯೆಯೇ ಕಡಿಮೆಯಾಯಿತು ಮತ್ತು ಇದರಿಂದ ಸರಕಾರಕ್ಕೆ ಸುಮಾರು 79 ಲಕ್ಷದಷ್ಟು ಹಣ ಅಪವ್ಯಯವಾಯಿತು ಎನ್ನುವ ನಿದರ್ಶನವನ್ನೂ ಇದರಲ್ಲಿ ಹೇಳಿದ್ದಾರೆ, ಇಂತಹ ವೇಸ್ಟೇಜಿಗೆ ಸರಕಾರವೇ ಹೊಣೆ ಆಗಬೇಕಾಗಿದೆ, ಈ ರೀತಿಯಾಗಿ ಎಲ್ಲ ಕಡೆಗಳಲ್ಲೂ ಜೂನಿಯರ್ ಕಾಲೇಜುಗಳೆಂದು ಮಾಡುವುದಕ್ಕೆ ಹೋದರೆ ಅದರಿಂದ ವಿದ್ಯಾಭ್ಯಾಸ ಮಟ್ಟ ಉತ್ತಮವಾಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡಬೇಕು. ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಮಾಡಬಹುದು. ಆದರೆ ಎಲ್ಲ ಕಡೆಯಲ್ಲೂ ಜೂನಿಯರ್ ಕಾಲೇಜುಗಳು ಬೇಕೆಂದು ಕೊಡುತ್ತ ಹೋದರೆ ಇದರಲ್ಲಿ ಸರಕಾರಕ್ಕೆ ಎಷ್ಟು ವೇಸ್ಟೇಜು ಆಗುತ್ತದೆ ಅದನ್ನು ಆಲೋಚನೆ ಮಾಡಬೇಕು. ಇಂದು ಪರೀಕ್ಷೆಗಳ ಫಲಿತಾಂಶ ನೋಡುವಾಗ ಸುಮಾರು ಶೇಕಡಾ 50 ರಿಂದ 85 ರವರೆಗೆ ಎಲ್ಲರೂ ಫೈಲ್ ಆಗುತ್ತಿದ್ದಾರೆ. ಸರಿಯಾದ ವ್ಯವಸ್ಥೆಯನ್ನು ಮೊದಲಲ್ಲಿ ಮಾಡಿಕೊಳ್ಳದೆ ಇಂತಹ ಜೂನಿಯರ್ ಕಾಲೇಜುಗಳನ್ನು ತೆರೆಯುವುದು ಸರಿಯಲ್ಲ. ಇದಕ್ಕೆ ಅವಕಾಶ ಕೊಡದೆ ತಡೆ ಹಾಕುವುದರ ಕಡೆಗೆ ಯತ್ನ ಮಾಡಿ ಎಂದು ನಾನು ಸಲಹೆ ಮಾಡುವುದು. ಇನ್ನು ಇದೇ ಜೂನಿಯರ್ ಕಾಲೇಜುಗಳಲ್ಲಿ ಇರುವ ಮೇಷ್ಟ್ರುಗಳಿಗೆ ಕೊಡತಕ್ಕ ಪೇಸ್ಕೇಲನಲ್ಲೂ ಕೂಡ ಬಹು ತಾರತಮ್ಯಗಳಿವೆ. ಯೂನಿವರ್ಸಿಟಿಗೆ ಸೇರಿದವರು ಎಂದು ಅವರಿಗೆ ಒಂದು ರೀತಿಯ ಸಂಬಳ ಶ್ರೇಣಿ, ಜೂನಿಯರು ಕಾಲೇಜು ಟೀಚರ್ ಎಂದು ಇವರಿಗೇ ಬೇರೆ ರೀತಿ ಸಂಬಳದ ಶ್ರೇಣಿ ಕೊಡುವುದು ಸರಿಯಲ್ಲ. ಇದರಲ್ಲಿ ತಾರತಮ್ಯ ಇದೆ. ಇದರ ಬಗ್ಗೆ ಸರಕಾರದ ನೀತಿಯೇನು ? ಪೋಸ್ಟ್ ಗ್ರ್ಯಾಜುಯೇಟ್ ಟೀಚರಾಗಿ ಬರಲು ಅವನು ಡಿಗ್ರಿ ಪಾಸು ಮಾಡಿಕೊಂಡು ಯೂನಿವರ್ಸಿಟಿಗೆ ಬಂದರೆ ಒಂದು ರೀತಿ ಪೇಸ್ಕೇಲು, ಬೇರೆ ಕಾಲೇಜಿಗೆ ಬಂದರೆ ಒಂದು ರೀತಿಯಾದ ಪೇ ಸ್ಕೇಲು ಎಂದು ಒಬ್ಬರಿಗೆ 150ರೂಪಾಯಿ ಸಂಬಳ ಇನ್ನೊಬ್ಬರಿಗೆ 600ರೂಪಾಯಿಗಳ ಸಂಬಳ ಕೊಟ್ಟರೆ ಅವರು ಸರಿಯಾಗಿ ಕೆಲಸಮಾಡುವುದಕ್ಕಾಗುವುದಿಲ್ಲ, ಯೂನಿವರ್ಸಿಟಿಯಲ್ಲಿ ಕೆಲಸ ಮಾಡುವವರಿಗೂ ಜೂನಿಯರ್ ಕಾಲೇಜುಗಳಲ್ಲಿ ಕೆಲಸ ಮಾಡುವವರಿಗೂ ಯಾವ ವ್ಯತ್ಯಾಸವೂ ಇದರಲ್ಲಿ ಕಾಣುವುದು ಸಾಧ್ಯವಿಲ್ಲ. ಒಂದೇ ವಿದ್ಯಾರ್ಹತೆ ಪಡೆದಿರುವ ಎಲ್ಲರಿಗೂ ಸಮಾನವಾಗಿ ಸಂಬಳ ಇತ್ಯಾದಿಗಳನ್ನು ಕೊಡಲು ಒಂದು ರೀತಿಯಾದ ಯೂನಿಫಾರಂ ಪಾಲಿಸಿ ಜಾರಿಗೆ ತರಬೇಕು, ಇದರಲ್ಲಿರುವ ಭಸೀದ ಭಾವನೆಗಳನ್ನು ತಪ್ಪಿಸಬೇಕೆಂದು ತಮ್ಮಲ್ಲಿ ಹೇಳುತ್ತೇನೆ. ಯೂನಿವರ್ಸಿಟಿ ಎಜುಕೇಷನ್ ಬಗ್ಗೆ ನಾನು ಮೊದಲೇ ಹೇಳಿದ ಹಾಗೆ ಇದಕ್ಕೆ ಒಂದು ರೀತಿಯಾದ ನ್ಯಾಷನಲ್ ಪಾಲಿಸಿ ಹಾಕಬೇಕೆಂದು, ಇದರಿಂದ ರಾಜ್ಯದಲ್ಲಿರುವ ನಿರುದ್ಯೋಗವನ್ನು ಕಡಿಮೆ ಮಾಡಲು ಅನುಕೂಲವಾಗುತ್ತದೆ ಎಂದು ಕೇಂದ್ರ ಸರಕಾರಕ್ಕೂ ತಾವು ಶಿಫಾರಸನ್ನು ಕಳುಹಿಸಿ ಅವರಿಂದ ಸೂಕ್ತವಾದ ಒಂದು ನಿರೂಪಣೆಯನ್ನು ತರಿಸಿಕೊಂಡು ಮಾಡುವುದು ಸೂಕ್ತ ಎಂದು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ.

Sri A. R. BADARINARAYANA.—You are making a request for evolving a National Policy. You mean imparting of Education at present is only for the purpose of getting jobs; it is just for general education and nothing else.

ಶ್ರೀ ಹೆಚ್. ಡಿ. ದೇವೇಗೌಡ.—ನ್ಯಾಷನಲ್ ಎಜುಕೇಷನಲ್ ಪಾಲಿಸಿ ಏಕೆ ಇರಬೇಕು ಎನ್ನುವುದನ್ನು ನಾನು ಮೊದಲು ಮಾತಾಡುವಾಗಲೇ ಹೇಳಿದ್ದೆ. ನಮ್ಮ ಸಮಾಜಕ್ಕೆ ಯಾವುದು ಅವಶ್ಯಕ ಇದೆಯೋ ಅಂತಹ ವಿದ್ಯಾಭ್ಯಾಸ ಪದ್ಧತಿ ಜಾರಿಗೆ ತಂದು ಅದರಂತೆ ಕ್ರಮಗಳನ್ನು ಅನುಸರಿಸಬೇಕು. ವಿದ್ಯಾಭ್ಯಾಸಕ್ಕಾಗಿ ರಾಜ್ಯದ ಬೊಕ್ಕಸಕ್ಕೇನೋ ಖರ್ಚಾಗುತ್ತಿದೆ ಔದ್ಯೋಗಿಕವಾಗಿ ಬೇಕಾಗುವಂತಹ ವಿದ್ಯಾಭ್ಯಾಸವನ್ನು ಕೊಡಬೇಕು. ಸಮಾಜಕ್ಕೆ ಹೊಂದಿಕೊಳ್ಳುವ ರೀತಿಯಲ್ಲಿ ಈ ಕ್ಷೇತ್ರದಲ್ಲಿ ಬೇಕಾಗುವ ಮಾರ್ಪಾಡುಗಳನ್ನು ಮಾಡಬೇಕು. ಪರೀಕ್ಷೆ ಪಾಸುಮಾಡಿದ ಕೂಡಲೇ ಸರಕಾರೀ ಹುದ್ದೆಯನ್ನೇ ಅವಲಂಬನೆ ಮಾಡಿಕೊಳ್ಳಬೇಕು ಎಂದು ಅರ್ಜಿ ತೆಗೆದುಕೊಂಡು ಬಂದು ಇಂದು ಸರಕಾರದ ಕಚೇರಿಗೆ ಬರುವಂತೆ ಮಾಡಬಾರದು. ಇಂತಹ ಒಂದು ಮನೋಭಾವನೆಯನ್ನು ತಪ್ಪಿಸಬೇಕು. ವಿದ್ಯಾಭ್ಯಾಸವಾದ ಕೂಡಲೇ ಅವನು ತನ್ನ ಕಾಲನ ಮೇಲೆ ತಾನೇ ಸ್ವತಃ ಯಾವುದಾದರೂ ಕೆಲಸವನ್ನು ಅನುಸರಿಸುವ ಮನೋಭಾವನೆಯನ್ನು ಹುಡುಗರಲ್ಲಿ ಬೆಳಸಬೇಕು. ಇದಕ್ಕಾಗಿ ಈಗಿರುವ ವಿದ್ಯಾಭ್ಯಾಸದ ನೀತಿಯನ್ನು ಮಾರ್ಪಾಡು ಮಾಡುವುದು ಅವಶ್ಯವಿದೆ ಎಂದು ತಮಗೆ ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇಂದು ನಮ್ಮ ಪರೀಕ್ಷೆಗಳ ಮಟ್ಟ ಬಹು ಕೀಳುಮಟ್ಟಕ್ಕೆ ಹೋಗುತ್ತಿದೆ, ಇದರಲ್ಲಿ ಎಂತಹ ಅನ್ಯಾಯಗಳಾಗುತ್ತಿವೆ ಎನ್ನುವುದು ನಮಗೆ ಈಚೆಗೆ ತಿಳಿದು ಬರುತ್ತಿದೆ. ಇದರಲ್ಲಿ ಶಿಕ್ಷೆಯುವರೂ ಸೇರಿದ್ದಾರೆ ಹಾಗೂ ಯೂನಿ

ವರ್ಸಿಟಿಗಳವರೂ ಸೇರಿ ಪ್ರಶ್ನೆ ಪತ್ರಿಕೆಗಳನ್ನು ಅದಲುಬದಲು ಮಾಡಿರುವ ಪ್ರಸಂಗಗಳೂ ನಮಗೆ ಗೊತ್ತಾಗಿವೆ. ಇದರ ಬಗ್ಗೆ ಆಡಳಿತ ಯಂತ್ರವನ್ನು ಸ್ವಲ್ಪ ಬಿಗಿ ಮಾಡಿ ಬಿಗಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮಧ್ಯ ಪ್ರದೇಶದಲ್ಲಿ 21 ಪರೀಕ್ಷಾ ಕೇಂದ್ರಗಳನ್ನು ಮಾಡಿ ಅದರಲ್ಲಿ ಸುಮಾರು 800 ಮಂದಿ ಸೂಪರ್‌ವೈಸರುಗಳನ್ನು ನೇಮಕ ಮಾಡಿದಾಗ ಅವರಿಗೆ ರಕ್ಷಣೆ ಕೊಡಲು ಸುಮಾರು ಹತ್ತು ಸಹಸ್ರಕ್ಕೂ ಮೀರಿ ಪೋಲೀಸಿನವರ ಸಹಾಯವನ್ನು ಕೊಟ್ಟು ಇದಕ್ಕಾಗಿ ಎಂಟು ಲಕ್ಷ ರೂಪಾಯಿಗಳನ್ನು ಸೆಕ್ಯೂರಿಟಿಗಾಗಿ ಖರ್ಚು ಮಾಡಿದರು ಎಂದು ಪೇಪರುಗಳಲ್ಲಿ ನಾವು ನೋಡಿದ್ದೇವೆ. ಏಕೆಂದರೆ ಇಲ್ಲಿನ ಪರೀಕ್ಷಕರು ಪ್ರಾಣ ತೆರಬೇಕಾಗಿ ಬಂತು, ಇಂತಹ ಒಂದು ಪರಿಸ್ಥಿತಿ ಅಲ್ಲಲ್ಲಿ ಬರುತ್ತಿದೆ. ಹಿಂದಿನ ಕಾಲದಲ್ಲಿ ನಾವೆಲ್ಲ ಪರೀಕ್ಷೆಗಳಿಗೆ ಹೋಗಿ ಕೂರುವಾಗ ಒಂದು ರೀತಿಯಾದ ಭಯ ಭಕ್ತಿಗಳಿಂದ ಹೋಗಿ ಕುಳಿತು ಪರೀಕ್ಷೆಗಳನ್ನು ಪಾಸು ಮಾಡುತ್ತಿದ್ದೆವು ಆದರೆ ಇಂದಿನ ಪರಿಸ್ಥಿತಿ ಬದಲಾಗಿದೆ. ಆಗ ನಾವು ರಾತ್ರಿ ಹಗಲೂ ಕಷ್ಟಪಟ್ಟು ಓದಿ ಪರೀಕ್ಷೆಗೆ ಭಯಭಕ್ತಿಗಳಿಂದ ಹೋಗಿ ಕುಳಿತುಕೊಳ್ಳುತ್ತಿದ್ದೆವು, ನಮಗೆ ಆಗೇನೂ ರಕ್ಷಣೆಯೇ ಇರಲಿಲ್ಲ. ಈಗ ಕಾಲಬದಲಾಗಿ ಕೆಲವು ಎಕ್ಸಾಮಿನೇಷನ್ ಸೆಂಟರುಗಳಲ್ಲಿ ಮೇಷ್ಟರುಗಳಿಗೆ ರಕ್ಷಣೆ ಕೊಡಬೇಕಾಗಿ ಬಂದಿದೆ.

Sri A. R. BADARINARAYANA.—We have tightened up Supervision.

Sri H. D. DEVEGOWDA.—It is the symptom of the disease amongst Students. What is your remedy for it? ಬಿಗಿಯಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು ಒಂದೇ. ಈಚೆಗೆ ನಿಮ್ಮ ಕೇಂದ್ರದ ವಿದ್ಯಾ ಮಂತ್ರಿಗಳಾದ ನೂರುಲ್ ಹಸನ್ ರವರು ಪರೀಕ್ಷೆಗಳನ್ನೇ ತಪ್ಪಿಸಬೇಕೆಂದು ಹೇಳುತ್ತಿದ್ದಾರೆ. ಒಂಬತ್ತನೇ ವರ್ಗದ ಪರೀಕ್ಷೆಯೇಬೇಡ ಎಂದು ಹೇಳುತ್ತಾರೆ, ಮುಂದೆ ಪರೀಕ್ಷೆಗಳನ್ನು ಮಾಡುವುದೇ ಬೇಡ ಎನ್ನುವ ಕಾಲಬಂದರೂ ಬರಬಹುದು. ಯಾವ ಹೊಸ ಪಬರುತ್ತದೆತ್ತೋ ಅದನ್ನು ಹೇಳಲು ಬರುವುದಿಲ್ಲ. ಆದರೆ ನಮ್ಮ ವಿದ್ಯಾಭ್ಯಾಸದ ಮಟ್ಟ ಬಹಳ ಕೀಳ ಮಟ್ಟಕ್ಕೆ ಬರುತ್ತಿದೆ. ಎಂದು ಹೇಳಿದರೆ ಅದುತಪ್ಪಾಗುವುದಿಲ್ಲ.

ಆದ್ದರಿಂದ ಈ ಪರೀಕ್ಷೆಗಳನ್ನು ಎಷ್ಟು ಬಿಗಿ ಮಾಡುವುದಕ್ಕೆ ಸಾಧ್ಯವೊ ಅಷ್ಟು ಬಿಗಿ ಮಾಡಬೇಕಾಗುತ್ತದೆ. ಅಲಹಾಬಾದನಲ್ಲಿ ವಿಧ್ಯಾರ್ಥಿಗಳಿಗೂ ಮತ್ತು ಗುರುಗಳಿಗೂ ಗುಂಡಿನ ಕಾಳಗ ಆಗಿರುವುದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ನಮ್ಮ ಮೈಸೂರು ರಾಜ್ಯದ ವಿದ್ಯಾರ್ಥಿಗಳು ಇನ್ನೂ ಆ ಮಟ್ಟಕ್ಕೆ ಇಳಿದಿಲ್ಲ. ಆದರೂ ಈ ದಿಶೆಯಲ್ಲಿ ಮುಂಜಾಗರೂಕತಾ ಕ್ರಮವನ್ನು ತೆಗೆದುಕೊಳ್ಳುವುದು ನಮ್ಮ ಧರ್ಮ ಎಂದು ಹೇಳುತ್ತೇನೆ. ಮುಖ್ಯವಾಗಿ ಪರೀಕ್ಷೆಗಳ ಬಗ್ಗೆ ಬಿಗಿ ಕ್ರಮ ಕೈಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಎಜುಕೇಷನ್ ಆಕ್ಟ್ ಜಾರಿಗೆ ತರುತ್ತೇವೆಂದು ಹೇಳಿದ್ದೀರಿ. ಅದು ಯಾವ ಘಟ್ಟದಲ್ಲಿದೆಯೋ ನನಗೆ ಗೊತ್ತಿಲ್ಲ. ಅದನ್ನು ಜಾರಿಗೆ ತರುವುದಕ್ಕೆ ಏನೂ ಗೊಂದಲ ಇರಲಾರದೆಂದು ಕಾಣುತ್ತದೆ. ಈ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಒಂದು ಕಾಯಿದೆ ಮಾಡುವುದಕ್ಕೆ ನಿಮ್ಮ ಪಕ್ಷದಲ್ಲಿಯೂ ಗೊಂದಲ ಇರಲಾರದೆಂದು ತಿಳಿದಿದ್ದೇನೆ. ಈ ಬಗ್ಗೆ ಎಷ್ಟು ಎಲ್ಲಿಯವರೆಗೆ ಮುಂದುವರೆಯಲಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಇನ್ನು ಪೆನ್‌ಷನ್ ಬಗ್ಗೆ ಹೇಳಬೇಕೆಂದರೆ, ಮಾನ್ಯ ಮಂತ್ರಿಗಳಿಗೆ ಈ ವಿಷಯದಲ್ಲಿ ಅರ್ಜಿ ಹಾಕಿಕೊಳ್ಳುವವರು ಅದರ ಒಂದು ಕಾಪಿಯನ್ನು ನನಗೂ ಸಹ ಕೆಲವರು ಕಳುಹಿಸುತ್ತಾರೆ. ಅವನ್ನು ನಿಮಗೆ ನಾನು ಕಳುಹಿಸಿಕೊಡುತ್ತೇನೆ. ಇದು ಜಾಗ್ರತೆ ತೀರ್ಮಾನವಾಗಲು ಏನು ಗೊಂದಲ ಇದೆಯೋ ನನಗೆ ಗೊತ್ತಿಲ್ಲ. ಡಿ. ಡಿ. ಪಿ. ಐ. ಲೆವಲ್‌ನಲ್ಲಿ ತೀರ್ಮಾನವಾಗಬೇಕಾದ ಪತ್ರಗಳು ಇಂದು ಸೆಕ್ರೆಟೇರಿಯಟಿಗೆ ಬರಬೇಕಾಗಿದೆ. ಇದರಿಂದ ಕೇಸ್‌ಗಳು ಇತ್ಯರ್ಥವಾಗುವುದು ತಡವಾಗುತ್ತದೆ. ಈ ವಿಚಾರದಲ್ಲಿ ಅಧಿಕಾರ ವಿಕೇಂಧ್ರೀಕರಣ ಮಾಡಬೇಕಾಗುತ್ತದೆ, ಮತ್ತು ಬಿಗಿ ಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ವಿಶ್ವವಿದ್ಯಾನಿಲಯಗಳ ಬಗ್ಗೆ ಒಂದು ಯೂನಿಫಾರಮ್ ಆಕ್ಟ್ ತರುತ್ತೇವೆಂದು ಹೇಳಿದ್ದಿರಿ. ಅದರ ಸಾಧನೆ ಎಲ್ಲಿಯವರೆಗೆ ಆಗಿದೆ ಎಂಬುದನ್ನು ತಿಳಿಸಬೇಕು.

ಇನ್ನು ಖಾಸಗೀ ಶಾಲೆಗಳ ಬಗ್ಗೆ ಹೇಳಬೇಕೆಂದರೆ, ಇದು ಒಂದು ದೊಡ್ಡ ದುರಂತ. ಈ ಶಾಲೆಗಳಲ್ಲಿರುವ ಲೋಪದೋಷಗಳನ್ನು ಸರಿಪಡಿಸುವುದಕ್ಕಾಗಿ ಏಕಸದಸ್ಯ ಆಯೋಗವನ್ನು ನೇಮಕ ಮಾಡಿದ್ದೀರಿ. ಈ ಆಯೋಗದವರು ಯಾವಾಗ ವರದಿ ಕೊಡುತ್ತಾರೋ ಗೊತ್ತಿಲ್ಲ?

ಶ್ರೀ ಎ. ಆರ್. ಬದರೀನಾರಾಯಣ್.—ಮೊನ್ನೆದಿವಸ ಅವರ ವರದಿ ನನ್ನ ಕೈಸೇರಿದೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಇಲಾಖೆ ಇಂದು ಬೃಹದಾಕಾರವಾಗಿ ಬೆಳೆಯುತ್ತಿದೆ. ಅದರಂತೆ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತಿವೆ. ಈ ಸಮಸ್ಯೆಗಳನ್ನು ಬಗೆಹರಿಸಲು ತಮ್ಮಲ್ಲಿ ಸಹೃದಯತೆ ಇದ್ದರೆ ಸಾಲದು, ಕಠಿಣ ಹೃದಯ ಇರಬೇಕಾಗುತ್ತದೆ. ಕನ್ನಡ ಮಾಧ್ಯಮದ ಬಗ್ಗೆ ಹೇಳಬೇಕೆಂದರೆ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಹೋಗುತ್ತಿಲ್ಲ. ಎಲ್ಲ ಹಂತಗಳಲ್ಲಿಯೂ ನಮ್ಮ ಪ್ರಾದೇಶಿಕ ಭಾಷೆಯಲ್ಲಿಯೇ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದಕ್ಕೆ ಸರ್ಕಾರದವರು ಸೂಕ್ತ ಏರ್ಪಾಡು ಮಾಡಬೇಕು. ಕಾಲೇಜುಗಳಲ್ಲಿಯೂ ಸಹ ವಿದ್ಯಾರ್ಥಿಗಳು ತಮ್ಮ ಪರೀಕ್ಷೆಯಲ್ಲಿ ಪ್ರಾದೇಶಿಕ ಭಾಷೆಯಲ್ಲಿಯೇ ಉತ್ತರ ಬರೆದರೆ ಅವರು ಹೆಚ್ಚು ಅಂಕಗಳನ್ನು ಗಳಿಸುವುದಕ್ಕೆ ಅವಕಾಶವಾಗುತ್ತದೆ. ಅದೇ ಬೇರೆ ಭಾಷೆಯಲ್ಲಿ ಉತ್ತರ ಬರೆದರೆ ಹೆಚ್ಚು ಅಂಕಗಳನ್ನು ಗಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಪಿ. ಎಸ್. ಸಿ. ಅವರು ನಡೆಸುವ ಪರೀಕ್ಷೆಗಳಲ್ಲಿಯೂ ಸಹ ಕನ್ನಡದಲ್ಲಿಯೇ ಉತ್ತರ ಬರೆಯುವ ಏರ್ಪಾಡಾಗಬೇಕೆಂದು ನಾನು ಈ ಹಿಂದೆಯೇ ಹೇಳಿದ್ದೇನೆ. ಇವೊತ್ತು ಕೂಡ ಅದನ್ನೇ ಹೇಳುತ್ತೇನೆ. ಈ ಬಗ್ಗೆ ಏನೇ ಎಡರುತೊಡರುಗಳು ಇದ್ದರೂ ಸಹ ಶಿಕ್ಷಣ ಮಾಧ್ಯಮದಲ್ಲಿ ಕನ್ನಡವನ್ನೇ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ,

ಮೊನ್ನೆತಾನೆ ಶ್ರೀ ಜೆ. ಬಿ. ಮಲ್ಲಾರಾಧ್ಯರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಿದ್ದೀರಿ. ಬೇರೆ ಯಾರೂ ಸಿಕ್ಕಲಿಲ್ಲವೇ ಎಂದು ಕೇಳುತ್ತೇನೆ. ಶ್ರೀ ಎ. ಸಿ. ದೇವೇಗೌಡರು ಇರಲಿಲ್ಲವೇ? ಶ್ರೀ ಗುರುದತ್ ಇರಲಿಲ್ಲವೇ?

ಶ್ರೀ ಎ. ಆರ್ ಬದರೀನಾರಾಯಣ.—ಅವರು ಅನೇಕ ಎಜುಕೇಷನ್ ರಿಫಾರಮ್ಸ್ ಕಮಿಟಿಗಳಲ್ಲಿ ಕೆಲಸ ಮಾಡಿ ಅನುಭವ ಪಡೆದಿದ್ದಾರೆಂಬ ಕಾರಣದಿಂದ ಅವರನ್ನು ತೆಗೆದುಕೊಳ್ಳಲಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಅವರು ಡಿ. ಪಿ. ಐ. ಆಗಿ ಕೆಲಸ ಮಾಡಿದ್ದರು ನಿಜ. ಆದರೆ ಈ ಕೆಲಸವನು ನಿರ್ವಹಣೆ ಮಾಡಲು ಇನ್ನೂ ಹಲವಾರು ಜನರು ಇದ್ದರು. ತಾವು ಯಾವ ಒತ್ತಡದ ಮೇಲೆ ಬಲಿಯಾಗಿದ್ದೀರೋ ಗೊತ್ತಿಲ್ಲ. ಈ ಒಂದು ರಂಗದಲ್ಲಿ ಅವರಿಗಿಂತ ಇನ್ನೂ ಹೆಚ್ಚು ಅರ್ಹತೆ ಹೊಂದಿದ ಜನರು ಇದ್ದರು.

ಶ್ರೀ ಎ. ಆರ್ ಬದರೀನಾರಾಯಣ.—ನಾನು ಯಾವ ಒತ್ತಡಕ್ಕೂ ಬಲಿಯಾಗಿಲ್ಲ. ನಾನೇ ಅವರನ್ನು ಆಯ್ಕೆ ಮಾಡಿರುವುದು.

ಶ್ರೀ ಕೋಣಂದೂರು ಲಿಂಗಪ್ಪ.—ಡಾ. ಶಿವರಾಮಕಾರಂತರು ಇರಲಿಲ್ಲವೇ?

ಶ್ರೀ ಎಚ್. ಡಿ. ದೇವೇಗೌಡ.— ಈ ವಿಷಯದಲ್ಲಿ ತಾವು ಎಡವಿದ್ದೀರಿ ಎಂದು ನನ್ನ ಭಾವನೆ. ಈಗ ಕಮಿಟಿಯನ್ನು ರಚನೆ ಮಾಡಿರುವುದರಿಂದ ಆ ಬಗ್ಗೆ ನಾನು ಹೆಚ್ಚು ವ್ಯಾಖ್ಯಾನ ಮಾಡುವುದಿಲ್ಲ.

ಇನ್ನು ಪ್ರೈಮರಿ ಮತ್ತು ಸೆಕೆಂಡರಿ ಶಾಲೆಗಳ ಶಿಕ್ಷಕರನ್ನು ವರ್ಗ ಮಾಡುವ ಬಗ್ಗೆ ಒಂದು ಧೋರಣೆಯನ್ನು ಹಾಕಿಕೊಳ್ಳಬೇಕಾಗುತ್ತದೆ. ಇಂದು ಇವರನ್ನು ವರ್ಗ ಮಾಡುವುದರಲ್ಲಿ ಹೆಚ್ಚಿನ ಒತ್ತಡಕ್ಕೆ ಮಣಿಯುತಕ್ಕ ಸನ್ನಿವೇಶವನ್ನು ನಾನು ನೋಡಿದ್ದೇನೆ. ಅದು ಆಗಬಾರದು. ಹಿಂದೆ ಏನಾದರು ಆ ರೀತಿ ಆಗಿದ್ದರೆ ಅದು ಸರಿ ಎಂದು ನಾನು ಹೇಳುವುದಿಲ್ಲ. ಆ ಕೆಟ್ಟ ಸಂಪ್ರದಾಯವನ್ನೇ ಮುಂದುವರಿಸಿಕೊಂಡು ಹೋಗುವುದು ಬೇಡ. ಕಳೆದ ಒಂದು ವರ್ಷದಿಂದ ಬಹುಶಃ ಪ್ರತಿ ತಿಂಗಳೂ ಸಹ ವರ್ಗಾವಣೆಯಾಗುತ್ತಿದೆ.

ಶ್ರೀ ಎ. ಆರ್. ಬದರೀನಾರಾಯಣ.—ದೂರುಗಳು ಇದ್ದರೆ ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ದೂರುಗಳು ಇದ್ದರೂ ಸಹ ಜನವರಿ ತಿಂಗಳಲ್ಲಿ ವರ್ಗ ಮಾಡುವುದರಲ್ಲಿ ಏನು ಅರ್ಥವಿದೆ? ತಪ್ಪಿದ್ದರೆ ಬೇಕಾದರೆ ಸಸ್ಪೆಂಡ್ ಮಾಡಿ. ಇಲಾಖಾ ತನಿಖೆ ಏರ್ಪಡಿಸಿ. ಆದರೆ ಕೆಟ್ಟ ಉಪಾಧ್ಯಾಯರನ್ನು ಬೇರೆ ಕಡೆಗೆ ವರ್ಗ ಮಾಡಿದರೆ ಅವರು ಅಲ್ಲಿಯೂ ಕೆಟ್ಟ ಕೆಲಸ ಮಾಡುತ್ತಾರೆ. ತಾವು ರಾಜಕೀಯಕ್ಕೆ ಒಳಗಾಗಿ ವರ್ಷದ ಮಧ್ಯದಲ್ಲಿ ವರ್ಗ ಮಾಡುವುದು ಬೇಡ. ಉಪಾಧ್ಯಾಯರೆಲ್ಲರೂ ಒಳ್ಳೆಯವರಿದ್ದಾರೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕೆಟ್ಟವರೂ ಇದ್ದಾರೆ. ಅಂತಹವರಿಗೂ ರಕ್ಷಣೆ ಕೊಟ್ಟುಕೊಂಡು ಬರುವುದು ಹಿಂದಿನಿಂದ ಜಾರಿಯಲ್ಲಿದೆ. ಒಂದು ಮುಖ್ಯವಾದ ವಿಚಾರವನ್ನು ಹೇಳಬೇಕೆಂದರೆ, ಯಾರಾದರೂ ಈ ಸಭೆಯಲ್ಲಿ ಉಪಾಧ್ಯಾಯರುಗಳ ನೆರವಿಲ್ಲದೆ ಚುನಾವಣೆಯಲ್ಲಿ ಗೆದ್ದು ಬಂದಿದ್ದೇವೆಂದು ಹೇಳಿದರೆ ಅದು ಆತ್ಮವಂಚನೆಯ ಮಾತಾಗುತ್ತದೆ. ಇವರು ನನಗೂ ಸಹಾಯ ಮಾಡಿದ್ದಾರೆ, ಶ್ರೀಮಾನ್ ಬದರೀನಾರಾಯಣ ಅವರಿಗೂ ಪರೋಕ್ಷವಾಗಿ ಸಹಾಯ ಮಾಡಿರಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಒಂದು ಪಕ್ಷ ರಾಜಕೀಯ ಜಂಜಾಟವಲ್ಲಿ ಈ ಉಪಾಧ್ಯಾಯರುಗಳನ್ನು ಫುಟ್‌ಬಾಲಿನಂತೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಒದೆಯುವುದು ಬೇಡ. ವರ್ಷದ ಮಧ್ಯದಲ್ಲಿ ಇವರನ್ನು ವರ್ಗ ಮಾಡಿದರೆ ಅವರಿಗೆ ಮನೆಯ ಪ್ರಾಬ್ಲಮ್ ಬರುತ್ತದೆ. ಅದರಲ್ಲಿಯೂ ಅವರು ಹರಿಜನರಾಗಿದ್ದರೆ ಅವರಿಗೆ ಹಳ್ಳಿಗಳಲ್ಲಿ ಮನೆ ಸಿಗುವುದೇ ಕಷ್ಟ. ಈ ಕಾರಣದಿಂದ ವರ್ಷದ ಮಧ್ಯದಲ್ಲಿ ವರ್ಗ ಮಾಡುವುದಾದರೆ ಅವರಿಗೆ ಬೇಕಾದ ಎಲ್ಲ ಬೇಸಿಕ್ ಅನುಕೂಲತೆಗಳನ್ನು ಒದಗಿಸಿಕೊಡಬೇಕು. ಇಲ್ಲದಿದ್ದರೆ ಅವರು ಶಾಲೆಗಳಲ್ಲಿಯೇ ಮಲಗಬೇಕಾಗುತ್ತದೆ ಮತ್ತು ಅಡಿಗೆ ಮಾಡಿಕೊಳ್ಳಬೇಕಾಗುತ್ತದೆ. ಕೆಟ್ಟವರನ್ನು ಒಂದು ತಾಲ್ಲೂಕ್‌ನಿಂದ ಇನ್ನೊಂದು ತಾಲ್ಲೂಕ್‌ಗೆ ವರ್ಗ ಮಾಡಿದರೆ ಅವರು ಒಳ್ಳೆಯವರಾಗುತ್ತಾರೆಂದು ತಿಳಿದುಕೊಂಡಿದ್ದರೆ ಅದು ತಪ್ಪಾಗುತ್ತದೆ. ಬೇರೆ ಇಲಾಖೆಯ ನೌಕರರನ್ನು ತಾಲ್ಲೂಕ್‌ನಿಂದ ತಾಲ್ಲೂಕ್‌ಗೆ ವರ್ಗ ಮಾಡುವ ಅವಕಾಶವಿರುವಾಗ, ಈ ಉಪಾಧ್ಯಾಯರುಗಳಿಗೆ ಆ ಒಂದು ಅವಕಾಶ ಏತಕ್ಕೆ ಇರಬಾರದು ?

3-00 P. M.

ಒಂದು ವೇಳೆ ಕೆಟ್ಟವರು ಇದ್ದರೆ ಅವರಿಗೆ ಶಿಕ್ಷೆಯನ್ನು ವಿಧಿಸಬೇಕು. ಅವರನ್ನು ಸಸ್ಪೆಂಡ್ ಮಾಡಬೇಕು. ಅಥವಾ ಅವರಿಗೆ ಇನ್‌ಕ್ರಿಮೆಂಟ್ ನಿಲ್ಲಿಸಬೇಕು. ಅಥವಾ ಇನ್ನೂ ಯಾವುದಾದರೂ ಒಂದು ರೀತಿಯ ಶಿಕ್ಷೆಯನ್ನು ವಿಧಿಸಬೇಕು. ಆದರೆ ಇನ್‌ಡಿಸ್‌ಕ್ರಿಮಿನೇಟ್ ಆಗಿ ಶಿಕ್ಷಕರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾ ಮಾಡುವುದು ಸರಿಯಲ್ಲ. ಅಧ್ಯಾಪಕರಿಗೆ ಸರ್ಕಾರದವರು ಮನೆಗಳನ್ನು ಕಟ್ಟಿಕೊಡುವ ಹಾಗಿದ್ದರೆ ಅವರನ್ನು ವರ್ಗಾ ಮಾಡಿ. ಅವರು ಕ್ರಿಮಿನಲ್ ವ್ಯವಹಾರದಲ್ಲಿ ಯಾರಾದರೂ ಇದ್ದರೆ ಅಂಥವರನ್ನು ಕಿತ್ತು ಹಾಕಿ ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ರಾಜಕೀಯ ಕಾರಣಕ್ಕೋಸ್ಕರ ಶಿಕ್ಷಕರನ್ನು ವರ್ಗಾ ಮಾಡುವ ಸನ್ನಿವೇಶ ಬಂದರೆ ಅದು ಒಳ್ಳೆಯದಲ್ಲ. ಶಿಕ್ಷಕರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಟ್ರಾನ್ಸ್‌ಫರ್ ಮಾಡಿರತಕ್ಕ ಪಟ್ಟಿ ನನ್ನ ಹತ್ತಿರ ಇದೆ. ಹೊಳಲ್ಕೆರೆ ತಾಲ್ಲೂಕಿನಲ್ಲಿ ಒಬ್ಬರು ಉಪಾಧ್ಯಾಯರನ್ನು ಒಂದು ವರ್ಷದಲ್ಲಿ 9 ಸಾರಿ ಟ್ರಾನ್ಸ್‌ಫರ್ ಮಾಡಿದ್ದಾರೆ. ಒಂದು ಮಾತು ಹೇಳುತ್ತೇನೆ. ಕೆಲವು ಅಧಿಕಾರಿಗಳು ಕೆಳಮಟ್ಟದಲ್ಲಿ ರಾಜಕೀಯ ಮುಖಂಡರ ಒತ್ತಡಕ್ಕೆ ಮಣಿದು ಈ ರೀತಿ ಮಾಡಿದರೆ ಇದನ್ನು ಸರಿಪಡಿಸುವುದಕ್ಕಾಗುತ್ತದೆಯೇ ? ಚಿತ್ರದುರ್ಗ ಜಿಲ್ಲೆಯಲ್ಲಿ ರಾಜಕಾರಣಿಗಳು ಬಣಜಿಗ ಲಿಂಗಾಯಿತ, ಸಾದಲಿಂಗಾಯಿತ ಎನ್ನುವ ಭೇದ ಭಾವವನ್ನು ಮುಂದುವರಿಸಿಕೊಂಡು ಹೋದರೆ ಹಿಂದಿನವರು ಮಾಡಿದ ಪಾಪ ಇವರಿಗೂ ಸ್ವಲ್ಪ ತಟ್ಟುತ್ತದೆ. ಆದ್ದರಿಂದ ಈ ರಾಜಕೀಯವನ್ನು ಇನ್ನಾದರೂ ಕೈಬಿಡಿ. ಟ್ರಾನ್ಸ್‌ಫರ್ ಹೆಸರಿನಲ್ಲಿ ಅವ್ಯವಹಾರ ಮಾಡುವುದಕ್ಕೆ ಅವಕಾಶವನ್ನು ಕೊಡಬೇಡಿ. ಇದನ್ನು ತಡೆಯಬೇಕು. ಕೆಲವು ಶಾಸಕರು ನೌಕರರ ಟ್ರಾನ್ಸ್‌ಫರ್, ಅಪಾಯಿಂಟ್‌ಮೆಂಟ್ ಇಂಥವುಗಳಿಗೆ ಶಿಫಾರಸ್ಸು ಮಾಡುವುದು ಬಿಟ್ಟು ಬೇರೆ ಯಾವ ಕೆಲಸವನ್ನೂ ಮಾಡುವುದು ಕಾಣುತ್ತಿಲ್ಲ. ಇದು ನಿಜವಾಗಿಯೂ ದುರದೃಷ್ಟಕರವಾದ ಸಂಗತಿ. ಇದಕ್ಕೆ ಅವಕಾಶವನ್ನು ಕೊಡಬಾರದು ಎಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಕೆಲವು ಇನ್‌ಸ್ಟಿಟ್ಯೂಷನ್‌ಗಳಿಗೆ ಕೇವಲ ರಾಜಕೀಯ ದೃಷ್ಟಿಯಿಂದ ಕಿರುಕುಳ ಕೊಡುತ್ತಿದ್ದಾರೆ. ಇದು ಸರಿಯಾದ್ದಲ್ಲ. ಮತ್ತು ಯೋಗ್ಯವಲ್ಲ. ಬಿಜಾಪುರ ಮತ್ತು ಧಾರವಾಡ ಜಿಲ್ಲೆಯಲ್ಲಿ ಜಾಯಿಂಟ್ ಡೈರೆಕ್ಟರು ರಾಜಕಾರಣವನ್ನು ಹೆಚ್ಚು ಮಾಡಿದ್ದಾರೆ. ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಇನ್ನು ಮುಂದೆ ಇಂಥಾ ವ್ಯವಹಾರಗಳು ನಡೆಯುವುದಕ್ಕೆ ಅವಕಾಶವನ್ನು ಕೊಡಬಾರದು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕೊನೆಯದಾಗಿ ಸಂಗೀತ, ನಾಟಕ, ಮತ್ತು ಲಲಿತಕಲಾ, ಅಕ್ಯಾಡಮಿ ವಿಷಯದಲ್ಲಿ ಹೇಳುವುದಾದರೆ ಈ ಚರ್ಚೆಗೆ ಒಂದು ದಿವಸ ಅವಕಾಶವನ್ನು ಕೊಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರು ಈ ಚರ್ಚೆಗೆ ಒಂದು ದಿವಸ ಕಾಲಾವಕಾಶವನ್ನು ಕೊಟ್ಟರೆ ಅಲ್ಲಿ ನಡೆಯತಕ್ಕ ಅವ್ಯವಹಾರಗಳು ಏನಿವೆ ಅವುಗಳನ್ನೆಲ್ಲಾ ಚರ್ಚೆ ಮಾಡಬೇಕಾಗುತ್ತದೆ. ಅಲ್ಲಿ ವಿ. ಎಸ್. ಕೌಶಿಕ್ ಎನ್ನುವವರು ಮಾಡತಕ್ಕವರಿದ್ದಾರೆ. ಅವರ ಮೇಲೆ ಬಹಳ ಆರೋಪಣೆಗಳು ಇವೆ. ಅವುಗಳನ್ನು ನಾನು ಈ ಸಭೆಯಲ್ಲಿ ವ್ಯಕ್ತಪಡಿಸುವುದಕ್ಕೆ ಹೋಗುವುದಿಲ್ಲ. ಅವರು ಹೆಣ್ಣುಮಕ್ಕಳ ಕಣ್ಣಿನಲ್ಲಿ ನೀರು ಹಾಕಿಸಿದ್ದಾರೆ. ಇವೆಲ್ಲಾ ಆಗಬಾರದು. ಅಂಥವರಿಗೆ ನೀವು ರಕ್ಷಣೆಯನ್ನು ಕೊಡಬಾರದು. ನಿಮ್ಮನ್ನು ಇಂಥಾ ಆರೋಪಣೆಗಳಿಗೆ ನಾನು ಗುರಿಮಾಡುವುದಿಲ್ಲ. ಆದರೆ ಇಂಥಾ ಲಂಪಟರಿಗೆ ಅವಕಾಶವನ್ನು

(ಶ್ರೀ ಎಚ್. ಡಿ. ದೇವೇಗೌಡ)

ಕೊಡಬಾರದು. ಸ್ವಲ್ಪ ಬಿಗಿಯಾಗಿ ಇರಬೇಕಾಗುತ್ತದೆ. ವಿದ್ಯಾ ಇಲಾಖೆಯಲ್ಲಿ ಅನೇಕ ಜನ ಹೆಣ್ಣು ಮಕ್ಕಳು ಶಿಕ್ಷಕಿಯರಾಗಿದ್ದಾರೆ. ಅಕ್ಯಾಡಮಿಯಲ್ಲಿ ಇಂಥಾ ಒಂದು ವ್ಯವಹಾರ ನಡೆಯುವುದು ಸರಿಯಲ್ಲ. ಅವರ ಬಗ್ಗೆ ತಾವು ಎಚ್ಚರಿಕೆಯನ್ನು ವಹಿಸಬೇಕು ಎಂದು ನಾನು ಹೇಳುತ್ತೇನೆ. ಈ ಎರಡು ಅಕ್ಯಾಡಮಿಗಳ ಬಗ್ಗೆ ನೀವು ಬಹಳ ಹುಷಾರಾಗಿರಬೇಕು. ಅವರ ಜೊತೆಗೆ ಇವರು ಫೋಟೊ ಸಹ ತೆಗೆಸಿಕೊಂಡಿದ್ದಾರೆ. ಇನ್ನೊಂದು ಅಕ್ಯಾಡಮಿಗೆ ಕೊಡುವ ಹಣವನ್ನು ಸಹ ತಡೆಹಿಡಿದಿದ್ದಾರೆಂದು ಕೇಳಿದ್ದೇನೆ. ಇದಕ್ಕೆ ಕಾರಣವೇನೆಂಬುದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ಮೈಸೂರು ಸ್ಟೇಟ್ ಸಂಗೀತ ನಾಟಕ ಅಕ್ಯಾಡಮಿಯ ಬಜೆಟ್ ಸಹ ಪಾಸ್ ಮಾಡಿಲ್ಲವೆಂದು ಕಾಣುತ್ತದೆ ಅದರ ಬಗ್ಗೆ ಸ್ವಲ್ಪ ತಾವು ವಿಚಾರಿಸಬೇಕು. ಇನ್ನು ಹೆಚ್ಚು ಇದರ ಬಗ್ಗೆ ಹೇಳುವುದಿಲ್ಲ. ಇನ್ನೊಂದು ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಪಬ್ಲಿಕ್ ಲೈಬ್ರರಿಯಲ್ಲಿ ಸುಮಾರು 358 ಪೋಸ್ಟುಗಳನ್ನು ಇನ್ನೂ ಖಾಯಂ ಗೊಳಿಸಿಲ್ಲವೆಂದು ಕೇಳಿದ್ದೇನೆ. ಜನರಿಂದ ಇದಕ್ಕೋಸ್ಕರ 25 ಲಕ್ಷ ರೂಪಾಯಿ ವಸೂಲು ಮಾಡುತ್ತಿದ್ದಾರೆ. ಬೆಂಗಳೂರು ನಗರದಲ್ಲಿರತಕ್ಕಂತಹ ಲೈಬ್ರರಿ ಅಧಿಕಾರಿಗಳ ಬಗ್ಗೆ ನಾನು ಹಿಂದೆ ಸಾಕಷ್ಟು ಪ್ರಸ್ತಾಪ ಮಾಡಿದ್ದೇನೆ. ಇಲ್ಲಿ ಕೊಳ್ಳತಕ್ಕಂತಹ ಪುಸ್ತಕಗಳ ಬಗ್ಗೆ ಸಹ ಒಂದು ರ್ಯಾಕೆಟ್ ಇದೆ ಎಂದು ಕೇಳಿದ್ದೇನೆ. ಇವರು ಮಾಸ್ ಪರ್ಚೇಸ್ ಮಾಡುವಾಗ ಅನಾವಶ್ಯಕವಾದ ಪುಸ್ತಕಗಳನ್ನು ಸಹ ಕೊಂಡುಕೊಳ್ಳುತ್ತಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ ಯಾರಿಗೋ ಅನುಕೂಲ ಮಾಡುವುದಕ್ಕಾಗಿ ಈ ರೀತಿ ಮಾಡುತ್ತಿದ್ದಾರೆ. ಅದರ ಬಗ್ಗೆ ಸಹ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ಮಾಡುತ್ತೇನೆ. ಏಕೆಂದರೆ ತಾವು ಅಧಿಕಾರಿಗಳ ಜೊತೆಗೆ ಶಾಮೀಲಾಗಬಾರದು. ಅವರ ಮೇಲೆ ಇರುವಂತಹ ಆರೋಪಣೆ ನಿಜವಾಗಿದ್ದರೆ ಇದರ ಬಗ್ಗೆ ಉಗ್ರ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಬೆಂಗಳೂರು ಯೂನಿವರ್ಸಿಟಿಯಲ್ಲಿ ಒಂದು ಮಥಾಯಿ ಎನ್‌ಕ್ವಾಯರಿ ಕಮಿಶನ್ ಮಾಡಿ ರಿಪೋರ್ಟ್ ಬಂದಿತ್ತು. ಆ ಮೇಲೆ ಮಾನ್ಯ ಲಕ್ಕಪ್ಪನವರು, ಎಂ. ಪಿ. ಇವರು ಅನ್‌ಟೋಲ್ಡ್ ಸ್ಟೋರಿ ಎಂಬ ಒಂದು ಪುಸ್ತಕವನ್ನು ಬರೆದು ಪ್ರಿಂಟ್ ಮಾಡಿಸಿ ಪ್ರಚಾರ ಮಾಡಿದ್ದಾರೆ ಅದರ ಬಗ್ಗೆ ತಾವು ಸ್ವಲ್ಪ ತಿಳಿಸಬೇಕು. ಆ ಮೇಲೆ ಯೂನಿವರ್ಸಿಟಿಗಳನ್ನು ಮಾಡತಕ್ಕ ವಿಚಾರದಲ್ಲಿ ಸರ್ಕಾರದ ನಿರ್ದಿಷ್ಟವಾದ ಧೋರಣೆ ಏನೆಂಬುದನ್ನು ತಿಳಿಸಬೇಕು. ಇವತ್ತು ಮೆಡಿಕಲ್ ಕಾಲೇಜಿಗೆ ಒಂದು ಯುನಿವರ್ಸಿಟಿ ಮಾಡಬೇಕೆಂದು ಬಜೆಟ್ಟಿನಲ್ಲಿ ಸಹ 10 ಲಕ್ಷ ರೂಪಾಯಿಯನ್ನು ಒದಗಿಸಿದ್ದಾರೆ. ನಾಳೆ ಇಂಜಿನಿಯರಿಂಗ್ ಕಾಲೇಜಿನವರೂ ಒಂದು ಯುನಿವರ್ಸಿಟಿ ಮಾಡಬೇಕೆಂದು ಹೇಳಬಹುದು. ಅದರ ನಂತರ ಆರ್ಟ್ಸ್, ಸಯನ್ಸ್ ಮತ್ತು ಕಾಮರ್ಸಿನವರೂ ಒಂದು ಯೂನಿವರ್ಸಿಟಿ ಕೊಡಬೇಕೆಂದು ಕೇಳಬಹುದು. ಆದ್ದರಿಂದ ಇದಕ್ಕೆ ಏನಾದರೂ ಒಂದು ನೀತಿ ಇಟ್ಟುಕೊಳ್ಳುವುದು ಒಳ್ಳೆಯದು. ಇವತ್ತು 9 ಮೆಡಿಕಲ್ ಕಾಲೇಜುಗಳು ಇವೆ, ಅದಕ್ಕೆ ಒಂದು ಯೂನಿವರ್ಸಿಟಿ ಮಾಡುವುದು ಸರಿಯಲ್ಲ. ಹಾಗಿದ್ದರೆ ಇಂಜಿನಿಯರಿಂಗ್‌ಗೆ ಸಹ ಏಕೆ ಒಂದು ಮಾಡಬಾರದು ? ನಾಳೆ ಆ ಡಿಮ್ಯಾಂಡ್ ಸಹ ನಿಮ್ಮ ಮುಂದೆ ಬರುತ್ತದೆ. ಇದು ಒಳ್ಳೆಯ ಸಂಪ್ರದಾಯವಲ್ಲವೆಂದು ಮಾತ್ರ ಹೇಳುತ್ತೇನೆ.

ಆ ಮೇಲೆ ತಾವು ಮೂರು ಯೂನಿವರ್ಸಿಟಿಗಳ ಬಗ್ಗೆ ಒಂದು ಕಮಿಟಿ ಮಾಡಿದ್ದೀರಿ. ರಾಜ್ಯದಲ್ಲಿ ಹೊಸ ಯೂನಿವರ್ಸಿಟಿಗಳನ್ನು ಮಾಡತಕ್ಕ ಕಾಲದಲ್ಲಿ ಮೊದಲು ಇರತಕ್ಕಂತಹ ಯೂನಿವರ್ಸಿಟಿಗಳ ಯೋಗ್ಯತೆಗೆ ಧಕ್ಕೆಯಾಗಬಾರದು. ಈಗ ಇರತಕ್ಕಂತಹ ಯೂನಿವರ್ಸಿಟಿಗಳೇ ಬೆಳೆದಿಲ್ಲ. ಅದೇ ರೀತಿ ನಮ್ಮ ಹಣದ ಪರಿಸ್ಥಿತಿಯನ್ನು ಸಹ ನೋಡಿಕೊಂಡು ಇದನ್ನು ಯೋಚನೆ ಮಾಡಬೇಕಾಗುತ್ತದೆ. ಇವತ್ತು ಗುಲ್ಬರ್ಗ, ಮಂಗಳೂರು ಮತ್ತು ತಮ್ಮ ಊರಿನಲ್ಲಿ ಒಂದೊಂದು ಯೂನಿವರ್ಸಿಟಿಯನ್ನು ಮಾಡಬೇಕೆಂದು ಹೇಳುತ್ತಿದ್ದೀರಿ. ಮೊದಲು ಸರ್ಕಾರಕ್ಕೆ ಶಕ್ತಿ ಇದೆಯೇ ಎಂಬುದನ್ನು ನೋಡಿಕೊಂಡು ಮಾಡಬೇಕಾಗುತ್ತದೆ. ನನ್ನ ಕಾಲದಲ್ಲಿ ಮಾಡಿದೆ ಎಂದು ಹೇಳಿಕೊಳ್ಳುವುದಕ್ಕೆ ಮಾತ್ರ ಮಾಡಬೇಡಿ. ಅಧಿಕಾರ ಬಿಟ್ಟು ಹೋದ ಮಾರನೆಯ ದಿನ ನಮ್ಮನ್ನು ಯಾರೂ ಕೇಳುವವರು ಇಲ್ಲ. ಉದಾಹರಣೆಗೆ ಹಿಂದೆ ಕೆಲವು ನಿವೃತ್ತ ಅಧಿಕಾರಿಗಳು ತಮ್ಮ ಮನೆಯಲ್ಲಿ ಜವಾನರಿಂದ ಬಟ್ಟೆ ಒಗೆಸಿಕೊಳ್ಳುತ್ತಿದ್ದರು. ಆದರೆ ಅಂಥ ಐ ಎ ಎಸ್ ಅಧಿಕಾರಿಗಳು ಈಗ ರಿಟೈರ್ ಆದ ಮೇಲೆ ಬ್ಯಾಗ್ ಹಿಡಿದುಕೊಂಡು ತರಕಾರಿಗೆ ಮಾರ್ಕೆಟ್‌ಗೆ ಹೋಗುತ್ತಿದ್ದಾರೆ. ಇಷ್ಟು ಸೂಚನೆಗಳನ್ನು ಕೊಟ್ಟು, ಸರ್ಕಾರ ಇದರ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಬೇಕೆಂದು ಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಕರಿಯಪ್ಪ (ಕನಕಪುರ).---ಮಾನ್ಯ ಅಧ್ಯಕ್ಷರೇ, ವಿದ್ಯಾ ಮಂತ್ರಿಯವರು ನಮ್ಮ ಮುಂದೆ ಇಟ್ಟಿರತಕ್ಕಂತಹ 17ನೇ ನಂಬರಿನ ಡಿಮ್ಯಾಂಡಿಗೆ ನನ್ನ ಪೂರ್ಣವಾದ ಒತ್ತಾಸೆಯನ್ನು ನೀಡುತ್ತಾ ಕೆಲವು ಸೂಚನೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ವಿಲ್‌ಡ್ಯುರೆಂಟ್ ತನ್ನ ಸ್ಟೋರಿ ಆಫ್ ಫಿಲಾಸಫಿಯಲ್ಲಿ ಎಮ್ಯಾನ್ಯುಅಲ್ ಕ್ಯಾಂಟನ ವಿಚಾರ ಪ್ರಸ್ತಾಪಿಸುತ್ತಾ Education does not make a man good but it makes a man clever. ಎಂದು ಹೇಳಿದ್ದಾರೆ. ಇದರಲ್ಲಿ ಅಡಕವಾಗಿರುವಂತಹ ತತ್ವ ಏನು ಮತ್ತು ನಮ್ಮ ವಿದ್ಯಾಭ್ಯಾಸದ ಕ್ರಮದಲ್ಲಿರತಕ್ಕಂತಹ ನ್ಯೂನತೆಗಳೇನೆಂಬುದನ್ನು ನಾವು ಸ್ವಲ್ಪ ವಿಚಾರಿಸಬೇಕಾದುದು ಬಹಳ ಅವಶ್ಯ. ನಮ್ಮ ವಿದ್ಯಾಭ್ಯಾಸ ಕ್ರಮ ನಿರುದ್ಯೋಗವನ್ನು ಬೆಳೆಸುತ್ತಿದೆ. ಅಧ್ಯಾಪಕರಿಂದ ನಾವು ನಿರೀಕ್ಷಿಸಿದಷ್ಟು ಸೇವಾ ಮನೋಭಾವನೆ ಲುಪ್ತವಾಗಿರುವುದು ಕಂಡು ಬರುತ್ತದೆ. ಎಜುಕೇಶನ್‌ನಲ್ಲಿ ನಿರತರಾಗಿರತಕ್ಕಂತಹ ಅಧ್ಯಾಪಕರು ಸೇವಾ ಮನೋಭಾವನೆಯಿಂದ ಕೂಡಿರಬೇಕು. ವಿದ್ಯಾರ್ಥಿಗಳು ನಮ್ಮ ಮಕ್ಕಳು ಎಂಬ ದೃಷ್ಟಿಯಿಂದ ಕೆಲಸ ಮಾಡಬೇಕೆಂದು ನಿರೀಕ್ಷಿಸುತ್ತೇವೆ. ಆದರೆ ಅಕ್ಷರಶಃ ಇದು ನಿಜವಾಗಿವೆಯೇ ಎನ್ನುವುದನ್ನು ನಾವು ಪರೀಕ್ಷೆ ಮಾಡಿ ನೋಡಿದರೆ ನಮಗೆ ಅನುಮಾನ ಕಾಣುತ್ತದೆ. ಈಗ ಅಧ್ಯಾಪಕರಿಗೆ ನಾವು ಕೈತುಂಬಾ ಸಂಬಳ ಕೊಡುತ್ತೇವೆ; ಸೆಮಿನರ್ ಮಾಡಿ ಅವರ ಜ್ಞಾನ ಮಟ್ಟವನ್ನು ಹೆಚ್ಚಿಸುವುದಕ್ಕೆ ನೆರವಾಗುತ್ತಿದ್ದೇವೆ.

ಶಾಲಾ ಕಟ್ಟಡಗಳನ್ನೂ ಮತ್ತು ಪುಸ್ತಕಾಲಯಗಳನ್ನೂ ಇನ್ನೂ ಇತರ ಸೌಲಭ್ಯಗಳನ್ನು ಕೊಟ್ಟಿದ್ದಾರೆ. ಇಷ್ಟಾದರೂ ಪರೀಕ್ಷಾ ಫಲಿತಾಂಶಗಳು ಏನು ಬರುತ್ತವೆಂಬುದನ್ನು ನೋಡಬೇಕು. ಆದರೆ ಅಧ್ಯಾಪಕರುಗಳು ಕೇವಲ ಅಲ್ಪ ಸಂಖ್ಯೆಯಲ್ಲಿದ್ದಾರೆ. ಟ್ರೈನಿಂಗ್ ಇದ್ದವರು ಹಾಗೂ ಶಿಕ್ಷಿತ ಅಧ್ಯಾಪಕರ ಸಂಖ್ಯೆ ವರ್ಷಗಳ ಹಿಂದೆ ಬಹಳ ಕಡಿಮೆಯಾಗಿತ್ತು. ಸುಮಾರು ಸೇಕಡ 70 ಅಥವಾ 80ರಷ್ಟು ಮಂದಿಯವರೆಗೆ ಈಗ ಟ್ರೈನಿಂಗ್ ಮಾಡಿಕೊಂಡು ಬಂದಂಥ ಉಪಾಧ್ಯಾಯರುಗಳು ಇದ್ದಾರೆ. ಆ ಪರಿಸ್ಥಿತಿ ಇರುವಾಗ ಪರೀಕ್ಷಾ ಫಲಿತಾಂಶ ಹೇಗೆ ಬರುತ್ತದೆಂದರೆ, ಅದು ಹೃದಯವಿದ್ರಾವಕವಾದ ವಿಚಾರವಾಗಿರುತ್ತದೆ. ಅದು ಎಲ್ಲರ ಮನಸ್ಸನ್ನು ನೋಯಿಸುವ ವಿಚಾರವಾಗಿದೆ. ಪ್ರತಿಯೊಂದು ಹಳ್ಳಿಗೂ ಕನಿಷ್ಟಪಕ್ಷ ಸಾಮಾನ್ಯವಾಗಿ 24 ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ವಿದ್ಯಾಭ್ಯಾಸಕೋಸ್ಕರ ಖರ್ಚಾಗುತ್ತಿರುವಾಗ, ಪರೀಕ್ಷಾ ಫಲಿತಾಂಶದಲ್ಲಿ ಅನಿಷ್ಟ ಪರಿಸ್ಥಿತಿ ಇರುವುದಕ್ಕೆ ಏನು ಕಾರಣವೆಂಬುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ನಮಗೆ ಪರೀಕ್ಷೆಗಳು ಅಲ್ಲದೆ ಹಿರೀ ಮಕ್ಕಳ ಯೋಗ್ಯತೆಯನ್ನು ನಿರ್ಧಾರ ಮಾಡಿಕೊಳ್ಳುವುದಕ್ಕೆ, ಅಳೆದುಕೊಳ್ಳುವುದಕ್ಕೆ ಬೇರೆ ಏನೂ ಇಲ್ಲ. ಹಿಂದೆ ದಿವಂಗತ ಶ್ರೀ ಸಿ. ಆರ್. ರೆಡ್ಡಿಯವರು ಇದ್ದಾಗ ಒಂದು ಮಾತನ್ನು ಹೇಳುತ್ತಿದ್ದರು. ನಾವು ವಿದ್ಯಾರ್ಥಿಗಳ ಯೋಗ್ಯತೆಯನ್ನು ಉಪಾಧ್ಯಾಯರುಗಳ ಯೋಗ್ಯತೆಯಿಂದ ಅಳೆಯಬೇಕೆಂದು ಪರೀಕ್ಷಾ ಫಲಿತಾಂಶ ಕಡಿಮೆ ಬಂದರೆ ಅದು ವಿದ್ಯಾರ್ಥಿಗಳ ಲೋಪವಲ್ಲ, ಅದು ಅಧ್ಯಾಪಕರ ಲೋಪ ಎಂದು ಹೇಳುತ್ತಿದ್ದರು. ಇವತ್ತು ಅಂತಹ ಒಂದು ಭಾವನೆ ಲುಪ್ತವಾಗಿರುವುದೇ ಕಾರಣ, ಇಷ್ಟು ಕಡಿಮೆ ಫಲಿತಾಂಶ ಬರುವುದಕ್ಕೆ ಏನು ಕಾರಣವೆಂದು ಯೋಚನೆ ಮಾಡಬೇಕಾಗಿದೆ. ಹೇಗೆ ಇದನ್ನು ತಗ್ಗಿಸಬೇಕು, ಹಾಗೂ ಪರೀಕ್ಷಾ ಫಲಿತಾಂಶವನ್ನು ಹೆಚ್ಚಿಸಬೇಕೆನ್ನುವ ಬಗ್ಗೆ ಒಂದು ಕ್ರಮವನ್ನು ವಿದ್ಯಾಭ್ಯಾಸದಲ್ಲಿ ವಿದ್ಯಾ ಇಲಾಖೆಯವರು ಕೈಗೊಂಡಿದ್ದಾರೆ. ಅದೇನೆಂದರೆ, ಈಗ ಕೆಲವು ಶಾಲೆಗಳಿಗೆ ಮೇಂಟೆನೆನ್ಸ್ ಗ್ರಾಂಟ್ ಕೊಡುತ್ತಿದ್ದಾರೆ. ಅದನ್ನು ಕಡಿಮೆ ಮಾಡುತ್ತಾ ಬರಬೇಕು. ಅದು ಪರೀಕ್ಷಾ ಫಲಿತಾಂಶದ ಪ್ರಮಾಣಗಳಿಗನುಗುಣವಾಗಿದೆ ಎಂಬುದಾಗಿ ಹೇಳಿದ್ದಾರೆ. ಇದು ಕೇವಲ ಖಾಸಗೀ ಶಾಲೆಗಳಿಗೆ ಅನ್ವಯಿಸಬೇಕೆಂದು ಕೊಟ್ಟಿದ್ದಾರೆ. ಅದು ಸರ್ಕಾರಿ ಶಾಲೆಗಳಿಗೆ ಅನ್ವಯಿಸುವುದಿಲ್ಲವೆಂದು ಹೇಳಿದ್ದಾರೆ. ಸರ್ಕಾರೀ ಶಾಲೆಗಳಲ್ಲಿ ಪರೀಕ್ಷಾ ಫಲಿತಾಂಶ ಅದಕ್ಕಿಂತಲೂ ಬಹಳ ಕಡಿಮೆ ಬರುತ್ತಿದ್ದರೂ ಕೂಡ ಅವರಿಗೆ ಅದನ್ನು ಅನ್ವಯಿಸದೇ ಇರುವುದರಿಂದ ಅಸಡ್ಡೆಯಿಂದ ಬೇಕಾದ ರೀತಿಯಲ್ಲಿ ಕೆಲಸಮಾಡುವುದಕ್ಕೆ ಅವಕಾಶವಾಗುತ್ತದೆ. ಇದು ಕೂಡದು ಎಂದು ಹೇಳುವುದಿಲ್ಲ. ದುಡ್ಡನ್ನು ಹೆಚ್ಚು ಮಾಡಿ ಎಲ್ಲೆಲ್ಲಿ ಪರೀಕ್ಷಾ ಫಲಿತಾಂಶಗಳು ಕಡಿಮೆಯಾಗುತ್ತವೋ ಅಲ್ಲಿ ಮೇಂಟೆನೆನ್ಸ್ ಗ್ರಾಂಟ್ ಏನಿದೆಯೋ ಅದನ್ನು ಕಡಿಮೆಮಾಡಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ. ಆದರೆ ಇದು ಸರ್ಕಾರಿ ಶಾಲೆಗಳಿಗೂ ಮತ್ತು ಖಾಸಗೀ ಶಾಲೆಗಳಿಗೂ ಅನ್ವಯಿಸಿದ್ದು ಎಂಬುದಾಗಿ ನಾನು ಹೇಳುತ್ತೇನೆ.

[MR. DEPUTY SPEAKER in the Chair]

Ebucation makes man, it does not make him good, but makes him **clever** ಇದರಲ್ಲಿ ಕೂಡಿರತಕ್ಕ ಅಂಶವೇನೆಂದರೆ, ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಸಾಕಷ್ಟು ಆಧ್ಯಾತ್ಮಿಕ ಮೌಲ್ಯಗಳಿಗೆ ಸ್ಥಾನವಿಲ್ಲ. ಭಾರತದೇಶ ಬಹಳ ಪುರಾತನ ಕಾಲದಿಂದ ಬೆಳದಿರ ತಕ್ಕಂಥಾದ್ದು. ಕೀರ್ತಿ ಗಳಿಸಿರತಕ್ಕಂಥಾದ್ದು. ಆಧ್ಯಾತ್ಮಿಕ ಮೌಲ್ಯಗಳಿಗೆ ಕೊಡುತ್ತಾ ಇದ್ದಂಥ ಬೆಲೆಯಿಂದ ಲೋಕ ಕಂಟಕನೆಂದು ಅನ್ನಿಸಿಕೊಂಡದ್ದು ನಮ್ಮ ಹಿಟ್ಲರ್ ಸಾಹೇಬ, ಅವನಿದ್ದ ಸ್ಥಳಕ್ಕೆ ಮೈಸೂರಿನವರು ಹೋದಾಗ, ಯಾವ ಊರು ಎಂದು ಕೇಳಿದಾಗ, ಅಲ್ಲಿ ಮೈಸೂರು ಎಂದು ಹೇಳಿದಾಗ ಅವನಿಗೆ ಗೊತ್ತಾಗಲಿಲ್ಲ. ಆ ಮೇಲೆ ಮೈಸೂರು ದೇಶ ಆಧ್ಯಾತ್ಮಿಕ ಜ್ಞಾನ, ಆಧ್ಯಾತ್ಮಿಕ ದೃಷ್ಟಿ ಇರತಕ್ಕ ದೇಶವೆಂಬುದು ಅವನ ಗಮನಕ್ಕೆ ಬಂತು. ಇಂದು ನಾವು ಅದನ್ನು ಬಹಳವಾಗಿ ಕಡೆಗಾಣುತ್ತೇವೆ ಆದರೆ ಈ ದೆಸೆಯಿಂದ ಇವತ್ತು ಎಲ್ಲಾ ಮೌಲ್ಯಗಳು ಬಿದ್ದು ಹೋಗುತ್ತಿವೆ. ಈಗ ಮೌಲ್ಯಗಳ ಮೂಲಗಳಿಗೆಲ್ಲಾ ಆಧ್ಯಾತ್ಮಿಕ ಮೌಲ್ಯ ಮಾತ್ರ ಮುಖ್ಯ. ಅದನ್ನು ಪ್ರಿನ್ಸ್ ಆಫ್ ಅಲ್ ಮೌಲ್ಡ್ಸ್ ಎಂಬ ಪುಸ್ತಕದಲ್ಲಿ ಚೆನ್ನಾಗಿ ಬರೆದಿದ್ದಾರೆ. ಅದಕ್ಕೆ ನಾವು ಹೆಚ್ಚಿನ ಗಮನ ಕೊಡದೇ ಇರುವುದರಿಂದಲೇ ಇಂತಹ ಪರಿಸ್ಥಿತಿ ನಮಗೆ ಬಂದಿದೆ. ಇದನ್ನು ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಆಧ್ಯಾತ್ಮಿಕವಾದ ರೀತಿಯಲ್ಲಿ ಅಳವಡಿಸದೇ ಇದ್ದರೆ ಹೆಚ್ಚಿಗೆ ಆಂದೋಳನಗಳು ನಡೆಯುತ್ತವೆ. ಅಧ್ಯಾಪಕವರ್ಗದವರು ಅವರ ಜ್ಞಾನವನ್ನು ಬೆಳೆಸಿಕೊಳ್ಳುವುದಕ್ಕೆ ಎಷ್ಟೇ ಸಂಘ ಸಂಸ್ಥೆಗಳನ್ನು ಮಾಡಿಕೊಳ್ಳಲಿ, ಅದಕ್ಕೆ ಸರ್ಕಾರದವರು ಹಾಗೂ ಖಾಸಗೀಯವರು ಒಂದು ಬೆಂಬಲವನ್ನು ಕೊಡಬೇಕಾದುದು ಮುಖ್ಯ. ಆದರೆ ಈಗ ಕೆಲವು ಸಂಸ್ಥೆಗಳು ಹುಟ್ಟಿ ಕೊಳ್ಳುತ್ತಾ ಇವೆ. ಹೇಗೆ ಉಪಾಧ್ಯಾಯರು ಸ್ಟ್ರೈಕ್ ಮಾಡಬೇಕು, ಹೇಗೆ ಸರ್ಕಾರಕ್ಕೆ ತೊಂದರೆ ಕೊಡಬೇಕು, ಹೇಗೆ ಮಕ್ಕಳ ವಿದ್ಯಾಭ್ಯಾಸಕ್ಕೆ ಕುಂದನ್ನು ಉಂಟುಮಾಡಬೇಕೆಂದು ಬಹುಭಾಗದ ಅಧ್ಯಾಪಕರಲ್ಲಿ ಬಂದು ಹೋಗಿದೆ. ಇದರಲ್ಲಿ ಕಾಸ್‌ಮಾಪಾಲಿಟಿಕ್ಸ್‌ಗೆ ಎಂದೂ ಅವಕಾಶವಿಲ್ಲದ ರೀತಿಯಲ್ಲಿ ಮಾಡಬೇಕು. ಆ ರೀತಿಯಾಗಿ ನಾವು ಮಾಡದೇ ಹೋದರೆ ಮುಂದೆ ನಾವು ಎಲ್ಲಿ ಮುಟ್ಟುತ್ತೇವೋ ಎನ್ನುವುದೇ ನಮಗೆ ಗೊತ್ತಾಗುವುದಿಲ್ಲ. ಈಗ ನಮ್ಮ ವಿದ್ಯಾಭ್ಯಾಸ ಕ್ರಮ ದಲ್ಲಿ ಸುಧಾರಣೆಯಾಗಬೇಕು. ಏಕೆಂದರೆ ಇಂದು ವಿದ್ಯಾಭ್ಯಾಸವನ್ನು ಮುಗಿಸಿದ ಯುವಕ ಮುಂದೇನು, ನನ್ನ ಗತಿ ಹೇಗೆ ಎನ್ನುವ ಒಂದು ಪರಿಸ್ಥಿತಿಗೆ ಈಗಿನ ವಿದ್ಯಾಭ್ಯಾಸ ಕ್ರಮವನ್ನು ತರುತಿದ್ದಾರೆ. ಅದು ಸ್ವಲ್ಪಮಟ್ಟಿಗೆ ಸುಧಾರಣೆಯಾಗಬೇಕು. 1917ರಲ್ಲಿ ಶ್ರೀ ಲೆನಿನ್ ಎಂಬು ವರು ರಷ್ಯಾ ಕ್ರಾಂತಿಯಾದ ಮೇಲೆ ಅವರು ಅಧಿಕಾರಕ್ಕೆ ಬಂದೊಡನೆಯೇ ಆ ದೇಶದಲ್ಲಿ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಅದೇನೆಂದರೆ ಈಗಿರತಕ್ಕ ಶಾಲೆಗಳಲ್ಲಿ ಕೊಡತಕ್ಕ ವಿದ್ಯಾಭ್ಯಾಸ ದಿಂದ ನಮ್ಮ ಮಕ್ಕಳು ಮುಂದೆ ಅವರ ಜೀವನವನ್ನು ಕಲ್ಪಿಸಿಕೊಳ್ಳುವುದಕ್ಕಾಗುವುದಿಲ್ಲ, ಅದಕ್ಕೋಸ್ಕರ ಈಗ ನಾವು ಅವರಿಗೆ ಕೈಗಾರಿಕೆಯ ವಿಷಯವಾಗಿ ಶಿಕ್ಷಣವನ್ನು ಕೊಡಬೇಕು. ಮತ್ತು ಅದಕ್ಕೋಸ್ಕರ ಪ್ರತಿಯೊಂದು ಶಾಲಾ ಉಪಾಧ್ಯಾಯರನ್ನು ಆಯಾ ಸ್ಥಳದಲ್ಲಿ ಯಾವ ಯಾವ ಕೈಗಾರಿಕೆಗಳಿವೆಯೋ ಅಲ್ಲಿ ಮಕ್ಕಳನ್ನು ಕಳುಹಿಸಿ ಅವರಿಗೆ ಕೈಗಾರಿಕೆಯಲ್ಲಿ ಹೆಚ್ಚಿನ ತರಪೇತನ್ನು ಕೊಡಬೇಕೆಂದು ಹೇಳಿದರು.

3-30 P.M.

ಅದೇ ರೀತಿಯಾಗಿ ಅಲ್ಲಿರತಕ್ಕ ಅಧ್ಯಾಪಕವರ್ಗದವರೆಲ್ಲಾ ಮಾಡಿದರು. ಆದರೆ ಎಲ್ಲೋ ಆ ದೇಶದ ಕಡೇಲಿ ಒಂದು ಮೂಲೆಯಲ್ಲಿದ್ದಂಥ ಒಂದು ಹಳ್ಳಿಯ ಅಧ್ಯಾಪಕರಿಗೆ ಅಲ್ಲಿ ಯಾವ ಒಂದು ಫ್ಯಾಕ್ಟರಿಯೂ ಇಲ್ಲದೆ ಇದ್ದಾಗ ಅವನು ಏನು ಮಾಡಬೇಕು ? ಎಲ್ಲೆಲ್ಲಿ ಹುಡುಕಿದರೂ ಫ್ಯಾಕ್ಟರಿ ಕಣ್ಣಿಗೆ ಬೀಳಲಿಲ್ಲ. ಆದರೆ ಅಲ್ಲೇ ಸಮೀಪದಲ್ಲಿ ಒಂದು ಬಾರ್‌ಬರ್ ಸೆಲೂನ್ ಆತನ ಕಣ್ಣಿಗೆ ಬಿದ್ದಿತಂತೆ. ಆಗ ಆ ಉಪಾಧ್ಯಾಯ ಆಯಿತು ಆ ವಿದ್ಯೆಯನ್ನೇ ಕಲಿಯಿರಿ ಎಂದು ಹೇಳಿ ಅಲ್ಲಿಯೇ ಬಿಟ್ಟನಂತೆ. ಅಂದರೆ ಹುಡುಗರಿಗೆ ಯಾವ ವಿದ್ಯೆ ಕೊಡಬೇಕು ಯಾವುದನ್ನು ಕೊಡಬಾರದು ಎಂಬತಕ್ಕ ಒಂದು ಸ್ವಾತಂತ್ರ್ಯ ಅಧ್ಯಾಪಕನಿಗಿರಬೇಕು. ಅಂಥಾ ಒಂದು ಸ್ವಾತಂತ್ರ್ಯವಾಗಿ ತೀರ್ಮಾನ ತೆಗೆದುಕೊಳ್ಳುವಂಥ ಪ್ರವೃತ್ತಿ ಅವರಲ್ಲಿ ಬೆಳೆಯಬೇಕು. ಹಿಂದೆ ನಮ್ಮ ಇಂಡಿಯಾ ದೇಶದಲ್ಲಿ ಬೇಸಿಕ್ ಎಜುಕೇಷನ್ನನ್ನು ಪ್ರಥಮತಃ ಜಾರಿಗೆ ಕೊಟ್ಟಾಗ ಒರಿಸ್ಸಾದಲ್ಲಿ ವಿಚಿತ್ರ ಸನ್ನಿವೇಶ ಉಂಟಾಯಿತು. ಹಿಂದಿನಿಂದಲೂ ಆ ಹಳೇ ಕಂದಾಚಾರದ ಪದ್ಧತಿಯನ್ನೇ ಮುಂದು ವರಿಸಿಕೊಂಡು ಬರಬೇಕೆಂದಿದ್ದ ಶಾಲೆಗಳಿಗೂ ಆ ಶಾಲಾ ಅಧ್ಯಾಪಕರಿಗೂ ಮತ್ತು ಈ ಬೇಸಿಕ ಎಜುಕೇಷನ್ ಜಾರಿಗೆ ಕೊಡತಕ್ಕ ಶಾಲಾ ಅಧ್ಯಾಪಕರಿಗೂ ಒಂದು ದೊಡ್ಡ ಹೋರಾಟವೇ ನಡೆ

ಯಿತು. ಆ ಹಳೇ ಕಂದಾಚಾರದ ಅಧ್ಯಾಪಕರು ಏನು ಮಹಾತ್ಮಾ ಗಾಂಧಿಯವರು ಶಾಲೆಗಳಲ್ಲಿ ಮಕ್ಕಳಿಗೆ ವಿದ್ಯೆ ಕಲಿಸುವುದನ್ನು ಕೈಬಿಟ್ಟು ನೂಲುವುದು, ನೇಯುವುದು, ಚರಕ ಇತ್ಯಾದಿ ಏನೇನೋ ಹೇಳಿಕೊಡಬೇಕೆಂದು ಹೇಳುತ್ತಿದ್ದಾರಂತೆ, ಇದಕ್ಕೆ ಅವಕಾಶ ಕೊಡಬಾರದು ಎಂದು ಅವರು ಹಟ ಮಾಡಿದರು. ಇತ್ತಲಾಗಿ ಬೇಸಿಕ್ ಎಜುಕೇಷನ್ ಕಡ್ಡಾಯವಾಗಿ ಜಾರಿಗೆ ತರಲೇಬೇಕೆಂಬುದು ಇವರ ಹಟ. ಆದರೆ ದಿನ ದಿನಕ್ಕೆ ಆ ಬೇಸಿಕ್ ಶಾಲೆಗೆ ಬರತಕ್ಕ ಹುಡುಗರ ಸಂಖ್ಯೆ ಕಡಿಮೆ ಆಗುತ್ತಿತ್ತು. ಆಗ ಆ ಶಾಲಾ ಉಪಾಧ್ಯಾಯರು ಏತಕ್ಕೆ ಹುಡುಗರು ಶಾಲೆಗೆ ಬರಲಿಲ್ಲ ಎಂಬುದನ್ನು ತಿಳಿದುಕೊಳ್ಳಲು ಆ ತಂದೆತಾಯಿಗಳ ಬಳಿ ಹೋಗಿ ಅವರು ಕೇಳಿದಾಗ ಸ್ವಾಮಿ ನಮ್ಮ ಮನೆಯಲ್ಲಿ ದನಾ ಕಾಯುವುದಕ್ಕೆ ಬೇರೆ ಜನರು ಯಾರೂ ಇಲ್ಲ. ಅದಕ್ಕೆ ಹುಡುಗ ದನಗಳನ್ನು ಹೊಡೆದುಕೊಂಡು ಹೋಗಿದ್ದ. ಶಾಲೆಗೆ ಬರುವುದಕ್ಕಾಗಲಿಲ್ಲ. ಎಂದು ಹೇಳಿದರಂತೆ. ಆಗ ಆ ಅಧ್ಯಾಪಕರು ಏನು ಹೇಳಿದರು ಗೊತ್ತೆ ? ನಾಳೆಯಿಂದ ನಿಮ್ಮ ಹುಡುಗನನ್ನು ಶಾಲೆಗೆ ಕಳುಹಿಸುವಾಗ ಜೊತೆಯಲ್ಲಿ ನಿಮ್ಮ ದನಗಳನ್ನೂ ಕೂಡ ಹೊಡೆದು ಕಳುಹಿಸಿ ಕೊಡಿ ಎಂದು ಹೇಳಿದರಂತೆ. ಆ ಹುಡುಗನು ದನಗಳನ್ನು ಶಾಲೆಗೆ ಹೊಡೆದುಕೊಂಡು ಬಂದಾಗ ಆ ದನಗಳನ್ನು ಶಾಲಾಬಾಲಕರೆಲ್ಲರೂ ಸರದಿ ಮೇಲೆ ಮೇಯಿಸುವಂತೆ ಒಂದು ವ್ಯವಸ್ಥೆಯನ್ನು ಮಾಡಿ ಆ ಗ್ರಾಮದ ಎಲ್ಲಾ ಹುಡುಗರನ್ನೂ ವಿದ್ಯಾವಂತರನ್ನಾಗಿ ಮಾಡಿದರಂತೆ. ದೇಶದಲ್ಲಿ ವಿದ್ಯಾಭಿವೃದ್ಧಿಯಾಗುವುದಕ್ಕೆ ಶಾಲೆಗಳು ಅಭಿವೃದ್ಧಿಗೆ ಬರುವುದಕ್ಕೆ ಇಂಥಾ ಉಪಾಧ್ಯಾಯರುಗಳು ನಮಗೆ ಬೇಕು. ನಮ್ಮ ವಿದ್ಯಾಭ್ಯಾಸದಲ್ಲಿ ಪ್ರಾರಂಭದಿಂದಲೇ ಬೆಳೆಯತಕ್ಕ ಮಕ್ಕಳಿಗೆ ಅವರ ಮನಸ್ಸಿನ ಮೇಲೆ ಒಳ್ಳೆಯ ನೈತಿಕ ಪ್ರಭಾವ, ಅಧ್ಯಾತ್ಮಿಕ ಪ್ರಭಾವ ಬೀಳುವಂಥ ಸನ್ನಿವೇಶಗಳನ್ನು ಅಳವಡಿಸಬೇಕು. ಇಂಥ ವಿದ್ಯೆಯನ್ನು ಮಕ್ಕಳಿಗೆ ಬೋಧಿಸಬಲ್ಲಂಥ ಅರಿತ ನುರಿತ ಅಧ್ಯಾಪಕರು ನಮಗೆ ಇಂದು ಬೇಕಾಗಿದೆ. ಆದರೆ ಇಲ್ಲಿ ವಸ್ತುತಃ ಏನಾಗಿದೆ ಎಂದರೆ ಎಲ್ಲಿಯೂ ಯಾವ ಕೆಲಸವೂ ಸಿಕ್ಕದಿದ್ದರೆ, ಬಿಡು ವಿದ್ಯಾ ಇಲಾಖೆ ಇದೆ, ಅಲ್ಲಿ ಉಪಾಧ್ಯಾಯನ ಕೆಲಸ ಗ್ಯಾರಂಟಿ ಸಿಕ್ಕೇಸಿಕ್ಕುತ್ತೆ ಅಲ್ಲಿ ಸೇರಿಕೊಳ್ಳೋಣ ಎಂಬ ಮನೋವೃತ್ತಿ ಇದ್ದಿದೆ. ಇಲ್ಲಿ ಮಕ್ಕಳಿಗೆ ಪಾಠಪ್ರವಚನಗಳನ್ನು ನಡೆಸತಕ್ಕ ಜನರಿಗೆ ಏನೇ ಕ್ವಾಲಿಫಿಕೇಷನ್‌ಗಳಿರಲಿ, ಆತನಲ್ಲಿ ಮುಖ್ಯವಾಗಿ ಮಿಗಿಲಾಗಿ ಮಾನವೀಯತೆಯ ದೃಷ್ಟಿಯಿಂದ ಮಕ್ಕಳಿಗೆ ಪಾಠ ಹೇಳತಕ್ಕಂಥ ಮನೋಭಾವ ಇರಬೇಕು. ನಮ್ಮಲ್ಲಿ ಇಂಥ ಅರ್ಹತೆ ಮತ್ತು ಗುಣಗಳಿರತಕ್ಕ ಅಧ್ಯಾಪಕರಿಲ್ಲವೆಂದಿಲ್ಲ, ಅಂಥವರಿದ್ದಾರೆ. ಅಂಥವರನ್ನು ನಾವು ಆರಿಸಬೇಕಾಗಿದೆ.

ಇನ್ನು ಕಾಲೇಜ್ ವಿದ್ಯಾಭ್ಯಾಸದಲ್ಲಿ ಕೂಡ ವಿದ್ಯಾರ್ಥಿಗಳಿಗೆ ವರ್ಕ್ ಎಕ್ಸ್‌ಪೀರಿಯನ್ಸ್ ಕೂಡ ಇರಬೇಕೆಂದು ಮಾಡಿದ್ದಾರೆ. ಎರಡು ದೃಷ್ಟಿಯಿಂದ ಇದು ಒಳ್ಳೆಯದು. ಬುದ್ಧಿಯನ್ನು ಉಪಯೋಗ ಮಾಡತಕ್ಕ ಜನ ಮೈ ಕೈ ಉಪಯೋಗಮಾಡುವುದು ಒಂದು ಹೀನಾಯವಾದದ್ದು ಎಂಬ ಭಾವನೆ ಇಂದು ಅನೇಕರಲ್ಲಿ ತುಂಬಿಕೊಂಡಿದೆ ಅದು ಮೊದಲು ತೊಲಗಬೇಕು. ಆದರೆ ಈ ಸ್ಕೀಮನ್ನು ಜಾರಿಗೆ ತಂದಿದ್ದರೂ ಇಲ್ಲಿ ಅದು ಸರಿಯಾಗಿ ಕೆಲಸ ಮಾಡುತ್ತಿದೆಯೋ ಇಲ್ಲವೋ ಎಂಬುದನ್ನು ಯಾರೂ ಸರಿಯಾಗಿ ಪರಿಶೀಲನೆ ಮಾಡುತ್ತಿಲ್ಲ. ಇದರಲ್ಲಿರತಕ್ಕ ನ್ಯೂನಾತಿರಿಕ್ತಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಆದರೆ ಇಲ್ಲಿ ಜಾರಿಗೆ ಬಂದು ಒಂದೆರಡು ವರ್ಷಗಳಾಯಿತು. ಅಮೇರಿಕಾದಲ್ಲಿ ಜಾರಿಗೆ ಬಂದು 40—50 ವರ್ಷಗಳಾಯಿತು. ಆದರೆ ನಾವಿಲ್ಲಿ ಖರ್ಚು ಮಾಡತಕ್ಕ ಹಣಕ್ಕೆ ಸಾಕಷ್ಟು ಪ್ರತಿಫಲ ಬರುತ್ತಿದೆಯೋ ಎಂಬುದನ್ನು ನೋಡುತ್ತಿಲ್ಲ. ಒಂದವಾರ್ತಿ ಅಮೇರಿಕಾದಲ್ಲಿ ಜನರೆಲ್ಲಾ ಯುದ್ಧಕ್ಕೆ ಹೋಗಿದ್ದ ಕಾರಣ ಅಲ್ಲಿ ವರ್ಕ್ ಎಕ್ಸಪೀರಿಯನ್ಸ್ ಶಿಕ್ಷಣವನ್ನು ಶಾಲಾಕಾಲೇಜುಗಳಲ್ಲಿ ಕೊಡತಕ್ಕ ಜನರು ಕೆಲಸಕ್ಕೆ ಸಿಕ್ಕುವುದೇ ಬಹಳ ಕಷ್ಟವಾಯಿತು. ಆಗ ಯುದ್ಧದಲ್ಲಿ ಎದ್ದು ಬಿದ್ದು ಕಾಲು ಮುರಿದುಕೊಂಡಿದ್ದಂಥ ಜನರಿಗೆ ಶಿಕ್ಷಣ ಕೊಡಲು ಇಲ್ಲಿ ಕೆಲಸ ಮಾಡುತ್ತಿದ್ದ ಜನರನ್ನು ಇದಕ್ಕಾಗಿ ನೇಮಿಸಿಕೊಳ್ಳಬೇಕಾಗಿ ಬಂದಿತು. ನಾವು ಇಲ್ಲಿ ಶಿಕ್ಷಣವನ್ನು ಬಹಳ ಉತ್ತಮ ಮಟ್ಟದಲ್ಲಿ ನಡೆಸಬೇಕಾಗಿದೆ. ನಮಗೆ ಉತ್ತಮ ಟೀಚರ್ಸ್ ಸಿಕ್ಕುವುದು ಕಷ್ಟ; ಬಾಲಕರಿಗೆ ಸರಿಯಾದ ಶಿಕ್ಷಣ ಸಿಕ್ಕುತ್ತಿಲ್ಲ; ಮೇಲಾಗಿ ಗ್ರಾಂಟ್ ಇನ್ ಎಯಿಡ್ ಕೋಡು ಕೂಡ ಸರಿಯಾಗಿಲ್ಲ. ಕಾಲಕ್ಕೆ ಸರಿಯಾಗಿ ಸಹಾಯ ಧನ ಸಿಕ್ಕುತ್ತಿಲ್ಲ. ಕಾಲೇಜ್ ಮತ್ತು ಹೈಸ್ಕೂಲುಗಳ ಮೈಂಟೆನನ್ಸ್ ಗ್ರಾಂಟನ್ನು ಸರ್ಕಾರದವರು ರಿಲೀಜ್ ಮಾಡುವುದು ವರ್ಷಾಂತ್ಯದಲ್ಲಿ ಆ ಟೈಮಿಗೆ ಸರಿಯಾಗಿ ಅದನ್ನು ಡ್ರಾ ಮಾಡದಿದ್ದರೆ ಅದು ಲ್ಯಾಪ್ಸಾಗುತ್ತದೆ. ಹಣವನ್ನು ಪ್ರೊವೈಡ್ ಮಾಡಿದ್ದರೂ ಅದು ಕೆಲಸಕ್ಕೆ ಬಾರದೆ ನಿಷ್ಪ್ರಯೋಜನವಾಗುತ್ತದೆ. ಹೀಗೆ ಒದಗಿಸಿದ ಹಣ ದುರ್ವಿನಿಯೋಗವಾಗುವುದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ.

ಇನ್ನು ಶಾಲಾಕಾಲೇಜುಗಳಲ್ಲಿ ಮಕ್ಕಳಿಗೆ ಯಾವರೀತಿ ಪಾಠಪ್ರವಚನಗಳನ್ನು ನಡೆಸಬೇಕೆಂಬ ವಿಚಾರದಲ್ಲಿ ಅಮೇರಿಕಾ ದೇಶದಲ್ಲಿ ವಿದ್ಯೆಯಲ್ಲಿ ಮೊದಲು ನೀತಿಬೋಧಕ ವಿಚಾರಗಳನ್ನು ಅಳವಡಿಸಿ ಅದನ್ನು ಮಕ್ಕಳಿಗೆ ಬೋಧಿಸುವುದಕ್ಕೆ ಅಲ್ಲಿ ವ್ಯವಸ್ಥೆ ಮಾಡಿಕೊಂಡಿದ್ದಾರೆ. ನಾವೂ ಸಹಾ ಇಲ್ಲಿ

(ಶ್ರೀ ಎಸ್. ಕರಿಯಪ್ಪ)

ನಮ್ಮ ಮಕ್ಕಳಿಗೆ ಕೊಡತಕ್ಕ ವಿದ್ಯೆ ಅವರನ್ನು ದೇಶದ ಸತ್ಪ್ರಜೆಗಳನ್ನಾಗಿ ಮಾಡುವುದಕ್ಕೆ ಅರ್ಹತೆ ಪಡೆದಿದೆಯೋ ಇಲ್ಲವೇ ಎಂಬುದನ್ನು ನೋಡಬೇಕು. ಅಮೇರಿಕಾದಲ್ಲಿ ಒಂದಾವರ್ತಿ ಸರ್ಕಾರದವರು ಮಾಡತಕ್ಕ ಕೆಲಸಗಳು ದೇಶಕ್ಕೆ ಒಳ್ಳೆಯದನ್ನು ಮಾಡುತ್ತವೆಯೋ ಅಥವಾ ಹಾನಿಯನ್ನು ತರುತ್ತವೆಯೋ ಎಂಬ ವಿಚಾರದಲ್ಲಿ ಮಕ್ಕಳಿಗೆ ಬೋಧೆ ಮಾಡಬೇಕೇ ಬೇಡವೇ ಎಂಬ ವಿಷಯ ಬಹಳ ಜಿಜ್ಞಾಸೆಗಿಟ್ಟುಕೊಂಡಿತಂತೆ. ಈ ವಿಚಾರದಲ್ಲಿ ಏನು ತೀರ್ಮಾನ ತೆಗೆದುಕೊಳ್ಳಬೇಕೆಂಬುದನ್ನು ಮಕ್ಕಳೇ ಯೋಚಿಸಬೇಕಾದ್ದರಿಂದ ಆ ವಿಷಯವನ್ನು ಅವರಿಗೆ ತಿಳಿಸುವುದೇ ಬೇಡವೆಂದು ತೀರ್ಮಾನವಾಯಿತಂತೆ. ಹಾಗೇ ರಷ್ಯಾದಲ್ಲಿ ಕೂಡ ಒಂದಾವರ್ತಿ ಲೆನಿನ್ ದೇಶದಲ್ಲಿರತಕ್ಕ ಎಲ್ಲಾ ಮಕ್ಕಳಿಗೂ ಕಮ್ಯುನಿಜಂ ಬೋಧಿಸಬೇಕೆಂದು ಹೇಳಿದಾಗ ಆತನ ಹೆಂಡತಿ ಅದಕ್ಕೆ ಒಪ್ಪಲಿಲ್ಲವಂತೆ. ಆ ವಿಚಾರವನ್ನು ಅಧ್ಯಾಪಕವರ್ಗಕ್ಕೆ ಬಿಡಬೇಕೆಂದು ಆಕೆ ತಿಳಿಸಿದಳಂತೆ. ಹಾಗೆ ನಾವೂ ಕೂಡ ಇಲ್ಲಿ ಮಾಡಬೇಕು. ಅನೇಕ ಶಾಲಾ ಕಾಲೇಜುಗಳಲ್ಲಿ ಕುಂದುಕೊರತೆಗಳು, ಅನಾನುಕೂಲಗಳು ಇರಬಹುದು. ಅದನ್ನು ಪೆಡಂಭೂತ ಮಾಡಿ ಮಕ್ಕಳ ಮನಸ್ಸನ್ನು ಕೆಡಿಸಿ ಅವರನ್ನು ಹಾಳುಮಾಡುವುದು ಸರಿಯಲ್ಲ. ಈ ರೀತಿ ಅಮೇರಿಕಾದ ವಿದ್ಯಾ ಕ್ಷೇತ್ರದಲ್ಲಿ ನಿಪುಣತೆ ಪಡೆದಿರುವವರು ಅಭಿಪ್ರಾಯ ಪಡುತ್ತಿದ್ದಾರೆ.

ಇನ್ನು ಖಾಸಗಿ ಶಾಲಾಕಾಲೇಜುಗಳ ವಿಚಾರ ಅನೇಕರು ಹೇಳುತ್ತಿದ್ದಾರೆ. ಖಾಸಗಿ ಶಾಲಾ ಕಾಲೇಜುಗಳು ಜಾಸ್ತಿಯಾಗಿವೆ, ಅಮೇರಿಕಾದಲ್ಲಿ ಕೂಡ ಹೀಗೆ ಇದೆ. ಅಲ್ಲಿ ಯೂನಿವರ್ಸಿಟಿಗಳು ಕೂಡ ಖಾಸಗಿಯವು ಜಾಸ್ತಿ ಇವೆ. ನ್ಯೂನತೆಗಳಿದ್ದರೆ ಅವನ್ನು ಬೆಳೆಸಿಕೊಂಡು ಹೋಗಬೇಕೆಂದು ಯಾರೂ ಹೇಳುವುದಿಲ್ಲ. ಅಂಥ ಅವಿವೇಕಿಗಳು ನಮ್ಮಲ್ಲಿ ಯಾರೂ ಇಲ್ಲ. ಲೋಪದೋಷಗಳನ್ನು ಎತ್ತಿ ತೋರಿಸಿ ಸರಿಪಡಿಸುವುದಕ್ಕೆ ಸಾಧ್ಯವಿದ್ದರೆ ಸರಿಪಡಿಸಿ ಎಂದು ಹೇಳುವ ಜವಾಬ್ದಾರಿ ಸರಕಾರ ಹೊರಬೇಕು. ಇಷ್ಟು ಜನರು ಲೋಪದೋಷಗಳಿವೆಯೆಂದು ಹೇಳುತ್ತಿದ್ದರೂ ಸರಕಾರದವರು ಸುಮ್ಮನಿದ್ದಾರೆ ಎಂಬ ಆಕ್ಷೇಪಣೆಗೆ ಸರಕಾರ ಗುರಿಯಾಗಬಾರದು. ಖಾಸಗಿ ಕಾಲೇಜುಗಳಲ್ಲಿ ಒಳಾಡಳಿತ ನಡೆಸಲು ಪೂರ್ಣ ಸ್ವಾತಂತ್ರ್ಯ ಮ್ಯಾನೇಜ್‌ಮೆಂಟಿಗೆ ಇರಬೇಕು. ಹಾಗಿಲ್ಲದೆ ಸರಕಾರ ಮತ್ತು ಯೂನಿವರ್ಸಿಟಿ ಕೈಹಾಕಿದರೆ ಪರಿಸ್ಥಿತಿ ಕೆಡುವುದು ; ಮಕ್ಕಳ ವಿದ್ಯಾಭ್ಯಾಸಕ್ಕೆ ಕುಂದಕ ಬರುವುದು. ಇದನ್ನು ಚೆನ್ನಾಗಿ ಗಮನಿಸಬೇಕು. ರೂಲ್ಸ್ ಮತ್ತು ರೆಗ್ಯುಲೇಷನ್ಸ್‌ನಲ್ಲಿ ಪ್ರೈವೇಟ್ ಕಾಲೇಜುಗಳ ಮ್ಯಾನೇಜ್‌ಮೆಂಟಿನವರು ಅಧಿಕಾರ ಕಸಿದುಕೊಳ್ಳಲು ಅವಕಾಶವಿಲ್ಲ. ಸರಕಾರದವರು ಅದನ್ನು ಅರ್ಥಮಾಡಿಕೊಂಡಂತೆ ಕಾಣುವುದಿಲ್ಲ. ಅಧ್ಯಾಪಕರಲ್ಲಿ ಅನೇಕರು ಒಳ್ಳೆಯವರಿದ್ದಾರೆ, ಕೆಲವು ಜನರು ಒಬ್ಬಿಬ್ಬರಿರಬಹುದು. ಸರಕಾರ ಅದರಲ್ಲಿ ಕೈಹಾಕಿದರೆ ಕಾಲೇಜು ನಡೆಸುವುದು ಕಷ್ಟವಾಗುವುದು. ಕಾಲೇಜುಗಳಲ್ಲಿ ಸ್ಟ್ರೈಕ್ ಆಗಿ ಪಾಠ ಸರಿಯಾಗಿ ನಡೆಯುವುದಿಲ್ಲ. ಗುಂಪು ಬಿಟ್ಟ ಒಂದು ಕೋತಿ ವನವನ್ನು ಹಾಳುಮಾಡಿತು ಎಂದು ಹೇಳುವಂತೆ ಕೆಲವರು ಕಾಲೇಜನ್ನು ಹಾಳುಮಾಡುವರು. ಇದಕ್ಕೆ ನಮ್ರತೆಯಿಂದ ವಿಜ್ಞಾಪನೆ ಮಾಡುವುದು ಏನಪ್ಪ ಅಂದರೆ ಒಳಾಡಳಿತದಲ್ಲಿ ದಯಯಿಟ್ಟು ಕೈಹಾಕಬೇಡಿ, ಹಾಗೆ ಹಾಕಿದರೆ ಸರಕಾರ ವಿದ್ಯಾಭ್ಯಾಸಕ್ಕೆ ಕುಂದನ್ನುಂಟು ಮಾಡಿದಂತಾಗುವುದು ಎಂದು. ಕಾಲೇಜುಗಳಲ್ಲಿ ಅನೇಕ ನ್ಯೂನತೆಗಳಿವೆ. ಆದರೆ ಅವನ್ನು ತಿದ್ದಿಕೊಳ್ಳಲು ಅವಕಾಶ ಕೊಡುವುದು ಒಳ್ಳೆಯದು. ಇದಕ್ಕಾಗಿ ಒನ್ ಮ್ಯಾನ್ ಕಮಿಷನ್ನಿನವರು ಕೈಲಾದಮಟ್ಟಿಗೆ ಕೆಲಸಮಾಡುತ್ತಿದ್ದಾರೆ. ಆದರೆ ವೇಗ ಕಡಿಮೆ, ವೇಗವಾಗಿ ನಡೆಯುವುದಕ್ಕೆ ಬೇರೆ ವ್ಯವಸ್ಥೆಯನ್ನೇನಾದರೂ ಅದಕ್ಕೆ ಸಹಕಾರಿಯಾಗಿ ಮಾಡುವುದೊಳ್ಳೆಯದು ಎಂದು ನನಗನ್ನಿಸುವುದು.

ಯೂನಿವರ್ಸಿಟಿಯಲ್ಲಿ ಪಿ. ಎಚ್. ಡಿ. ಥೀಸಿಸ್ ಕೊಟ್ಟರೆ ನಾಲ್ಕೈದು ವರ್ಷವಾದರೂ ಅದನ್ನು ನೋಡಿ ಅಭಿಪ್ರಾಯ ತಿಳಿಸದೆ ಇರುವ ಹಲವು ಸಂದರ್ಭಗಳಿವೆ. ರಿಸರ್ಚ್ ಸ್ಕಾಲರ್‌ಗೆ ಎರಡು ವರ್ಷ ಥೀಸಿಸ್ ಕೊಡಲು ಅವಕಾಶವಿದೆ. ಹಾಗಿರುವಾಗ ಥೀಸಿಸ್ ಕೊಟ್ಟು ಐದಾರು ವರ್ಷವಾದರೂ ಅದನ್ನು ನೋಡದಿದ್ದರೆ ಯೂನಿವರ್ಸಿಟಿಯ ಕೆಲಸ ಸಮರ್ಪಕವಾಗಿ ನಡೆಯುತ್ತಿದೆಯೆಂದು ಭಾವಿಸುವುದಕ್ಕೆ ಸಾಧ್ಯವೇ ?

ವಿದ್ಯಾಭ್ಯಾಸ ಕ್ರಮವನ್ನು ಹೇಗೆ ಸುಧಾರಿಸಬೇಕೆಂಬ ಬಗ್ಗೆ ಹಲವಾರು ಸಮಿತಿಗಳಾಗಿವೆ. ಅವುಗಳ ಅಭಿಪ್ರಾಯದ ಪ್ರಕಾರ ಅಲ್ಲಿ ಸ್ವಲ್ಪ ಇಲ್ಲಿ ಸ್ವಲ್ಪ ಸುಧಾರಣೆ ಮಾಡಿದ್ದಾರೆ. ಈಗ ಹೊಸ ರೀತಿಯಲ್ಲಿ ಯೋಚನೆಮಾಡಬೇಕಾಗಿದೆ, ಇವತ್ತಿದ್ದ ಸನ್ನಿವೇಶ ನಾಳೆ ಇಲ್ಲ, ಪೂರ್ವದಲ್ಲಿಯೂ ಸಮಸ್ಯೆಗಳು ಬರುತ್ತಿದ್ದುವು. ಬದಲಾವಣೆಗಳಿಗೆ ಹೊಂದಿಕೊಳ್ಳುವ ರೀತಿಯಲ್ಲಿ ನಾವು ವಿದ್ಯಾಭ್ಯಾಸ ಕ್ರಮವನ್ನು ರೂಪಿಸಬೇಕು. ಶಾಲೆಗಳನ್ನು ಈಗಿನ ಕೈಗಾರಿಕೆಗಳಿಗೆ ತಕ್ಕಂತೆ ಮಾರ್ಪಾಡುಮಾಡ

ಬೇಕೆಂದು ಹಿಂದೆ ಒಂದು ಸಲ ನಾನು ಹೇಳಿದೆ. ಪ್ರತಿಯೊಂದು ಶಾಲೆಯಲ್ಲೂ ವರ್ಕ್‌ಷಾಪ್ ಇರಬೇಕು. ಅಮೇರಿಕಾದಲ್ಲಿ ಶಾಲೆಗಳಲ್ಲಿ ಓದಿದಮೇಲೆ ಮೂರು ತಿಂಗಳು ಹೊರಗೆ ಹೋಗಿ ಕೈಗಾರಿಕೆಗಳಲ್ಲಿ ಅನುಭವ ಪಡೆಯಬೇಕು. ಅಲ್ಲದೆ ಇಂಗ್ಲೆಂಡು ಮತ್ತು ಅಮೇರಿಕಾಗಳಲ್ಲಿರುವ ಅನೇಕ ಶಾಲಾ ಕಾಲೇಜುಗಳಿಗೆ ಕೈಗಾರಿಕೆಗಳಿಂದ ಹಣ ಬರುವುದು. ಕೈಗಾರಿಕೆಗಳಿಂದ ನಮ್ಮ ಮಕ್ಕಳು ಹೆಚ್ಚು ಸಹಾಯವನ್ನು ಪಡೆಯುವಂತೆ ಮಾಡಬೇಕು. ನಾವು ಕೈಗಾರಿಕೆಗಳನ್ನು ಮಾಡಿ ಅಲ್ಲಿ ಮಕ್ಕಳಿಗೆ ಕೈಗಾರಿಕಾ ವಿದ್ಯಾಭ್ಯಾಸವನ್ನು ಕೊಡದಿದ್ದರೆ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡಲು ಸಾಧ್ಯವಿಲ್ಲ. ಇದಕ್ಕೆ ವಿದ್ಯಾಭ್ಯಾಸದ ಇಲಾಖೆ ಕೂಡ ಸಹಕಾರ ನೀಡಬೇಕು, ಕೈಗಾರಿಕಾ ಇಲಾಖೆ ಮತ್ತು ಇಂಜನಿಯರಿಂಗ್ ಇಲಾಖೆ ಮುಂತಾದವು ಕೂಡ ಸಹಕರಿಸಬೇಕು. ಜೊತೆಗೆ ಕೈಗಾರಿಕೆಗಳವರ ಸಹಕಾರ ಪಡೆದು ಅಗಾಧವಾಗಿರುವ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಬೇಕು. ಹೀಗೆ ಮಾಡಿದರೆ ದೊಡ್ಡದಾಗಿ ಕಾಣುವ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡಲು ಕಷ್ಟವಿಲ್ಲ ಎಂದು ಅನ್ನಿಸುವುದು. ಈ ರೀತಿ ಮಾಡಿ ಸುಲಭವಾಗಿ ಪರಿಹಾರಮಾಡಬಹುದು. ನಾವು ಈಗ ಅನುಸರಿಸುತ್ತಿರುವ ಕ್ರಮ ಸರಿಯಾಗಿಲ್ಲವೆಂಬುದು ನನ್ನ ಭಾವನೆ. ಏನೇ ಆಗಲಿ, ನಿರುದ್ಯೋಗ ಹೋಗಬೇಕು, ಇದಕ್ಕೆ ಪೂರ್ಣವಾಗಿ ಮನಸ್ಸು ಕೊಡಬೇಕು. ಹಣವೇ ಮುಖ್ಯವಲ್ಲ, ಜನರೂ ಮುಖ್ಯ. ಯಾವ ಜನರನ್ನು ಯಾವ ಸ್ಥಾನದಲ್ಲಿಟ್ಟು ನಾವು ಕಾರ್ಯವನ್ನು ಸಾಧಿಸಬೇಕೋ ಆ ರೀತಿ ಮಾಡಲು ಪ್ರಯತ್ನ ಪಟ್ಟರೆ ಸಾಧ್ಯ. ಈ ಕಡೆ ಸರಕಾರದವರು ಗಮನ ಕೊಡಬೇಕು.

ಇನ್ನು ಒಟ್ಟಾರೆ ವಿದ್ಯಾಭ್ಯಾಸ ಕ್ರಮವನ್ನು ಸರಿಪಡಿಸಬೇಕು. ನಾವು ತಲೆಯೊಂದಕ್ಕೆ 24 ರೂಪಾಯಿ ಪ್ರಕಾರ ಖರ್ಚುಮಾಡುತ್ತಿದ್ದೇವೆ, ಪ್ರತಿಯೊಂದು ಮಗುವಿಗೂ ವಿದ್ಯಾಭ್ಯಾಸಕ್ಕಾಗಿ ಇಷ್ಟು ಖರ್ಚುಮಾಡುತ್ತಿದ್ದೇವೆ. ಅಷ್ಟು ಕೊಟ್ಟು ಕೂಡ ಸಾಕಷ್ಟು ಪ್ರತಿಫಲ ಬಾರದೇಹೋದರೆ, ನಿಜವಾಗಿಯೂ ಇದರಷ್ಟು ಅನ್ಯಾಯ ಇನ್ನು ಯಾವುದೂ ಇಲ್ಲ ಎಂದು ಅನಿಸುತ್ತದೆ. ಆದ್ದರಿಂದ ಈ ಪರೀಕ್ಷಾ ಫಲಿತಾಂಶದ ಕಡೆ ಹೆಚ್ಚು ಗಮನಕೊಡಬೇಕು. ಅಧ್ಯಾಪಕರು ಸರಿಯಾದ ಫಲಿತಾಂಶ ಕೊಡದೆ ಹೋದರು ಎಂದರೆ, ಅವರನ್ನು ಒಂದು ಭಯದಲ್ಲಿಟ್ಟು ಕೆಲಸ ಮಾಡಿಸಿಕೊಳ್ಳಬೇಕು. ಹಾಗೆ ಇಲ್ಲದೆ ಹೋದರೆ ನಾವು ಖರ್ಚು ಮಾಡುವ ಹಣ ಎಲ್ಲಾ ನಿರರ್ಥಕವಾಗುತ್ತದೆ. ಇಷ್ಟು ಹೇಳಿ, ನಮ್ಮ ವಿದ್ಯಾಮಂತ್ರಿಗಳು ಹೆಚ್ಚು ಈ ದಿಶೆಯಲ್ಲಿ ಗಮನಕೊಟ್ಟು ಅವರಕಾಲದಲ್ಲಿ ವಿದ್ಯಾಭ್ಯಾಸ ಕ್ರಮವನ್ನು ಚೆನ್ನಾಗಿ ಸುಧಾರಿಸಲಿ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಉಪಾಧ್ಯಕ್ಷರೇ, ಈ ಬೇಡಿಕೆಗಳ ಮೇಲೆ ಮಾತನಾಡುವಾಗ, ವಿದ್ಯಾಭ್ಯಾಸದ ಇಲಾಖೆಗೆ ಸಂಬಂಧಪಟ್ಟಂತೆ ಹಾಗೂ ಅದರಲ್ಲಿರುವ ಕೆಲವು ನ್ಯೂನತೆಗಳ ಬಗ್ಗೆ ಕೆಲವು ವಿಷಯಗಳನ್ನು ಮಾತನಾಡಬೇಕೆಂದಿದ್ದೇನೆ. ಇದನ್ನು ತಾವು ಸಚಿವರಾದ ಮೇಲೆ ಹತೋಟಿಗೆ ತರುತ್ತೀರೆಂದು ತಿಳಿದುಕೊಂಡಿದ್ದೆ. ಒಂದು ವರ್ಷವಾದರೂ ಇದನ್ನು ಹತೋಟಿಗೆ ತರಲಾಗಲಿಲ್ಲ ಎಂದು ಹೇಳಬೇಕಾಗಿದೆ. ತಮ್ಮಗಳ ಬಾಯಿಂದ ಸೋಷಿಯಲಿಸಂ ಶಬ್ದ ಆಗಾಗ್ಗೆ ಬರುತ್ತಿದೆ. ದೇಶದಲ್ಲಿ ಇದರ ಕಾರ್ಯಕ್ರಮಗಳನ್ನು ಜಾರಿ ಮಾಡುವ ರೆಸ್‌ಪಾನ್ಸಿಬಲಿಟಿ ನಿಮ್ಮ ಮೇಲೆ ಬಿದ್ದಿದೆ. ಮತ್ತು ಹೊಸ ಪೀಳಿಗೆಗೆ ಮಾರ್ಗದರ್ಶನ ನೀಡುವ ಜವಾಬ್ದಾರಿಯೂ ನಿಮ್ಮ ಮೇಲೆ ಬಿದ್ದಿದೆ. ಇಂಥ ಒಂದು ಕೆಲಸವನ್ನು ಹೊಸ ಪೀಳಿಗೆ ನಿಮ್ಮಿಂದ ನಿರೀಕ್ಷಿಸುತ್ತಿದೆ. ಇದರಲ್ಲಿ ಭ್ರಷ್ಟಾಚಾರದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ತಮ್ಮ ಈ ಒಂದು ವರ್ಷದ ಅವಧಿಯಲ್ಲಿ ತಾವು ಬಿಗ್ ಸ್ಟಿಕ್ ಅನ್ನು ಉಪಯೋಗಿಸಿದ್ದೀರಾ ಎಂದು ನೋಡಿದರೆ, ಉಪಯೋಗಿಸುವುದಕ್ಕಿಂತ ಮೂರು ಹೆಜ್ಜೆ ಹಿಂದೆ ಸರಿದಿದ್ದೀರಿ ಎಂದು ಹೇಳಬೇಕಾಗಿದೆ. ಡಿಸಿಪ್ಲಿನ್ ಡಿಪಾರ್ಟ್‌ಮೆಂಟ್ ಯಾವುದು ಈ ತರಹ ನಡೆಯುತ್ತಾ ಇಲ್ಲ. ಪ್ರೈವೇಟ್ ಇನ್‌ಸ್ಟಿಟ್ಯೂಷನ್ಸ್‌ಗಳು ಸರ್ಕಾರದ ಹಣವನ್ನು ಲೂಟಿ ಮಾಡುವಾಗ ಕಣ್ಣಿನಲ್ಲಿ ಅದನ್ನು ನೋಡಿ ಇಲ್ಲಿ ಉತ್ತರ ಕೊಡುವಾಗ ಅದನ್ನು ಸರಿ ಮಾಡಬೇಕು ಎಂದು ಹೇಳುತ್ತೀರಿ. ಪ್ರೈವೇಟ್ ಮ್ಯಾನೇಜ್‌ಮೆಂಟ್ ಇನ್‌ಸ್ಟಿಟ್ಯೂಷನ್ಸ್ ಅನ್ನು ಮುಟ್ಟುವುದಕ್ಕೆ ನೀವು ಹೆದರಿಕೊಳ್ಳುತ್ತೀರಿ. ನಾನು ಅವುಗಳನ್ನು ನ್ಯಾಷನಲೈಸ್ ಮಾಡಬೇಕು ಎಂದು ಹೇಳುತ್ತಿದ್ದೇನೆ. ಏಕೆಂದರೆ ಪ್ರೈವೇಟ್ ಇನ್‌ಸ್ಟಿಟ್ಯೂಷನ್ಸ್‌ನವರು ಒಂದಲ್ಲ ಒಂದು ರೀತಿಯಿಂದ ಸರ್ಕಾರದ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳಿಗೆ ಅಷ್ಟೇ ಅಲ್ಲ, ಅವರ ತಂದೆ ತಾಯಿಗಳಿಗೆ ಅನ್ಯಾಯವಾಗುತ್ತದೆ. ಇದರ ಬಗ್ಗೆ ತಾವುಗಳು ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಇದ್ದುದರಿಂದ, ಒಂದು ವರ್ಷವಾದರೂ ತಾವುಗಳು ಈ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳದೆ ಇದ್ದುದರಿಂದ ನಮಗೆ ನಿರಾಶೆಯಾಗಿದೆ. ತಮಗೆ ಸೋಷಿಯಲಿಸಂನಲ್ಲಿ ನಂಬಿಕೆ ಇದ್ದರೂ ಕೂಡ ಅಲ್ಪ ಸಮ್ಮತಿ ತೋರಿಸುತ್ತಾ ಇದ್ದೀರಿ. ನಿಜವಾಗಿಯೂ ಇದರ ಬಗ್ಗೆ ಸಮ್ಮತಿ ತೋರಿಸುವುದಕ್ಕೆ ಹೆದರುತ್ತಿದ್ದೀರಿ. ಸೋಷಿಯಲಿಸಂನ

(ಶ್ರೀ ವಿ. ಎನ್. ಪಾಟೀಲ್)

ಕಾರ್ಯಕ್ರಮಗಳನ್ನು ಜಾರಿಗೆ ತರುವುದರಲ್ಲಿ ನೀವು ಒಂದೆರಡು ಸ್ಟೆಪ್ ಹಿಂದಕ್ಕೆ ಹೋಗಿದ್ದೀರಿ ಎಂದು ನಾನು ಹೇಳುತ್ತೇನೆ. ಇಂಥ ಒಂದು ಸ್ಥಿತಿ ತಮ್ಮಗಳ ಆಡಳಿತದಿಂದ ಕಂಡುಬರುತ್ತಿದೆ. ಏಕೆಂದರೆ ಅಧಿಕಾರಿಗಳ ಮೇಲೆ ತಾವು ಹಿಡಿತ ಇಟ್ಟಿಲ್ಲ. ಒಳ್ಳೆಯ ಆಫೀಸರ್ಸ್ ಇದ್ದಾರೆ, ಅವರಿಗೆ ಪ್ರಿನ್ಸಿಪಲಿ ಕೆಲವು ಕೇಸ್‌ಗಳನ್ನು ಡಿಸೈಡ್ ಮಾಡುವುದಕ್ಕೆ ಹುಮ್ಮಸ್ ಇರುವುದಿಲ್ಲ. ಜಸ್ಟಿಫೈಯಿಂಗ್ ಡಿಮ್ಯಾಂಡ್ ಯಾವುದು ಇದೆ ಅದನ್ನು ಸೆಟಲ್ ಮಾಡದೆ ಮೇಲಿನ ಅಧಿಕಾರವರ್ಗಕ್ಕೆ ಬಿಟ್ಟು ನೋಡಿ ಎಂದರೆ, ಅವರು ಏನು ಮಾಡುತ್ತಾರೆ ? ಇದಕ್ಕೆ ಒಂದು ನಿದರ್ಶನವನ್ನು ಕೊಡುತ್ತೇನೆ. ಗುಲ್ಬರ್ಗದಲ್ಲಿರುವ ಅಧಿಕಾರಿಗಳು ಏನಾದರೂ ಕ್ಲಾರಿಫಿಕೇಷನ್ ಕೇಳಬೇಕಾದರೆ ಅವರು ಇಲ್ಲಿಗೆ ಬರಬೇಕು ; ಅಥವಾ ಇಲ್ಲಿಗೆ ಬರೆಯಬೇಕು. ಗುಲ್ಬರ್ಗದಿಂದ, ಬೀದರ್‌ಗೆ ಬಂದು, ಅಲ್ಲಿಂದ ಇಲ್ಲಿಗೆ ಬರಬೇಕು. ಕ್ಲಾರಿಫಿಕೇಷನ್ ಕೇಳುವುದರೊಳಗೆ ಅಧಿಕಾರಿಗಳು ಅದನ್ನು ವಯಲೇಟ್ ಮಾಡುತ್ತಾರೆ. ನೀವು ಅವರ ಮೇಲೆ ಯಾವ ಹತೋಟಿಯನ್ನೂ, ಕಂಟ್ರೋಲನ್ನೂ ಇಡುತ್ತಾ ಇಲ್ಲ. ಇಂಥವರಿಗೆ ಎಫಿಷಿಯೆಂಟ್ ಎಂದು ಮತ್ತೊಂದು ಹೆಸರು ಕೊಡುತ್ತೀರಿ. ಇವರಿಗೆ ಯಾರ ಹತ್ತಿರ ಮಾತನಾಡುವುದಕ್ಕೆ ಸಮಯವಿಲ್ಲ ಎಂದು ಹೇಳುತ್ತಿರುತ್ತಾರೆ. ಅವರು ಹೇಗಿರಬೇಕೆಂದರೆ ಯಾರನ್ನೂ ಮಾತನಾಡಿಸುವುದಕ್ಕೆ ಅವಕಾಶ ಕೊಡದೆ ಒಂದು ಪ್ರಾಬ್ಲಮ್ ಕೊಟ್ಟರೆ ಅದನ್ನು ಮುಗಿಸಿಬಿಡಬೇಕು. ಪ್ರಾಕ್ಟಿಕಲ್ ಆಗಿ ಎಫಿಷಿಯಂಟ್ ಎಂದರೆ, ಫೈಲುಗಳನ್ನು ಟೇಬಲ್ ಮೇಲೆ ಬೆಳೆಸಿಕೊಂಡು ಹೋಗುವುದಿಲ್ಲ. ಅದಷ್ಟು ಸರಿಯಾಗಿ ಅವರು ಕೆಲಸ ಮಾಡಬೇಕು. ಯಾರಾದರೂ ಹೋಗಿ ಕೇಳಿದರೆ, ಅವರಿಂದ ಬರತಕ್ಕ ಉತ್ತರ, ನಾವೂ ಮನುಷ್ಯರು ನೋಡಿ ಕಾಫಿಗೆ ಹೋಗುವುದಕ್ಕೂ ಟೈಂ ಇಲ್ಲ ಎಂದು ಹೇಳುತ್ತಿರುತ್ತಾರೆ.

ಶ್ರೀ ಎ. ಆರ್. ಬದರೀನಾರಾಯಣ್.—ಈಗ ಅದು ಆಗುತ್ತಾ ಇಲ್ಲ.

ಶ್ರೀ ವಿ. ಎನ್. ಪಾಟೀಲ್.—ಡ್ರಾಟ್ ಅಫೆಕ್ಟೆಡ್ ಏರಿಯಾದ ಟೀಚರ್ಸ್ ಬಗ್ಗೆ ತಮ್ಮ ಹತ್ತಿರ ಡಿಸ್‌ಕಸ್‌ಮಾಡಿದಾಗ, ಅವರಿಗೆ ರಿಲೀಫ್ ಕೊಡಬೇಕು, ಇನ್ನೂ ಕೊಟ್ಟಿಲ್ಲ ಎಂದಿದ್ದಕ್ಕೆ ನಾವು ಅದನ್ನು ಸೆಟ್ ರೈಟ್ ಮಾಡುತ್ತೇವೆ ಎಂದು ಹೇಳಿದ್ದೀರಿ. ತಾವು ಕೊಟ್ಟಂಥ ಆರ್ಡರ್ ಅನ್ನು ನಾನು ಟೆಸ್ಟಿಫೈ ಮಾಡುವುದು ಬೇಡ. ಅಲ್ಲಿ 51 ಜನ ಟೀಚರ್ಸ್‌ಗೆ ಅವರಿಗೆ ಮ್ಯಾಕ್ಸಿಮಂ 12 ವರ್ಷ ಸರ್ವೀಸ್ ಆದರೂ ಪ್ರಮೋಷನ್ ಕೊಟ್ಟಿಲ್ಲ. 6-8 ತಿಂಗಳ ಹಿಂದೆ ಪ್ರಮೋಷನ್ ಕೊಟ್ಟು ಅದೇ ತಿಂಗಳಲ್ಲಿ ರಿವರ್ಷನ್ ಮಾಡಿ ಅವರು ಇದ್ದ ಸ್ಥಳಕ್ಕೆ ಕಳುಹಿಸಿದ್ದೀರಿ. ಅವರಿಗೆ ಸಂಬಳ ಇಲ್ಲ, ಅನ್ನ ಇಲ್ಲ, ನೀರು ಇಲ್ಲ, ಕ್ಷಾಮಸ್ಥಿತಿಯಲ್ಲಿ ಏನು ರಿಲೀಫ್, ಕೊಡುತ್ತೀರಿ ? ರಿವರ್ಷನ್ ಮಾಡಿದರೆ ಇಲ್ಲೀಗಲ್ ಪ್ರಮೋಷನ್ ಆಗಿದೆಯೋ? 1963ರಲ್ಲಿ 3 ಸಾರಿ ಪ್ರಮೋಷನ್ ಕೊಟ್ಟಿದ್ದೀರಿ, 1965ರಲ್ಲಿ ಪ್ರಮೋಷನ್ ಕೊಟ್ಟಿದ್ದೀರಿ, 1968ರಲ್ಲಿ 50 ಜನ ಪ್ರಮೋಷನ್ ಹೊಂದಿದ್ದಾರೆ. ಅವರನ್ನು ರಿವರ್ಟ್ ಮಾಡಿಲ್ಲ. ಜೂನ್ 1972ರಲ್ಲಿ ಪ್ರಮೋಷನ್ ಕೊಟ್ಟಿದ್ದೀರಿ. ಆಗಸ್ಟ್ 1972ರಲ್ಲಿ ಪ್ರಮೋಷನ್ ಕೊಟ್ಟಿದ್ದೀರಿ, ಇವರಿಗೆ ರಿವರ್ಟ್ ಮಾಡಿದ್ದೀರಿ. 107 ಸ್ಥಾನಗಳು ಖಾಲಿ ಇದ್ದರೂ ರಿವರ್ಟ್‌ಮಾಡಿ ಕಳುಹಿಸುತ್ತೀರಿ. ಪಿ.ಎಸ್.ಸಿ. ಕ್ಯಾಂಡಿಡೇಟ್ಸ್ ಅನ್ನು ಕಳುಹಿಸುವುದರೊಳಗೆ ಮಂತ್ರಿಗಳ ಸ್ಥಾನವೂ ಇಲ್ಲ. ವಿದ್ಯಾರ್ಥಿಗಳಿಗೆ ಪಾಠ ಕಲಿಸುವುದು ಎಲ್ಲಿ ? ಫ್ರಸ್ಟ್ರೇಷನ್ ಆಗಿ ಅವರು ಈ ಒಂದು ಇನ್‌ಜಸ್ಟೀಸ್ ಫೇಸ್ ಮಾಡುವುದಕ್ಕೆ 154 ರೂಪಾಯಿ ಸಂಬಂಳವನ್ನು ಖರ್ಚುಮಾಡಿಕೊಂಡು ಬೆಂಗಳೂರಿಗೆ ಬಂದು ಸುತ್ತಾಡಬೇಕು. ಇದು ಅನ್ಯಾಯವಲ್ಲವೇ ? ಇದನ್ನು ಏನೆಂದು ಕರೆಯಬೇಕು ? ತಮ್ಮನ್ನು ಮುಜರಾಯಿ ಮಂತ್ರಿಗಳನ್ನಾಗಿ ಮಾಡಿದ್ದರೆ ಎಲ್ಲರೂ ಸುಖೀಭವ ಎಂದು ಆಶೀರ್ವಾದ ಕೊಟ್ಟುಕೊಂಡು ಇರುತ್ತಿದ್ರಿ. ಒಂದು ಸರಿಯಾದ ಅಪ್ರೋಚ್ ಇದ್ದರೂ ಅವರು ನಿರಾಶೆಯಿಂದ ಹೋಗುತ್ತಿದ್ದಾರೆ. ಇದು ಜೆನಿಯುನ್ ಕೇಸ್ ಅಲ್ಲವೇ ?

ಶ್ರೀ ಎ. ಆರ್. ಬದರೀನಾರಾಯಣ್.—ಬಹುಶಃ ಎಲ್ಲಾ ಸಮಸ್ಯೆಗಳು ಇತ್ಯರ್ಥ ಆಗಿವೆ.

Sri V. N. PATIL.—But the smallest problem, where there is no difficulty, has not been solved.

Sri A. R. BADARINARAYANA.—I think there is some practical difficulty.

Sri V. N. PATIL.—There is no practical difficulty here. I think it has become a prestige issue to some officers. They are too much touchy. Why these teachers should go to M.L.As.? I don't think M.L.As. are senior to any officer. Approaching M.L.As. and going to M.L.As. is a sin If any officers thinks that this is correct he deserves to serve as an officer. Injustice are there means it is known that people should come to the representatives of the people. ಸಣ್ಣ ವಿಷಯವನ್ನು ದೊಡ್ಡದಾಗಿ ಬಳಸಿಕೊಂಡು ಹೇಳುವುದಕ್ಕೆ ಹೋಗುವುದಿಲ್ಲ. ಈ ಒಂದು ವಿಚಾರದಲ್ಲಿ ಅವರಿಗೆ ತಮ್ಮ ರಿಪ್ಲೈಯನ್ನು ಕಳುಹಿಸಿಕೊಡಿ ಎಂದು ಕೇಳಿಕೊಳ್ಳುತ್ತೇನೆ.

4-00 P.M.

ಎಷ್ಟೋ ಪ್ರೈವೇಟ್ ಕಾಲೇಜುಗಳಲ್ಲಿ ಫೀಸ್ ಹೆಚ್ಚಿಸುತ್ತಿದ್ದಾರೆ. ಧಾರಾಳವಾಗಿ ಗ್ರಾಂಟ್ ಕೊಡುತ್ತಾರೆ. ಒಂದು ಇನಾಗ್ಯುರೇಷನ್ ಪ್ರೋಗ್ರಾಮ್ ಇಟ್ಟುಕೊಂಡು ನಾಲ್ಕಾಣೆ ಹೂವಿನ ಸರ ಹಾಕಿದರೆ 45 ಸಾವಿರ ರೂಪಾಯಿ ಗ್ರ್ಯಾಂಟ್ ರೂಪದಲ್ಲಿ ದುಡಿಯಬಹುದು ಎಂದು ಎರಡು ಮೂರು ಪ್ರೈವೇಟ್ ಕಾಲೇಜಿನವರು ಪ್ಲಾನ್ ಮಾಡಿಕೊಂಡು ನನ್ನ ಹತ್ತಿರ ಬಂದರು. ಅದು ಸರ್ಕಾರದ ದುಡ್ಡು ಈ ಪಾಪದ ಕೆಲಸಕ್ಕೆ ಬೇಡ ಎಂದು ನಾನು ಅಡ್ಡಗಲಾಗಿ ನಿಂತಿದ್ದೇನೆ. ಇಂಥ ಕ್ಷಾಮ ಪರಿಸ್ಥಿತಿ ಬಂದಾಗಲೂ ಪ್ರೈವೇಟ್ ಕಾಲೇಜುಗಳಲ್ಲಿ ಫೀಸ್ ಹೆಚ್ಚಿಸದಂತೆ ಏನು ಕ್ರಮ ತೆಗೆದುಕೊಂಡಿದ್ದಾರೆ? ಗ್ರಾಂಟ್ ಕೊಡುವುದನ್ನು ಸ್ಟಾಪ್ ಮಾಡಿದ್ದಾರೆಯೇ? ಇಂಥ ಫೈನಾನ್ಷಿಯಲ್ ಸ್ಟ್ರಿಂಜೆನ್ಸಿ ಇರುವಾಗ ರಾಜ್ಯದಲ್ಲಿ ಅರ್ಧಭಾಗದ ಜನ ಕ್ಷಾಮದಿಂದ ನರಳುತ್ತಿದ್ದು, ಸಾಯುತ್ತಿರುವಾಗ ಪ್ರೈವೇಟ್ ಮ್ಯಾನೇಜ್‌ಮೆಂಟ್ ಆ ಕಡೆ ಫೀಸ್ ಹೆಚ್ಚಿಸಿ ಲೂಟಿ ಮಾಡುತ್ತಿದ್ದಾರೆ. ಆದರೂ ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ ಎಂದು ನಿರಾಶೆಯಾಗಿ ಹೇಳಬೇಕಾಗುತ್ತದೆ. ಇನ್ನಾದರೂ ಕ್ರಮ ತೆಗೆದುಕೊಳ್ಳುತ್ತಾರೆಂದು ನಂಬುತ್ತೇನೆ.

ಟೀಚರ್ ಮತ್ತು ಸ್ಟೂಡೆಂಟ್ಸ್ ರೇಷ್ಯೊ ಬಗ್ಗೆ ಎಷ್ಟು ಪ್ರಶ್ನೆಗಳನ್ನು ಕೇಳಿದರೂ ಆ ರೀತಿ ತೆಗೆದುಕೊಳ್ಳಬೇಕಾದರೆ ಹಣ ಇಲ್ಲದೆ ಎಂದು ಹೇಳುತ್ತೀರಿ. ಬೇಕಾದರೆ ಪ್ರೈವೇಟ್ ಸಿ.ಐ.ಡಿ.ಗಳನ್ನು ಬಿಟ್ಟು ಬ್ಲಾಕ್ ಮನಿ ಇಂಥ ಸ್ಥಳದಲ್ಲಿ ಇದೆಯೆಂದು ಕೈತೋರಿಸುತ್ತೇವೆ. ತಾವು ಟ್ಯಾಕ್ಸ್ ಹಾಕಿ ಅದನ್ನು ಎಳೆಯಿರಿ. ಫೈನಾನ್ಸ್ ಮಿನಿಸ್ಟರ್ ಜೇಬಿನೊಳಗೆ ಕೈಹಾಕಿ. ಫೈನಾನ್ಸ್ ಮಿನಿಸ್ಟರ್ ಕೊಡಲಿಕ್ಕೆ ಇಲ್ಲ ಎಂದು ಹೇಳಿದರೆ ಎಜುಕೇಷನ್ ಡಿಪಾರ್ಟ್‌ಮೆಂಟ್‌ಗೆ ದುಡ್ಡು ಹೆಚ್ಚಿಗೆ ಹೇಗೆ ಸಿಕ್ಕುತ್ತದೆ?

ಶ್ರೀ ಎ. ಆರ್. ಬದರಿನಾರಾಯಣ.—67 ಕೋಟಿ ಚಿಲ್ಲರೆ ರೂಪಾಯಿ ಕೊಟ್ಟಿದ್ದಾರೆ.

ಶ್ರೀ ವಿ. ಎನ್. ಪಾಟೀಲ್.—ಅದು ಸಾಕಾಗುವುದಿಲ್ಲ, 100 ಕೋಟಿ ರೂಪಾಯಿ ಏತಕ್ಕೆ ಕೇಳಲಿಲ್ಲ? ದುಡ್ಡು ನಿಮ್ಮ ಜೇಬಿನಲ್ಲಿ, ನಮ್ಮ ಜೇಬಿನಲ್ಲಿ ಇದೆಯೇ? ಸರ್ಕಾರ ನಮ್ಮ ದೇಶದಲ್ಲಿ ಬ್ಲಾಕ್‌ಮಾರ್ಕೆಟೀಯರ್ಸ್ ಮತ್ತು ಆಂಟಿಸೋಷಿಯಲ್ ಎಲಿಮೆಂಟ್ಸ್ ಯಾರಿದ್ದಾರೆ ಅಂಥವರ ಜೇಬಿಗೆ ಕೈಹಾಕುವುದಿಲ್ಲ. ಸೋಷಿಯಲಿಸಂ ಬಗ್ಗೆ ಯಾವಾಗಲೂ ಹೇಳುತ್ತಿರುತ್ತಾರೆ.

ಇನ್ನು ಶಾಲೆಗಳಿಗೆ ಬೇಕಾಗಿರತಕ್ಕ ಕಟ್ಟಡಗಳ ಬಗ್ಗೆ ಇರತಕ್ಕ ಕನಿಕರ ಪಡುವಂಥ ಸ್ಥಿತಿಯ ವಿಚಾರವನ್ನು ಹೇಳುತ್ತೇನೆ. ನನ್ನ ಏರಿಯಾದಲ್ಲಿ ಪ್ರತಿಯೊಂದು ಕಡೆ ಇಂಥ ಸಿಚ್ಯುಯೇಷನ್ ಇದೆ. ಹುಮ್ನಾಬಾದ್ ತಾಲ್ಲೋಕಿನಲ್ಲಿ ಮನ್ನಾಯತೇಲಿ ಎಂಬ ಗ್ರಾಮ ಇದೆ ಅಲ್ಲಿ ಹೆಡ್‌ಮಾಸ್ಟರ್ ಆಫೀಸ್ ರೂಮಿನಲ್ಲಿ, ಮಾವಿನ ಮರದ ಕೆಳಗೆ ಕುಳಿತು, ಬೀದಿ ಕಟ್ಟೆಮೇಲೆ ವಿದ್ಯಾರ್ಥಿಗಳು ಕುಳಿತು ಕ್ಲಾಸ್ ಮಾಡುತ್ತಾಯಿರುವುದು ಉಂಟು. ಮಳೆಗಾಲದಲ್ಲಿ ಎಲ್ಲಿ ಕೂರಿಸುತ್ತಾರೆ ಎಂದರೆ ಶಾಂತಿನಿಕೇತನದಲ್ಲಿ ಪಾಠ ಮಾಡಿದಂತೆ ಆಗುತ್ತದೆ. ಒಂದು ರೂಮು ಕಟ್ಟಿಕೊಡುವುದಕ್ಕೂ ಆಗಲಿಲ್ಲ. ಟಿ.ಡಿ.ಬಿ. ಹೈಸ್ಕೂಲು ತಮ್ಮ ವಶಕ್ಕೆ ಏತಕ್ಕೆ ತೆಗೆದುಕೊಳ್ಳುವುದಿಲ್ಲ? ಏಕೆ ವಿದ್ಯಾರ್ಥಿಗಳಿಗೆ ಈ ರೀತಿ ಅನ್ಯಾಯ ಮಾಡುತ್ತೀರಿ? ಬರುವ ಹೋಗುವ ಬಸ್ಸನ್ನು ವಿದ್ಯಾರ್ಥಿಗಳು ನೋಡಬೇಕು. ಸೈನ್ಸ್ ಎಕ್ಸ್‌ಪರಿಮೆಂಟ್ ಮಾಡಲು ರೋಡ್ ಮೇಲೆ ಕೂಡುತ್ತಾರೆ. 5 ರಿಂದ 10ನೇ ಕ್ಲಾಸ್ ಹುಡುಗರು ಆ ರೀತಿ ರೋಡಿನಲ್ಲಿ ಕೂತಾಗ 3 ಪರ್ಸೆಂಟ್ ರಿಸಲ್ಟ್ ಬಂದಾಗ, ಏತಕ್ಕೆ ಬಂದಿತು ಎಂದರೆ indiscipline among the students ಎಂದು ಹೇಳುತ್ತೀರಿ. ಅಷ್ಟೇ ಅಲ್ಲದೆ ಪಾಲಿಟೀಷಿಯನ್ಸ್ ಇಂಟರ್‌ಫಿಯರೆನ್ಸ್ ಎಂದೂ ಹೇಳುತ್ತೀರಿ, ಇಂಥ ಸ್ಥಿತಿಗೆ ಮೂಲಭೂತ ಕಾರಣರು

(ಶ್ರೀ ವಿ. ಎನ್. ಪಾಟೀಲ್)

ತಾವು. ಷಿಫ್ಟ್ ಸಿಸ್ಟಮ್ ಬೇಸಿಸ್ ಮೇಲೆ ಕ್ಲಾಸ್ ನಡೆಸಿ ಬೆಳಿಗ್ಗೆ 7 ರಿಂದ 10ರವರೆಗೆ 8ನೇ ಸ್ಟ್ಯಾಂಡರ್ಡ್, 10 ಗಂಟೆ ಆದಮೇಲೆ ಮತ್ತೊಂದು ಕ್ಲಾಸ್ ನಡೆಸಿ, ಇಲ್ಲದೆ ಹೋದರೆ 3 ರೂಮುಗಳಲ್ಲಿ ಎಷ್ಟರಮಟ್ಟಿಗೆ ಕ್ಲಾಸ್ ನಡೆಸಿಕೊಂಡು ಹೋಗುತ್ತಾರೆ? ಇದರ ಬಗ್ಗೆ ಆಫೀಸರ್ಸ್ ಏನಾದರೂ ಯೋಚನೆ ಮಾಡಿದ್ದಾರೆಯೇ?

ಇನ್ನು ಪೋಸ್ಟಿಂಗ್ಸ್ ವಿಷಯ. ಬೀದರ್ ಡಿಸ್ಟ್ರಿಕ್ಟ್‌ನಲ್ಲಿ ಬ್ಯೂಟಿಫುಲ್ ಸಿಸ್ಟಂ ಮಾಡಿದ್ದಾರೆ. ಅಲ್ಲಿ ತಿನ್ನುವುದಕ್ಕೂ ಬರುವುದಿಲ್ಲ, ತಿನ್ನಿಸುವುದಕ್ಕೂ ಬರುವುದಿಲ್ಲ ಎಂದು ಹೇಳುತ್ತಾರೆ. ಮೊದಲು ಈ ಟ್ರಾನ್ಸ್‌ಫರ್‌ಗೆ ರೂರಲ್ ಏರಿಯಾಕ್ಕೆ 300 ರೂಪಾಯಿ ಎಂದು ರೇಟು ಫಿಕ್ಸ್ ಆಗಿತ್ತು ಎಂದು ದೂರುಗಳು ಬರುತ್ತಿವೆ. ಇಂಥ ಅನ್ಯಾಯ ಹೇಗೆ ತಡೆಗಟ್ಟುತ್ತೀರಿ. ಈ ಡಿಪಾರ್ಟ್‌ಮೆಂಟ್ ಒಂದು ಮಾದರಿಯಾಗದ ಹೊರತು ನಮ್ಮ ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ಉತ್ತಮ ರಿಸಲ್ಟ್ಸ್ ತರುವುದು ಆದರೂ ಹೇಗೆ? ನಮ್ಮ ದೇಶದ ಕಲ್ಚರ್ ಏನು ಇದೆ? ಈ ರೀತಿಯಲ್ಲಿ ನಮ್ಮ ದೇಶ ಹೋದರೆ ನಾವು ಯಾವಾಗ ಅಫ್ಲ್ಯುಯೆಂಟ್ ಸೊಸೈಟಿ ಆಗುವುದು? ನ್ಯಾಷನಲಿಸಂನಲ್ಲಿ ಫ್ರಸ್ಟ್ರೇಷನ್ ಬರುವುದಿಲ್ಲವೇ? ಇನ್‌ಜಸ್ಟೀಸ್ ಆಗಿರುವ ಜನರಲ್ಲಿ ನ್ಯಾಷನಲಿಸಮ್ ಹುಟ್ಟುವುದಕ್ಕೆ ಸಾಧ್ಯವಿಲ್ಲ. ಮುಂದಿನ ಜನಾಂಗವನ್ನು ರೂಪಿಸುವ ಜವಾಬ್ದಾರಿ ಎಜ್ಯುಕೇಷನ್ ಡಿಪಾರ್ಟ್‌ಮೆಂಟಿನ ಮೇಲೆ ಇದೆ. ತಾವು ಮಾತ್ರ ನಿರಾಶೆಗೊಳ್ಳಬೇಡಿ. ಬೇರೆಯವರು ಇನ್‌ಎಫಿಷಿಯಂಟ್ ಆಗಿದ್ದರೆ ಅವರನ್ನು ಕಂಟ್ರೋಲ್ ಮಾಡಿ ಎಂದು ಹೇಳುತ್ತೇನೆ. ಇಂಥಾದ್ದು ಇದೇ ರೀತಿ ಮುಂದುವರಿದರೆ ನಿಮ್ಮನ್ನು ಇನ್‌ಎಫಿಷಿಯೆಂಟ್ ಆಗಿದ್ದೀರಿ ಎಂದು ಹೇಳಬೇಕಾಗುತ್ತದೆ. ಸೋಷಿಯಲಿಸಂ ತರುವ ಜನರಾಗಿ ತಾವು ಕೂತಿದ್ದೀರಿ. ಅದನ್ನು ಜನರಿಗೆ ಕೊಡಿ. ಅದನ್ನು ಮರೆತಿಲ್ಲ, ಹೋರಾಟ ಮಾಡುತ್ತೇವೆ ಎಂದು ಜನರಿಗೆ ಹೇಳಿ, ಅದಕ್ಕೆ ನಾವು ತಮಗೆ ಸಹಕಾರ ಕೊಡುತ್ತೇವೆ. ನಮ್ಮಲ್ಲಿ ಲ್ಯೂಕ್‌ವರ್ಮ್ ಆಟಿಟ್ಯೂಡ್ ಇಲ್ಲ.

ಇನ್ನು ಮಿಡ್ ಡೇ ಮೀಲ್ಸ್ ಪ್ರೋಗ್ರಾಮ್ ತೆಗೆದಿದ್ದೀರಿ. ಅದರ ಮೇಲೆ ಫಾಲೋ ಅಪ್ ಆಕ್ಷನ್ ಇಟ್ಟಿದ್ದೀರಾ? ಹುಮ್ನಾಬಾದ್ ತಾಲ್ಲೋಕಿನಲ್ಲಿ ನೀಲಕೇರಿ ಗ್ರಾಮದ ವಿಚಾರ ಹೇಳುತ್ತೇನೆ. ಅಮೇರಿಕಾದವರು ಸೋಯಾಬಿನ್ ಆಯಿಲ್ ಕೊಡುತ್ತಾರೆ, ಅದನ್ನು ಅನ್ನದ ಮೇಲೆ ಹಾಕುತ್ತಾರೆ. ಗೋಧಿಯಲ್ಲಿ ದತ್ತೂರಾ ಸೀಡ್ಸ್ ಮಿಕ್ಸ್ ಆಗಿದೆ. ಆ ಗ್ರಾಮದ ಹೆಡ್‌ಮಾಸ್ತರು 5 ಡಬ್ಬಿ ಆಯಿಲ್ ಬಂದರೆ ಮೂರು ಡಬ್ಬಿಗಳನ್ನು ಮೊದಲೇ ಮನೆಗೆ ಪಾರ್ಸಲ್ ಮಾಡುತ್ತಾರೆ. ಇದರ ಬಗ್ಗೆ ಫಾಲೋ ಅಪ್ ಆಕ್ಷನ್ ಇಟ್ಟಿದ್ದೀರಾ? ಮಿಡ್ ಡೇ ಮೀಲ್ ಒಂದು ಪ್ಲೇಟ್ ತಾವು ಕೂಡ ತೆಗೆದುಕೊಂಡು ತಿಂದು ನೋಡಿದ್ದೀರಾ? ತಾವು ಪ್ರೋಗ್ರಾಂ ಕೊಟ್ಟು ಹೋದರೆ ತಮಗೆ ತಿಂಡಿಯನ್ನು ಉಡ್‌ಲ್ಯಾಂಡ್ ಹೋಟೆಲಿನಲ್ಲಿ ತರಿಸಿಕೊಡುತ್ತಾರೆ. ಪ್ರೋಗ್ರಾಂ ಕೊಡದೆ ಹೋಗಿ ಮಕ್ಕಳ ಜೊತೆಯಲ್ಲಿ ನೀವು ಕೂತು ತಿಂದು ನೋಡಬೇಕು ಅವರು ಎಂಥ ಅಡಿಗೆ ಮಾಡುತ್ತಾರೆ ಎಂಬುದು ನಿಮಗೆ ಆಗ ಗೊತ್ತಾಗುತ್ತದೆ. ಸರ್ಕಾರ ಕೊಡುವ ಮಿಡ್ ಡೇ ಮೀಲ್ ಏನು ಪ್ರಿಪೇರ್ ಮಾಡುತ್ತಾರೆ ಅದರ ಸಲುವಾಗಿ ಪ್ರಾವಿಷನ್ ಇಟ್ಟಿಲ್ಲ. ಪೂರ್ ಸ್ಟೂಡೆಂಟ್ಸ್ ತಿಂಗಳಿಗೆ ನಾಲ್ಕಾಣೆ ತಂದು ಕೊಡುವುದಕ್ಕೆ ಹೇಳುತ್ತಾರೆ. ಅವರು ಕೊಡದೆ ಇದ್ದರೆ ಹೆಡ್‌ಮಾಸ್ಟರ್ ಮನೆಯಿಂದ ಕೊಡುತ್ತಾರೆಯೇ? ಇದು ಒಂದು ರಾಕೇಟ್ ಆಗಿದೆ. ಪ್ರತಿಯೊಂದು ಸ್ಕೂಲಿಗೂ ಮಿಡ್ ಡೇ ಮೀಲ್ ಕಡ್ಡಾಯವಾಗಿ ತೆಗೆದಿದ್ದಾರೆಂದು ಹೇಳುವುದಕ್ಕೆ ಸಾಧ್ಯವೇ? ಎಲ್ಲಿ ಡ್ರಾಟ್ ಸಿಚ್ಯುಯೇಷನ್ ಇದೆ ಅಲ್ಲಿ ಪೇರೆಂಟ್ಸ್‌ಗೇ ತಿನ್ನುವುದಕ್ಕೆ ಅನ್ನವಿಲ್ಲ. ಒಂದೊಂದು ಕಾನ್‌ಸ್ಟಿಟ್ಯೂಯೆನ್ಸಿ ತಾಲ್ಲೋಕು ಹೆಡ್‌ಕ್ವಾಟರ್ಸ್ ಹೋದರೂ 60—70 ಗ್ರಾಮಗಳು ಇವೆ. ನಮ್ಮ ಅಧಿಕಾರಿಗಳಿಗೆ ಬೀದರ್ ತಾಲ್ಲೋಕಿನಲ್ಲಿ ಪ್ರತಿಯೊಂದು ಗ್ರಾಮದಲ್ಲಿ ಕ್ಷಾಮ ಪ್ರದೇಶ ಇದ್ದರೂ ಕೂಡ ಮಿಡ್ ಡೇ ಮೀಲ್ ತೆಗೆಯಲಿಲ್ಲ, ಕಾರಣ ಏನು? ಅವರಿಗೆ ಪನಿಷ್‌ಮೆಂಟ್ ಕೊಡುವುದಕ್ಕೆ ತಯಾರಿದ್ದೀರಾ? The Chief Minister says there is no dearth of money but the food Minister says there is no money. So there is a contradiction.

ಶ್ರೀ ಆರ್. ಎಸ್. ಪಾಟೀಲ್.—ಮಿಡ್ ಡೇ ಮೀಲ್ ಕಾರ್ಯಕ್ರಮ ಏನಿದೆ ಇದು ಸಣ್ಣ ಬಾಲಕರ ಸ್ವಾಭಿಮಾನಕ್ಕೆ ಕುಂದು ತರುವ ಕ್ರಮ. ಆದ್ದರಿಂದ ಇದನ್ನು ಬಂದ್ ಮಾಡುವುದಕ್ಕೆ ನಿಮ್ಮ ಅಭಿಪ್ರಾಯ ಏನು?

ಶ್ರೀ ವಿ. ಎನ್. ಪಾಟೀಲ್.—ಭಿಕ್ಷುಕರು ಭಿಕ್ಷೆ ಬೇಡುತ್ತಾರೆ ಎಂದರೆ ಅದರಲ್ಲಿ ಸ್ವಾಭಿಮಾನ ಹೋಗುತ್ತದೆಯೇ ? ತಮ್ಮ ಅನ್ನವನ್ನು ಉಣ್ಣಲಿಕ್ಕೆ ಭಿಕ್ಷುಕರು ಭಿಕ್ಷೆ ಬೇಡುವುದು. As a right we are claiming; we are the sons of the soil. ತಾವು ಒಂದು ಸುಗ್ರೀವಾಜ್ಞೆಯ ನ್ನಾದರೂ ಹೊರಡಿಸಿ. ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲೂ, ಪ್ರತಿಯೊಂದು ಗ್ರಾಮದಲ್ಲೂ ಯಾವ ಗ್ರಾಮದಲ್ಲಿ ಮಿಡ್ಡೇ ಮೀಲ್ಸ್ ಸರಿಯಾಗಿ ವ್ಯವಸ್ಥೆ ಮಾಡಿಲ್ಲವೋ ಅಂಥಾ ಕಡೆ ಎನ್‌ಕ್ವೈರಿ ಮಾಡಿಸಿ. Let our children learn to feed themselves.

ಇನ್ನು ಜೂನಿಯರ್ ಕಾಲೇಜನನ್ನು ಎಲ್ಲಾ ಕಡೆಯೂ ಕೊಟ್ಟಿದ್ದೀರಿ. ಇದರಿಂದ ಆ ತಾಲ್ಲೂಕಿನವರು ಏನು ಹೇಳುತ್ತಾರೆ ಎಂದರೆ ನಮ್ಮೂರ ಎಂ.ಎಲ್.ಎ. ಅವರು ಪ್ರಯತ್ನ ಮಾಡಿ ಕೊಡಿಸಿದರು ಎಂದು ಹೇಳುತ್ತಾರೆ, ಆ ಊರಿನಿಂದ ಬಂದಿರತಕ್ಕಂಥ ಮಂತ್ರಿಗಳು ಇದ್ದರೆ ನಮ್ಮೂರ ಮಂತ್ರಿಗಳು ಈ ಕಾಲೇಜನ್ನು ಕೊಡಿಸಿದರು ಎಂದು ಹೇಳುತ್ತಾರೆ. ಆದರೆ ಈಗ ಜೂನಿಯರ್ ಕಾಲೇಜುಗಳನ್ನು ಏನು ಓಪನ್ ಮಾಡಿದ್ದೀರಿ ಅದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ.

ಶ್ರೀ ಎ. ಆರ್. ಬದರಿನಾರಾಯಣ.—ಮಾನ್ಯ ಸದಸ್ಯರು ಯಾವುದಾದರೂ ನಿರ್ದಿಷ್ಟವಾದ ಕಾಲೇಜ್ ಹೇಳಿದರೆ ಉತ್ತರ ಕೊಡಬಹುದು.

ಶ್ರೀ ವಿ. ಎನ್. ಪಾಟೀಲ್.—ನಮ್ಮ ಕಡೆ 3 ಜೂನಿಯರ್ ಕಾಲೇಜುಗಳವರು ಇದು ನಮಗೆ ಬೇಡ, ನಾವು ನಡೆಸುವುದಕ್ಕಾಗುವುದಿಲ್ಲ, ಇದನ್ನು ಸರ್ಕಾರವೇ ತೆಗೆದುಕೊಳ್ಳಿ ಎಂದು ಹೇಳಿದರೂ ಅವರು ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ತಾವು ಜೂನಿಯರ್ ಕಾಲೇಜುಗಳನ್ನು ತೆಗೆದ ಮೇಲೆ ಅದನ್ನು ಸರಿಯಾಗಿ ನಡೆಸುವಂತೆ ಏರ್ಪಾಡು ಮಾಡಬೇಕಾದ್ದು ನಿಮ್ಮ ಹೊಣೆಗಾರಿಕೆ ಯಲ್ಲವೇ ?

ಇನ್ನು ನಮ್ಮ ಸ್ನೇಹಿತರಾದಂಥ ಶ್ರೀಮಾನ್ ದೇವೇಗೌಡರು ಅಕಾಡಮಿ ವಿಷಯದ ಬಗ್ಗೆ ಹೇಳಿದರು. Of course entertainment is an essential thing for human beings. ಬೆಂಗಳೂರು ಯೂನಿವರ್ಸಿಟಿಗೆ ಈ ಕಲ್ಚರಲ್ ಪ್ರೋಗ್ರಾಂಗಾಗಿ ಹೋದಸಾರಿ 75 ಸಾವಿರ ರೂಪಾಯಿ ಕೊಟ್ಟವರು ಈ ವರ್ಷ 63 ಸಾವಿರ ರೂಪಾಯಿ ಮಂಜೂರು ಮಾಡಿದ್ದಾರೆ. ನಮ್ಮ ಬೆಂಗಳೂರು ಯೂನಿವರ್ಸಿಟಿಗೆ ಈ ಸಲ ಒಳ್ಳೆಯ ವೈಸ್ ಛಾನ್ಸಲರ್ ಬಂದಿದ್ದಾರೆ. ಅವರಿಗೆ ಒಳ್ಳೆಯ ರಿವಾರ್ಡ್ ಇದೆ. ಅರೀತಿ ಒಳ್ಳೆಯ ಕೆಲಸ ಮಾಡತಕ್ಕವರು ಬಂದಿರುವುದರಿಂದ ಇನ್ನೂ 25 ಸಾವಿರ ರೂಪಾಯಿ ಹೆಚ್ಚಿಗೆ ಗ್ರ್ಯಾಂಟ್ ಕೊಟ್ಟಿದ್ದರೆ ಅವರು ಇನ್ನೂ ಒಳ್ಳೆಯ ಕೆಲಸ ಮಾಡುವು ದಕ್ಕೆ ಅನುಕೂಲವಾಗುತ್ತಿತ್ತು. If you had given more money for the Bangalore University where there is an able Vice-Chancellor he could have done more work. ಆದುದರಿಂದ ಈಗ ಕೊಟ್ಟಿರುವುದರ ಜೊತೆಗೆ ಇನ್ನೂ 25 ಸಾವಿರ ರೂಪಾಯಿ ಜಾಸ್ತಿ ಹಣ ಕೊಡಿರಿ ಎಂದು ಹೇಳುತ್ತೇನೆ.

ಇನ್ನು ಕೆಲವು ಲಿಂಗ್ವಿಸ್ಟಿಕ್ ಮೈನಾರಿಟೀಸ್ ಸ್ಕೂಲುಗಳು ಇವೆ. Bidar district is know for its cosmopolitan and multi-lingnal area having schools with Urdu, Marahti and Telugu language predominence. ಈ ವಿಷಯದಲ್ಲಿ ಒಂದು ರೆಪ್ರೆಸೆಂಟೇಷನ್ ಮಾಡಿದಾಗ ಹಿಂದಿನ ಅಸೆಂಬ್ಲಿಯಲ್ಲಿ ಒಂದು ವಾಗ್ದಾನ ಸಿಕ್ಕಿತು. ಬೀದರ್ ತಾಲ್ಲೂಕಿನ ಮರ್ಕುಂದ ಗ್ರಾಮದಲ್ಲಿ ಉರ್ದು ಸ್ಕೂಲ್ ಏನು ಸ್ಯಾಂಕ್ಷನ್ ಆಗಿದೆ ಅಲ್ಲಿಗೆ 3 ಜನ ಉರ್ದು ಟೀಚರ್ಸ್ ಇದುವರೆಗೂ ಬರಲಿಲ್ಲ. ಯಾವ ಯಾವ ಭಾಗದ ಸ್ಕೂಲಿನಲ್ಲಿ ಯಾವ ಯಾವ ಲಾಂಗ್ವೇಜ್ ಸ್ಟೂಡೆಂಟ್ಸ್ ಎಷ್ಟು ಇದ್ದಾರೆ ಎನ್ನುವ ಲೆಕ್ಕ ತರಿಸಿ ನೋಡಿ. ಯಾವ ಭಾಗದಲ್ಲಿ ಉರ್ದು ಸ್ಟೂಡೆಂಟ ಇರುತ್ತಾರೋ ಅಲ್ಲಿಗೆ ಉರ್ದು ಟೀಚರ್ಸ್ ಕೊಡಿ, ಮರಾಠಿ ಸ್ಟೂಡೆಂಟ್ಸ್ ಇದ್ದರೆ, ಮರಾಠಿ ಟೀಚರ್ಸ್ ಕೊಡಿ, ತೆಲುಗು ಸ್ಟೂಡೆಂಟ್ಸ್ ಜಾಸ್ತಿಯಾಗಿದ್ದರೆ ತೆಲುಗು ಟೀಚರ್ ಕೊಡಿ ಎಂದು ರೆಪ್ರೆಸೆಂಟೇಷನ್ ಮಾಡಿದ ಮೇಲೆ ಅಲ್ಲಿಗೆ 3 ಜನ ಉರ್ದು ಟೀಚರ್‌ಗಳನ್ನು ರೆಪ್ರೆ ಸೆಂಟ್ ಮಾಡಿದರು. ಆದರೆ ಅವರು 2 ವರ್ಷದಿಂದಲೂ ಬಂದು ಜಾಯಿನ್ ಆಗಲಿಲ್ಲ. ಅವರು ಮೆಡಿ ಕಲ್ ಗ್ರೌಂಡ್ಸ್ ಮೇಲೆ ಲಾಂಗ್‌ಲೀವ್ ಹಾಕಿದ್ದಾರೆ. ಹೀಗಾದರೆ ಅವರನ್ನು ರಿಟೈರ್ ಮಾಡಿ ಪೆನ್‌ಷನ್ ಕೊಟ್ಟು ಕಳುಹಿಸಿಬಿಡಿ.

ಇನ್ನೊಂದು ಸಣ್ಣ ಘಟನೆಯನ್ನು ಹೇಳಬಯಸುತ್ತೇನೆ. ಇದರಲ್ಲಿ ತಮ್ಮ ಕೈವಾಡ ಇದೆಯೋ ಇಲ್ಲವೋ ಗೊತ್ತಿಲ್ಲ. ಇಲ್ಲಿ ಒಂದು ಗೋಕಟ್ಟೆ ತಯಾರಾಗುವುದಕ್ಕೆ ಅದನ್ನು ಉದ್ಘಾಟನೆ ಮಾಡಲು ಫ್ರೆಂಡ್ಸ್ ಆಫ್ ದಿ ವರ್ಲ್ಡ್ ಸೊಸೈಟಿಯವರು ಬರುತ್ತಾರೆ, ಡೆಪ್ಯೂಟಿ ಕಮೀಷನರ್, ಶಿಕ್ಷಣ ಇಲಾಖೆಯ ದೊಡ್ಡ ದೊಡ್ಡ ಅಧಿಕಾರಿಗಳು, ಮಂತ್ರಿಗಳು ಬರುತ್ತಾರೆ ಎಂದು ಹೇಳುತ್ತಿ

(ಶ್ರೀ ವಿ. ಎನ್. ಪಾಟೀಲ್)

ದ್ದಾರೆ. ಅಲ್ಲಿನ ಜನಗಳಿಗೆ $2\frac{1}{2}$ ರೂಪಾಯಿ ಕೂಲಿ ಕೊಟ್ಟಿದ್ದರೆ ಈ ಕೆಲಸವನ್ನು ಈಗಾಗಲೇ ಪೂರೈಸುತ್ತಿದ್ದರು. ಆ ಊರಿನ ಜನರು ಎರಡು ತಿಂಗಳಿನಿಂದಲೂ ಕೆಲಸ ಇಲ್ಲದೇ ಸಾಯುತ್ತಿದ್ದಾರೆ. ಇದಕ್ಕೇನಾದರೂ ತಮ್ಮ ಅಮೃತ ಹಸ್ತದಿಂದ ಉದ್ಘಾಟನೆ ಮಾಡಲಿಕ್ಕೆ ಆಮಂತ್ರಣ ಏನಾದರೂ ಬಂದಿದೆಯೇ ? ಬಂದಿದ್ದರೆ ಆ ಕೆಲಸ ಬೇಗ ಪೂರೈಸುವಂತೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತೇನೆ.

ಇನ್ನು ವಿದ್ಯಾ ರಂಗದಲ್ಲಿ ಕೆಲವು ಫ್ಯಾಸಿಸ್ಟ್ ಸಂಸ್ಥೆಗಳು ಬೆಳೆಯುತ್ತಿವೆ, ಅಮೇರಿಕಾದ ಶಾಂತಿದಳದವರು ಹೆಚ್ಚುತ್ತಿದ್ದಾರೆ. ಆದುದರಿಂದ we are having a big programme. ಇಂತಹ ಶಕ್ತಿಗಳಿಂದ ವಿಯಟ್ನಾಂನಲ್ಲಿ ರಕ್ತಪಾತವಾದಂತೆ ರಕ್ತಪಾತವಾಗಲು ಇಲ್ಲಿ ಅವಕಾಶ ಕೊಡಬಾರದು. ಪ್ರೌಢಶಾಲೆಗಳಲ್ಲಿ ಆರ್.ಎಸ್.ಎಸ್. ಜನಸಂಘ ಈ ಚಟುವಟಿಕೆಗಳು ಹೆಚ್ಚುತ್ತಿವೆ. ಇಲ್ಲಿ ಅವರು ಸಿ.ಐ.ಎ. ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರು ಅಲ್ಲಿ ಎಫಿಜಿ ಬರ್ನ್ ಮಾಡುವುದು, ಚಳವಳಿ ಮಾಡುವುದು, ಕಪ್ಪು ಬಾವುಟ ಪ್ರದರ್ಶನ ಮಾಡುವುದು, ಈರೀತಿ ಮಾಡುತ್ತಿದ್ದಾರೆ. ಈರೀತಿ ಮಾಡುವುದಕ್ಕೆ ಅವಕಾಶ ಕೊಟ್ಟರೆ ನಾವೂ ಕೂಡ ಕಪ್ಪು ಬಾವುಟ ಹಿಡಿದುಕೊಂಡು ಅಧಿಕಾರಿಗಳ ಎಫಿಜಿ ಬರ್ನ್ ಮಾಡಬೇಕಾಗುತ್ತದೆ, ಚಳುವಳಿ ಮಾಡಬೇಕಾಗುತ್ತದೆ. ಅಮೇರಿಕಾದಲ್ಲಿ ಎಲ್ಲೋ ಒಂದು ಕಡೆ ರಕ್ತಪಾತ ಹರಿಯುತ್ತಿದ್ದರೆ ಅದನ್ನು ಇಲ್ಲಿ ಏತಕ್ಕೆ ಮಾಡಬೇಕು. ಅದುದರಿಂದ ಇಲ್ಲಿ ಆಗುತ್ತಿರುವ ವಿದೇಶೀ ಚಟುವಟಿಕೆಗಳ ಬಗ್ಗೆ ತಾವು ಗಮನ ಕೊಡಬೇಕು ಎಂದು ಹೇಳುತ್ತೇನೆ. ವಿದ್ಯಾಭ್ಯಾಸದ ಇಲಾಖೆಯಲ್ಲಿ ಪೀಸ್ ಕೋರ್, ವಾಲಂಟೀರ್ಸ್ ಎನ್ನುವ ಹೆಸರಿನ ಮೇಲೆ ಜಾತಿವಾದಿಗಳು ಪ್ರವೇಶ ಮಾಡುತ್ತಿದ್ದಾರೆ. ಸರ್ಕಾರದ ಹೈಸ್ಕೂಲು ಕಾಂಪೌಂಡುಗಳಲ್ಲಿ, ಶಾಲಾ ಮೈದಾನಗಳಲ್ಲಿ ಆರ್.ಎಸ್.ಎಸ್. ನವರು ತಮ್ಮ ಚಟುವಟಿಕೆಗಳನ್ನು ನಡೆಸಿ ಇಂಡಿಯನೈಸೇಷನ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಯಾವ ಶಾಲಾ ಮೈದಾನದಲ್ಲಿ ಆಗಲೀ ಇಂಥ ಫ್ಯಾಸಿಸ್ಟ್ ಫೋರ್ಸಸ್‌ಗೆ ಅವಕಾಶ ಕೊಡಬಾರದು. ವಿದ್ಯಾ ಸಂಸ್ಥೆಗಳು ಟೆಂಪಲ್ ಆಫ್ ಎಜುಕೇಷನ್ ಎನ್ನುವ ರೀತಿಯಲ್ಲಿ ನಡೆದುಕೊಂಡು ಬರಬೇಕು. ರಾಜ್ಯದ ಪ್ರತಿಯೊಬ್ಬ ನಾಗರಿಕನಿಗೂ, ಅದರಲ್ಲಿಯೂ ಮೈನಾರಿಟಿ ವರ್ಗಗಳಿಗೆ ರಕ್ಷಣೆ ಬೇಕು. ಆರ್.ಎಸ್.ಎಸ್., ಜನಸಂಘ ಇಂಥ ಸಂಸ್ಥೆಗಳು ಸರ್ಕಾರಿ ಶಾಲೆಗಳ ಮೈದಾನವನ್ನು ಉಪಯೋಗಿಸುವುದನ್ನು ತಡೆಗಟ್ಟಬೇಕು. ಇಂಥ ಫ್ಯಾಸಿಸ್ಟ್ ಫೋರ್ಸಸ್‌ಗೆ ಎಜುಕೇಷನ್ ಡಿಪಾರ್ಟ್‌ಮೆಂಟಿನಲ್ಲಿ ಕೈ ಹಾಕುವುದಕ್ಕೆ ಬಿಡುವುದಿಲ್ಲವೆನ್ನುವ ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕು. ವಿದ್ಯಾ ಇಲಾಖೆ ಪೂರ್ಣವಾಗಿ ವಿದ್ಯಾಭ್ಯಾಸಕ್ಕಾಗಿಯೇ ಕೆಲಸ ಮಾಡುವಂತಾಗಬೇಕು. ಮಾನ್ಯ ಮಂತ್ರಿಗಳಲ್ಲಿ ಸ್ವಲ್ಪ ಸ್ಟ್ರಿಕ್ಟ್‌ನೆಸ್ ಬಂದರೆ ಸರಿಹೋಗುತ್ತದೆ ಎಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಉಪಸಭಾಧ್ಯಕ್ಷರೇ, ವಿದ್ಯಾಭ್ಯಾಸದ ಬಗ್ಗೆ ಮಾತನಾಡುವುದೆಂದರೆ 'ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಸರ್ವಜ್ಞ' ಎನ್ನುವ ಹಾಗೆ. ಸ್ವಾತಂತ್ರ್ಯ ಬಂದ 25 ವರ್ಷಗಳಿಂದ, ಅದೂ ಹೋಗಲಿ, ಹೊಸ ಸರ್ಕಾರ ಬಂದ ಒಂದು ವರ್ಷದಿಂದ ಏನನ್ನು ಹೇಳಿದರು, ಏನನ್ನು ಹೇಳಿದ್ದಾರೆ, ಅದೆಲ್ಲ ಹೇಳಿದ್ದು ಹೇಳಿದ ಹಾಗೆಯೇ ಇದೆ; ನಡೆಯುವುದು ನಡೆಯುತ್ತಲೆ ಇದೆ. ಏನೂ ವ್ಯತ್ಯಾಸ, ಏನೂ ಸುಧಾರಣೆ ಕಾಣುತ್ತಿಲ್ಲ; ಯಾವ ತರಹ ಬದಲಾವಣೆಯೂ ಇಲ್ಲ. ಒಂದೇ ತರಹ ಪದ್ಧತಿ. ಹಿಂದಿನ ಒಂದು ಕಾಲದಲ್ಲಿ ಹೇಗೆ ನಡೆದುಕೊಂಡು ಬಂದಿದ್ದಾರೆ ಈಗಲೂ ಹಾಗೆಯೇ ನಡೆದುಕೊಂಡು ಹೋಗುತ್ತಿದ್ದಾರೆ. ಏನು ಇಲ್ಲ ವ್ಯತ್ಯಾಸವೆಂದರೆ ಮಂತ್ರಿಗಳು ವ್ಯತ್ಯಾಸವಾಗಿದ್ದಾರೆ ಅಷ್ಟೆ. ಆವಾಗ ಇದ್ದವರು ಒಬ್ಬರು, ಈವಾಗ ಇರುವವರು ಇನ್ನೊಬ್ಬರು. ವಿದ್ಯಾಭ್ಯಾಸ ಪದ್ಧತಿಯಲ್ಲಿ ಯಾವ ತರಹ ಬದಲಾವಣೆಯೂ ಆಗಿಲ್ಲ. ಇರುವಂಥ ಒಂದು ವಿಷಯವನ್ನು ನಾನು ಹೇಳುವುದಾದರೆ ಮಾನ್ಯ ಶ್ರೀ ಬದರೀನಾರಾಯಣ ಅವರು ಈ ಪೋರ್ಟ್‌ಫೋಲಿಯೋ ತೆಗೆದುಕೊಳ್ಳದೆ ಇನ್ನೂ ಸ್ವಲ್ಪ ಕಠೋರವಾಗಿರತಕ್ಕವರು, ಕಠಿಣವಾಗಿ ವರ್ತಿಸತಕ್ಕವರು, ಸಿಟ್ಟು ಇರತಕ್ಕವರು ಈ ಪೋರ್ಟ್‌ಫೋಲಿಯೋ ತೆಗೆದುಕೊಂಡಿದ್ದರೆ ಚೆನ್ನಾಗಿತ್ತು. ಅವರು ಒಂದು ದೃಷ್ಟಿಯಲ್ಲಿ, ಈ ಒಂದು ವರ್ಷದಲ್ಲಿ ಮಂತ್ರಿ ಪದವಿಯಲ್ಲಿ ತಮ್ಮ ಕೆಲಸವನ್ನು ನಿರ್ವಹಿಸುವುದರಲ್ಲಿ ವಿಫಲರಾಗಿದ್ದಾರೆ ಎಂದು ನಾನು ತುಂಬ ವೇದನೆಯಿಂದ ಹೇಳಬೇಕಾಗಿದೆ. ಒಂದೊಂದು ಸಾರಿ ನೋಡಿದರೆ ಯಾರಾದರೂ ಅಲ್ಲಿ ಆಫೀಸಿಗೆ ಹೋದರೆ ಯಾರು ಮಂತ್ರಿಗಳು ಎನ್ನುವುದೇ ಗೊತ್ತಾಗುವುದಿಲ್ಲ. ಅಂಥ ಒಂದು ದುರಂತವನ್ನು ಕೂಡ ನಾನು ನೋಡಿದ್ದೇನೆ. ಮಂತ್ರಿಗಳು ಸರ್ವಶ್ರೇಷ್ಠರೇ ಹೊರತು ಪ್ರಜಾಪ್ರಭುತ್ವದಲ್ಲಿ ಬೇರೆ

ಯಾದೂ ಅಲ್ಲ. ಯಾವುದೇ ವಿಷಯ ಅಥವಾ ಯಾವುದೇ ಪಾಲಿಸಿ ಏನೇ ಇರಲಿ, ಅಧಿಕಾರಿಗಳು ಕಾನೂನು ಪ್ರಕಾರ ಹಾಗಲ್ಲ ಹೀಗೆ ಮಾಡಬೇಕು, ಹೀಗಲ್ಲ ಹಾಗೆ ಮಾಡಬೇಕು ಎಂದು ಹೇಳಲೇ ಬೇಕು. ಆದರೆ ಅದರ ಮೇಲೆ ತಾವು ಆಣತಿ, ಆಜ್ಞೆ ಮಾಡತಕ್ಕ ಶಕ್ತಿಯನ್ನು ಸಂಪಾದನೆ ಮಾಡಿಕೊಳ್ಳಬೇಕು. ಅಂಥ ಶಕ್ತಿಯನ್ನು ಸಂಪಾದನೆ ಮಾಡಿಕೊಳ್ಳುವುದಕ್ಕೆ ನಮ್ಮ ಸಂಪೂರ್ಣ ಸಹಾಯವನ್ನು ನಾವು ಕೊಡುವುದಕ್ಕೆ ಸಿದ್ಧರಾಗಿದ್ದೇವೆ. ಇದೇ ರೀತಿ ತಾವು ಅಧಿಕಾರಿಗಳು ಹೇಳುವುದನ್ನು ಕೇಳಿಕೊಂಡು ನಡೆಯುವುದಾದರೆ ನಾವು ವಿಷಾದವನ್ನು ವ್ಯಕ್ತಪಡಿಸಬೇಕಾಗುತ್ತದೆ.

ವಿದ್ಯಾಭ್ಯಾಸದ ಕ್ಷೇತ್ರ ಬಹಳ ದೊಡ್ಡ ಕ್ಷೇತ್ರ. ಇಡೀ ರಾಜ್ಯದ ಭವಿಷ್ಯವನ್ನು ರೂಪಿಸತಕ್ಕ ಕ್ಷೇತ್ರ. ಈ ಹೊತ್ತು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಏನಾಗಿದೆ, ಯಾವ ತರಹ ಬದಲಾವಣೆಯೂ ಇಲ್ಲ, ಯಾವ ತರಹ ಸುಧಾರಣೆಯೂ ಇಲ್ಲ. ಸ್ವಾತಂತ್ರ್ಯಾನಂತರ ಈ ಒಂದು ಕ್ಷೇತ್ರ ಗೊಂದಲಪುರವಾಗಿದೆ. ಶ್ರೀ ಗೋಪಾಲಕೃಷ್ಣ ಅಡಿಗ ಅವರು ಬರೆದ ಗೊಂದಲಪುರ ಕವಿತೆಯನ್ನು ಓದಿದರೆ ಅರ್ಥವಾಗುತ್ತದೆ. ಸಮಾಜವಾದದಲ್ಲಿ ಸಮಾಜ ಹಾಗೂ ವಿದ್ಯಾಭ್ಯಾಸ ಎರಡನ್ನೂ ಕ್ರೋಢೀಕರಿಸತಕ್ಕ, ಸಮಗ್ರೀಕರಣ ಮಾಡತಕ್ಕ ಶಕ್ತಿ ಇಲ್ಲವಾದರೆ ಸಮಾಜ ಒಂದು ಕಡೆ, ವಿದ್ಯಾಭ್ಯಾಸ ಒಂದು ಕಡೆ ಆಗಿ ಬ್ರಿಟಿಷರ ಕಾಲದ ವಿದಾಭ್ಯಾಸ ಪದ್ಧತಿಯಾಗುತ್ತದೆ. ಸ್ವಾತಂತ್ರ್ಯ ಬಂದು ಎಷ್ಟು ವರ್ಷವಾಯಿತು? ನಮ್ಮ ಹಿಂದಿನ ಜಾಯಮಾನಕ್ಕೆ ತಕ್ಕಂತೆ, ನಮ್ಮ ದೇಶದ ವಾತಾವರಣಕ್ಕೆ ತಕ್ಕಂತೆ ವಿದ್ಯಾಭ್ಯಾಸ ಬದಲಾವಣೆಯಾಗಿಲ್ಲ, ಟೈ, ಕಾಲರ್, ಹ್ಯಾಟ್, ಸೆಲ್ಯೂಟ್ ಮಾಡುವುದು ಬದಲಾಯಿಸುತ್ತಿಲ್ಲ. ಉಪಾಧ್ಯಾಯರು ಬದಲಾಗಿದ್ದಾರೆ. ಆದರೆ ಹಳೇ ಕುರ್ಚಿ, ಹಳೇ ಮೇಜು, ಹಳೇ ವಿದ್ಯಾಭ್ಯಾಸ ಪದ್ಧತಿ, ಹಳೇ ಪಠ್ಯ ಪುಸ್ತಕಗಳು ಇವುಗಳಲ್ಲಿ ಮೂಲಭೂತವಾದ ಬದಲಾವಣೆಯಾಗಿಲ್ಲ. ವಿದ್ಯಾಭ್ಯಾಸ ಮಾಡಿದಂಥ ವಿದ್ಯಾವಂತ ಜನ ಮತ್ತು ಸಾಮಾನ್ಯ ಜನ ಇವರಿಬ್ಬರ ಮಧ್ಯೆ ದೊಡ್ಡ ಕಂದಕವಿದೆ. ಇವರಿಬ್ಬರನ್ನು ಕೂಡಿಸತಕ್ಕ ರೀತಿಯಲ್ಲಿ ವಿದ್ಯಾಭ್ಯಾಸ ಪದ್ಧತಿ ಬದಲಾವಣೆಯಾಗಬೇಕು ಎನ್ನುವುದು ನಮ್ಮ ಉದ್ದೇಶ.

ವಿದ್ಯಾಭ್ಯಾಸದ ಸಾಧನೆ ಬಗ್ಗೆ ನಾನು ಹೆಚ್ಚು ಹೇಳಲಿಕ್ಕೆ ಹೋಗುವುದಿಲ್ಲ. ಮುಖ್ಯವಾಗಿ ಮಾನಸಿಕವಾಗಿ ವಿದ್ಯಾವಂತನಾದ ನಂತರ ನಾವು ಸ್ವತಂತ್ರರಿದ್ದೇವೆ ಎನ್ನತಕ್ಕ ಮನೋಭಾವನೆ ನಮ್ಮ ವಿದ್ಯಾವಂತ ಜನಗಳಲ್ಲಿ ಬರುವುದಿಲ್ಲ. ಅದರ ಬದಲು ವಿದ್ಯಾಭ್ಯಾಸ ಮುಗಿದು ಹೊರಗೆ ಬಂದ ಕೂಡಲೇ ಅರ್ಜಿ ಹಾಕುವ ಮನೋಭಾವ ಬಂದಿದೆ. ಆದುದರಿಂದ ಗುಲಾಮಗಿರಿಯ ಮನೋಭಾವವನ್ನು ಬೆಳೆಸಿಕೊಂಡು ಹೋಗತಕ್ಕ ಪದ್ಧತಿಯಲ್ಲಿ ಮೂಲಭೂತವಾದ ಬದಲಾವಣೆ ಮಾಡದೆ ಹೋದರೆ ಹಳೇ ಮೌಲ್ಯಗಳಿಗೆ ಹೊಸ ರೂಪದಲ್ಲಿ ಬೆಲೆ ಕೊಟ್ಟು ರೂಪಿಸತಕ್ಕ ಈ ಪದ್ಧತಿ ನಾಶವಾಗದೆ ಹೋದರೆ ಅಲ್ಲಿ ಯಾವ ತರಹ ಬದಲಾವಣೆಯನ್ನೂ ಕಾಣುವುದಕ್ಕೆ ಸಾಧ್ಯವಿಲ್ಲ. ಇಂಥ ಬದಲಾವಣೆಗೆ ತಮ್ಮ ಕಾಲದಲ್ಲಿ ಅಸ್ತಿಭಾರ ಹಾಕಬೇಕೆಂದು ನಾನು ಕೇಳುತ್ತೇನೆ. ಮುಖ್ಯವಾಗಿ ವಿಚಾರಶಕ್ತಿ, ವಿಚಾರ ಸ್ವಾತಂತ್ರ್ಯ ಬೆಳೆಸತಕ್ಕ ವಿದ್ಯಾಭ್ಯಾಸವನ್ನು ಕೊಡಬೇಕು, ಅಂಥ ವಿದ್ಯಾಭ್ಯಾಸ ನಮಗೆ ಬರಬೇಕು ಎಂದು ನಾನು ಪ್ರಾರ್ಥಿಸುತ್ತೇನೆ.

ಈ ಹೊತ್ತಿನ ವಿದ್ಯಾಭ್ಯಾಸ ಪದ್ಧತಿಯಿಂದ ನಮಗೆ ಆಗಿರತಕ್ಕ ಒಂದು ಪ್ರಯೋಜನವೆಂದರೆ ನಿರುದ್ಯೋಗ ಸಮಸ್ಯೆಯನ್ನು ಅಧಿಕ ಮಾಡಿರುವುದು.

4-30 P.M.

ಇಂದು ವಿದ್ಯಾವಂತರಾಗಿರುವವರಲ್ಲೇ ನಿರುದ್ಯೋಗ ಹೆಚ್ಚಾಗುತ್ತಿದೆ. ಕಾರಣವೇನೆಂದರೆ ಎಸ್.ಎಸ್.ಎಲ್ ಸಿ. ಪಾಸು ಮಾಡಿದ ಕೂಡಲೇ ಹಳ್ಳಿಗಾಡಿನಿಂದ ಬಂದ ಜನರು ಮತ್ತೆ ಅವರ ಹಳ್ಳಿಗೆ ಹೋಗಿ ಗುದ್ದಲಿ ಹಿಡಿದು ಅವರ ಭೂಮಿಯ ಮೇಲೆ ಉಳುಮೆ ಮಾಡಲು ತಯಾರಿಲ್ಲ. ಪಾಸಾದ ಕೂಡಲೇ ಕೆಲಸಕ್ಕೆ ಹೋಗಬೇಕು ಎನ್ನುವ ಒಂದು ಮನೋಭಾವನೆ ಇವರಲ್ಲಿ ಬೆಳೆಯುತ್ತಾ ಬರುತ್ತಿದೆ. ಹೀಗೆ ಅವಿದ್ಯಾವಂತರಲ್ಲಿ ಒಂದು ರೀತಿಯಾಗಿ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್ ಬೆಳೆಯುತ್ತಿದೆ, ವಿದ್ಯಾವಂತರಲ್ಲಿ ಒಂದು ರೀತಿಯಾದ ಸುಪೀರಿಯಾರಿಟಿ ಕಾಂಪ್ಲೆಕ್ಸ್ ಬೆಳೆಯುತ್ತಾ ಬರುತ್ತಿದೆ. ಹೀಗಾಗಿ ಇಂದು ವಿದ್ಯಾರ್ಥಿಗಳ ಗುರಿ ಒಂದು ರೀತಿಯಾದ ಗೊಂದಲದಲ್ಲಿದೆ, ಯಾವುದೇ ಒಂದು ರೀತಿಯಾದ ದೊಡ್ಡ ಆದರ್ಶವನ್ನು ಸಾಧನೆ ಮಾಡಲಾಗುತ್ತಿಲ್ಲ. ಎಲ್ಲ ಕ್ಷೇತ್ರಗಳಲ್ಲೂ ಒಂದು ರೀತಿಯಾದ ಗೊಂದಲಗಳಾಗುತ್ತಿವೆ, ಇಂತಹ ಗೊಂದಲಗಳನ್ನುಂಟುಮಾಡುವ ಮನೋಭಾವ ಇಂದು ಬೆಳೆಯುತ್ತಿದೆ. ಇದರ ಪರಿಣಾಮವಾಗಿ ಇಂದು ದೇಶದಲ್ಲಿ ಅಶಿಸ್ತು ಬೆಳೆಯುತ್ತಿದೆ ಮತ್ತು ವಿದ್ಯಾ ಕ್ಷೇತ್ರದಲ್ಲೂ ಹೋರಾಟಗಳು ಆಗುತ್ತಿವೆ. ಇಂದು ಮೈಸೂರು ಸರಕಾರದ ವಿದ್ಯಾ ಇಲಾಖೆಯಲ್ಲಿ ಶಾಲೆ

(ಶ್ರೀ ಕೋಣಂದೂರು ಲಿಂಗಪ್ಪ)

ಗಳಿರುವಂತೆ ಖಾಸಗಿ ಕ್ಷೇತ್ರದಲ್ಲೂ ಶಾಲೆಗಳಿವೆ. ಖಾಸಗಿ ಶಾಲೆಗಳಲ್ಲಿ ಯಾವ ರೀತಿಯಾದ ಅವ್ಯವಹಾರಗಳಾಗುತ್ತಿವೆ ಎನ್ನುವುದರ ಬಗ್ಗೆ ಇಲ್ಲಿ ಅನೇಕ ವಿಚಾರಗಳು ಬಂದಿವೆ ಮತ್ತು ಇವೆಲ್ಲ ಒಂದು ರೀತಿಯಲ್ಲಿ ಕಲಸಮೇಲೋಗರವಾಗಿದೆ, ಇದನ್ನು ಸರಿಯಾಗಿ ವಿಚಾರ ಮಾಡಬೇಕಾಗಿದೆ. ವಿದ್ಯಾಭ್ಯಾಸ ಎಲ್ಲಿಯವರೆಗೆ ಇರಬೇಕು ಎನ್ನುವುದರ ಬಗ್ಗೆ ಹಿಂದೆ ಒಂದು ಸಾರಿ ಮಾನ್ಯ ಮುಖ್ಯಮಂತ್ರಿಗಳು ಒಂದು ವಿಚಾರ ಹೇಳಿದರು. ಇನ್ನು ಮುಂದೆ ಫಸ್ಟ್ ಗ್ರೇಡ್ ಕಾಲೇಜುಗಳನ್ನು ಎಲ್ಲಿ ಇಲ್ಲವೋ ಅಲ್ಲಿಗೆ ಕೊಡಬೇಕಾಗುತ್ತದೆ ಮತ್ತು ಜೂನಿಯರು ಕಾಲೇಜುಗಳನ್ನು ಹೆಚ್ಚು ಮಾಡಬೇಕಾಗಿ ಬರುತ್ತದೆ ಎಂದು ಹೇಳಿದರು. ಇದನ್ನು ಯಾವ ದೃಷ್ಟಿಕೋನದಿಂದ ಹೇಳಿದರು ಎನ್ನುವುದನ್ನು ನಾವೆಲ್ಲರೂ ಇಲ್ಲಿ ವಿಚಾರ ಮಾಡಬೇಕು. ಅಧ್ಯಾಪಕರ ಬಗ್ಗೆ ಹೆಚ್ಚು ಹೇಳಲಿಲ್ಲ, ಇದರಲ್ಲಿ ಮೂರು ಮುಖ್ಯ ವಿಚಾರಗಳಿವೆ ಎಂದರು. ಅದು ಅಪಾಯಿಂಟುಮೆಂಟುಗಳು, ಟ್ರಾನ್ಸ್‌ಫರುಗಳು ಹಾಗೂ ಪ್ರಮೋಷನ್‌ಗಳು ಇವು ನಮ್ಮ ವಿದ್ಯಾಭ್ಯಾಸದ ಇಲಾಖೆಯಲ್ಲಿರುವ ಮೂರು ಮುಖ್ಯವಾದ ಅಂಶಗಳು. ಇಂದು ವಿದ್ಯಾಭ್ಯಾಸದ ಪದ್ಧತಿಯಲ್ಲಿ ಮೂಲಭೂತವಾದ ಬದಲಾವಣೆ ಮಾಡುವಂತಹ ಅಧಿಕಾರ ವರ್ಗ ಇರಬೇಕು ಮತ್ತು ಅವಕ್ಕೆ ತಕ್ಕಂತೆ ಸರಕಾರ ಕೆಲಸಮಾಡಬೇಕು. ಇಂತಹ ಮೂಲಭೂತವಾದ ಬದಲಾವಣೆಯನ್ನು ತೀವ್ರವಾಗಿ ಮಾಡಲು ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ ಪ್ರೈವೇಟು ಶಾಲೆಗಳು ಹಾಗೂ ಕಾಲೇಜುಗಳ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಕರಿಯಪ್ಪನವರು ಹಾಗೂ ಶ್ರೀ ಪಾಟೀಲರವರು ಹೇಳಿರುವುದರಿಂದ ನಾನು ಮತ್ತೆ ಅದರ ಬಗ್ಗೆ ಹೆಚ್ಚು ಪ್ರಸ್ತಾಪಮಾಡಲು ಹೋಗುವುದಿಲ್ಲ. ಆದರೆ ಒಂದೇ ಒಂದು ಶಬ್ದ ಮಾತ್ರ ಇದರ ಬಗ್ಗೆ ಹೇಳಬೇಕಾಗಿದೆ. ಪ್ರೈವೇಟು ಕಾಲೇಜುಗಳು ಹಾಗೂ ಶಾಲೆಗಳ ಬಗ್ಗೆ ಸರಕಾರ ಎಷ್ಟುಮಟ್ಟಿಗೆ ಹತೋಟಿ ಇಟ್ಟುಕೊಳ್ಳಬೇಕೋ ಅಷ್ಟುಮಟ್ಟಿನ ಹತೋಟಿಯನ್ನು ಇನ್ನೂ ಇಟ್ಟುಕೊಳ್ಳಲು ಆಗಲಿಲ್ಲ. ಉದಾಹರಣೆಯಾಗಿ ಇಲ್ಲಿ ಹೇಳಬೇಕಾದರೆ ಸಿರಿಗೆರೆಯಲ್ಲಿ ನಡೆಸುವ ಖಾಸಗಿ ಸಂಸ್ಥೆಯಲ್ಲಿ 61 ಹೈಸ್ಕೂಲುಗಳಿವೆ, ಎಂಟು ಕಾಲೇಜುಗಳಿವೆ. ಇದರಲ್ಲಿ ಐದು ಫಸ್ಟ್ ಗ್ರೇಡ್ ಕಾಲೇಜುಗಳಿವೆ ಇವುಗಳಲ್ಲಿ ಕೆಲಸಮಾಡುವ ಕೆಲವು ಅಧ್ಯಾಪಕರು ನನ್ನ ಮಿತ್ರರೂ ಆಗಿದ್ದಾರೆ. ಅವರೇ ನನಗೆ ತಿಳಿಸಿರುವಂತೆ ನೂರರಲ್ಲಿ ಎಂಬತ್ತು ಜನ ಅಧ್ಯಾಪಕರುಗಳಿಗೆ ಸರಿಯಾಗಿ ಸಂಬಳಗಳನ್ನು ಕೊಡುತ್ತಿಲ್ಲ ಮತ್ತು ಸಿಗುತ್ತಿಲ್ಲ ಎಂದು ನೇರವಾಗಿ ನನಗೆ ಹೇಳಿದ್ದಾರೆ.

ಶ್ರೀ ಎಂ. ಮಲ್ಲಪ್ಪ.—ನಮಗೆ ಅಂತಹ ದೂರುಗಳು ಯಾವುದೂ ಬಂದಿಲ್ಲ. ತಮಗೆ ಹೇಗೆ ಬಂತು ? ಅದನ್ನು ನಮ್ಮ ಕಡೆಗೆ ಕಳುಹಿಸಿದರೆ ಸರಿಮಾಡಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ನನಗೆ ಖಾಸಗಿ ಶಾಲೆಗಳು ಯಾವ ರೀತಿ ನಡೆಯುತ್ತಿವೆ ಮತ್ತು ಇದರಲ್ಲಿ ದುರ್ವ್ಯವಹಾರಗಳಾಗುತ್ತಿರುವುದನ್ನು ಸರಕಾರದ ಗಮನಕ್ಕೆ ತರಲು ಇವನ್ನು ಇಲ್ಲಿ ಹೇಳುತ್ತಿದ್ದೇನೆ. ಒಂದು ಖಾಸಗಿ ಶಾಲೆ ಮೈಸೂರಿನಲ್ಲಿ ರಾಯಲ್ ಇಂಗ್ಲಿಷ್ ಸ್ಕೂಲು ಎಂದು ಇದರಲ್ಲಿ ಗಂಡ ಹೆಂಡತಿ ಅವರ ಮಕ್ಕಳು ಸೇರಿಕೊಂಡುಬಿಟ್ಟು ಬಿಸಿನೆಸ್ ರೀತಿಯಲ್ಲಿ ಶಾಲೆಗಳನ್ನು ನಡೆಸುತ್ತಿದ್ದಾರೆ ಮತ್ತು ಇವರು ಈಗಾಗಲೇ ಬೆಂಗಳೂರಿಗೂ ಬಂದು ಒಂದು ಶಾಲೆ ನಡೆಸುತ್ತಿದ್ದಾರೆ ಎಂದು ಗೊತ್ತಾಗಿದೆ. ಇವರುಗಳು ಶಾಲಾ ಅಧ್ಯಾಪಕರುಗಳಿಗೆ ಎಷ್ಟು ಸಂಬಳ ಕೊಡುತ್ತಿದ್ದಾರೆ ಎನ್ನುವುದನ್ನು ಯಾರಾದರೂ ಪರಿಶೀಲಿಸಿದ್ದಾರೆಯೇ ? ವಿದ್ಯಾರ್ಥಿಗಳಿಗೆ ಹೇಗೆ ಪಾಠ ಕಲಿಸುತ್ತಿದ್ದಾರೆ ಮತ್ತು ಈ ಸಂಸ್ಥೆ ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನುವುದನ್ನು ಯಾರೂ ಇದುವರೆಗೆ ವಿಚಾರ ಮಾಡಿದಂತೆ ಕಾಣುತ್ತಿಲ್ಲ. ಇಡೀ ರಾಜ್ಯದಲ್ಲೇ ಪ್ರೈವೇಟ್ ಸ್ಕೂಲುಗಳು ಇವೆ ಮತ್ತು ಎಲ್ಲ ಕಡೆಯಲ್ಲೂ ನಡೆಯುತ್ತಿವೆ, ಇದನ್ನು ಸರಕಾರ ಸರಿಯಾಗಿ ತನಿಖೆ ಮಾಡುತ್ತಿಲ್ಲ. ನಿಮ್ಮ ಮಂತ್ರಿ ಮಂಡಲದಲ್ಲೇ ಇರುವ ಮಾನ್ಯ ಆರ್ಥಿಕ ಮಂತ್ರಿಗಳಾಗಿರುವ ಶ್ರೀ ಘೋರ್ಪಡೆಯವರ ಊರಾದ ಸಂಡೂರಿನಲಿ ಖಾಸಗಿ ಶಾಲೆಗಳು ಹೇಗೆ ನಡೆಯುತ್ತಿವೆ, ಎಷ್ಟು ಫೀಜುಗಳನ್ನು ವಸೂಲು ಮಾಡುತ್ತಿದ್ದಾರೆ ! ಮತ್ತು ಇಲ್ಲಿ ಯಾವ ರೀತಿ ಅಧ್ಯಾಪಕರುಗಳಗೆ ಸಂಬಳ ಕೊಡುತ್ತಿದ್ದಾರೆ ಇದನ್ನು ವಿಚಾರ ಮಾಡಿದ್ದಾರೆಯೆ ? ಸಮಾಜವಾದ ತರುತ್ತೇವೆ ಎಂದು ಹೇಳುತ್ತ ಇದೆಂತಹ ಸಮಾಜವಾದವನ್ನು ಇಲ್ಲಿ ತರುತ್ತಿದ್ದೀರಿ ? ತಿಂಗಳಿಗೆ 150 ರಿಂದ 250 ರೂಪಾಯಿಗಳ ಸಂಬಳ ಎಂದು ಹೇಳಿ, ಇಲ್ಲಿ ಅಧ್ಯಾಪಕರಿಗೆ ಕೊಡುವ ಸಂಬಳ ಯಾವ ರೀತಿ ಇದೆ ಎನ್ನುವುದನ್ನೂ ನೋಡಿದ್ದಾರೆಯೇ ! ಮಂತ್ರಿಗಳು ಬಾಯಲ್ಲಿ ಸಮಾಜವಾದ ತರುತ್ತೇವೆಂದು ಹೇಳುತ್ತ ಹೋದರೆ ಇಲ್ಲಿ ಸಮಾಜವಾದ ಬರುತ್ತದೆಯೇ ? ಹೇಗೆ ? ಸಮಾಜವಾದಕ್ಕೆ ತಕ್ಕಂತೆ ಏನು ಬದಲಾವಣೆ ಮಾಡಿದ್ದೀರಿ ?

ಶ್ರೀ ಎಚ್. ಎಸ್. ಶಿದ್ದಪ್ಪ.—ಸಿರಿಗೆರೆ ಬಗ್ಗೆ ಸದಸ್ಯರು ಹೇಳಿದರು. ಇದರ ವಿವರಗಳನ್ನು ನನ್ನ ಕಡೆಗೆ ಕಳುಹಿದರೆ ವಿಚಾರಮಾಡಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರುಗಳ ಸಂಬಂಧದ ವಿಚಾರವಾಗಿ ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಎಲ್ಲಕ್ಕಿಂತ ಮುಖ್ಯವಾದುದು ಇಡೀ ರಾಜ್ಯದಲ್ಲಿರುವ ಅಧ್ಯಾಪಕರನ್ನು ಒಂದು ರೀತಿಯಾದ ಕೀಳು ಭಾವನೆಯಿಂದ, ಕೆಟ್ಟ ರೀತಿಯಿಂದ ನೋಡುತ್ತಿದ್ದಾರೆ. ಯಾವ ರೀತಿಯಿಂದ ನೋಡುತ್ತಿದ್ದಾರೆ ಎನ್ನುವುದರ ಬಗ್ಗೆ ನಾನು ಕಳೆದ ಅಧಿವೇಶನದಲ್ಲೇ ಹೇಳಿದ್ದೇನೆ. ಪ್ರತಿಯೊಂದಕ್ಕೂ ಅಧ್ಯಾಪಕರುಗಳೇ ಶಾಲೆ ಕೆಲಸದ ಜೊತೆಗೆ ಮಾಡಬೇಕಾಗಿದೆ. ಸೆನ್ಸಸ್ ಕೆಲಸಗಳು ಅವರೇ ಮಾಡಬೇಕು. ಇತರ ಇಲಾಖೆಯ ಕೆಲಸಗಳನ್ನು ಅವರೇ ಮಾಡಬೇಕು. ರೆವಿನ್ಯೂ ಇಲಾಖೆ ಕೆಲಸ ಅವರು ಮಾಡಬೇಕು ಹೀಗೆ ಬೇರೆ ಬೇರೆ ಇಲಾಖೆಯ ಕೆಲಸಗಳನ್ನೆಲ್ಲಾ ಅಧ್ಯಾಕರುಗಳೇ ಮಾಡಬೇಕೆಂದು ಮಾಡಿದರೆ ಇವರು ಹುಡುಗರಿಗೆ ಪಾಠ ಹೇಳಿ ಅವರನ್ನು ಮುಂದಕ್ಕೆ ತರುವುದಾದರೂ ಹೇಗೆ ? ಆದುದರಿಂದ ನಾನು ಸರಕಾರದಲ್ಲಿ ವಿನಯವಾಗಿ ಹೇಳುವುದು ಅಧ್ಯಾಪಕರುಗಳನ್ನು ಅವರ ಪಾಡಿಗೆ ಬಿಟ್ಟು ಅವರು ವಿದ್ಯಾರ್ಥಿಳಿಗೆ ಪಾಠ ಹೇಳಿಕೊಡುವಷ್ಟರ ಮಟ್ಟಿಗೆ ಅವಕಾಶಕೊಟ್ಟು ಇತರ ಯಾವ ಕೆಲಸಗಳಿಗೂ ಅವರನ್ನು ನೇಮಿಸದೆ ಅವರ ಮೇಲೆ ಈಗ ಹಾಕುತ್ತಿರುವ ಭಾರದ ಹೊರೆಯನ್ನು ತೆಗೆಯಬೇಕು ಎಂದು ಇಲ್ಲಿ ಕೇಳಿಕೊಳ್ಳುತ್ತೇನೆ. ಇತರ ಕೆಲಸಗಳಿಗೆ ಬೇರ ಇಲಾಖೆಯವರ ಕಡೆಯಿಂದಲೇ ಕೆಲಸಗಳನ್ನು ಮಾಡಿಸಬಹುದು. ಶ್ರೀ ಕರಿಯಪ್ಪನವರು ಈಗಾಗಲೇ ಇಲ್ಲಿ ಅಧ್ಯಾಪಕರ ಸ್ಟ್ರೈಕ್ ಬಗ್ಗೆ ಹಾಗೂ ವಿದ್ಯಾರ್ಥಿಗಳ ಸ್ಟ್ರೈಕ್ ಬಗ್ಗೆ ಹೇಳಿದರು. ನಾನು ಇದರ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಈಚೆಗೆ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲ ಅಲ್ಲಿರುವ ನಾನ್‌ಟೀಚಿಂಗ್ ಸ್ಟಾಫ್‌ನಿಂದ ಕೊಡತಕ್ಕ ಕಿರುಕುಳಗಳನ್ನು ತಾಳಲಾರದೆ ಅಲ್ಲಿನ ಅಧ್ಯಾಪಕ ವರ್ಗದವರು ಮುಷ್ಕರ ಹೂಡಿದ್ದರು. ಅಲ್ಲಿರುವ ಒಬ್ಬರು ಅಧ್ಯಾಪಕರನ್ನು ಹೊಡೆದು ಅಧಿಕಾರಿಗಳ ಕಾಲಿಗೆ ಬೀಳುವಂತೆ ಮಾಡಿದರು. ಇದನ್ನು ತಾಳಲಾರದೆ ಇಲ್ಲಿ ಉಪವಾಸ ಸತ್ಯಾಗ್ರಹ ಎಂದು ಮಾಡಬೇಕಾಗಿ ಬಂತು. ಆಡಳಿತದ ಅಧಿಕಾರಿಗಳು ತಪ್ಪು ಮಾಡುತ್ತಿರುವಾಗ ಅದನ್ನು ತಪ್ಪು, ಅನ್ಯಾಯವಾಗಿದೆ ಎಂದು ಚಳುವಳಿ ಹೂಡಿ ಪ್ರತಿಭಟನೆ ಮಾಡಬಾರದೇನು ? ಹಿಂದೆ ಯಾವುದೋ ಒಂದು ಓಬಿರಾಯನ ಕಾಲದ ಪದ್ಧತಿಇತ್ತು ಇಂದೂ ಅವರು ಈ ರೀತಿ ಮಾಡುತ್ತಿದ್ದರೆ ಅದನ್ನು ನ್ಯಾಯವಾಗಿ ಪ್ರತಿಭಟನೆ ಮಾಡಿ ಚಳುವಳಿ ಮಾಡಲೇ ಬೇಕಾಗುತ್ತದೆ. ಅಹಿಂಸಾತ್ಮಕವಾದ ಚಳುವಳಿಯು ದಾರಿಯನ್ನು ಮಹಾತ್ಮಾ ಗಾಂಧಿಯವರು ಬ್ರಿಟಿಷರ ಕಾಲದಿಂದಲೂ ಕಲ್ಪಿಸುತ್ತಾ ಬಂದಿದ್ದಾರೆ. ವಿದ್ಯಾರ್ಥಿಗಳಿಗಾಗಲಿ ಅಧ್ಯಾಪಕರುಗಳಿಗಾಗಲಿ ಅನ್ಯಾಯವಾಗಿರುವುದು ಕಂಡು ಬಂದಾಗ ಅವನ್ನು ನ್ಯಾಯವಾದ ರೀತಿಯಲ್ಲಿ ಪ್ರತಿಭಟನೆ ಮಾಡಲೇ ಬೇಕಾಗುತ್ತದೆ. ಅಹಿಂಸಾ ರೂಪದಲ್ಲಿ ಮಾಡುವ ಚಳುವಳಿಗೆ ಅವಕಾಶ ಕೊಡದೇ ಹೋದರೆ ಮುಂದೆ ಇದು ಹಿಂಸಾರೂಪಕ್ಕೆ ಬಂದು ಈ ಸಮಸ್ಯೆಯನ್ನು ಪರಿಹಾರ ಮಾಡುವುದೇ ಕಷ್ಟವಾಗಿ ಹೋಗುತ್ತದೆ. ನ್ಯಾಯವಾಗಿ ಇರುವ ಕಡೆಗಳಲ್ಲಿ ಚಳುವಳಿಗೆ ಪ್ರೋತ್ಸಾಹ ಕೊಟ್ಟು ಅದಕ್ಕೆ ಮಾನ್ಯತೆ ಕೊಡಬೇಕು ಎಂದು ಇಲ್ಲಿ ಹೇಳಲು ಅಪೇಕ್ಷೆ ಪಡುತ್ತೇನೆ.

ಇನ್ನು ನಿಮ್ಮ ಇಲಾಖೆಯಲ್ಲಿರುವ ಅಸಿಸ್ಟೆಂಟ್ ಎಜುಕೇಷನಲ್ ಆಫೀಸುಗಳಲ್ಲಿ ನಡೆಯುವ ವೈಖರಿ ಹೇಳಬೇಕಾಗಿದೆ. ಅಸಿಸ್ಟೆಂಟ್ ಎಜುಕೇಷನಲ್ ಆಫೀಸರಿಗೆ ಸಾಕಷ್ಟು ಗುಮಾಸ್ತರುಗಳನ್ನು ನೇಮಕ ಮಾಡಿಲ್ಲ. ಇದಕ್ಕಾಗಿ ಇವರುಗಳು ಬಿಲ್ ಇತ್ಯಾದಿ ಕೆಲಸಗಳನ್ನು ಮಾಡಲು ಒಬ್ಬರು ಮೇಷ್ಟ್ರನ್ನು ಅವರ ಆಫೀಸಿನಲ್ಲಿಟ್ಟುಕೊಂಡು ಕೆಲಸಮಾಡುತ್ತಿರುವುದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಅದೇ ವ್ಯವಸ್ಥೆ ಎಲ್ಲ ಕಡೆ ಇದೆ. ಇವೊತ್ತಿನ ದಿವಸ ಡಿ.ಪಿ.ಐ. ಕಛೇರಿಯಲ್ಲಿ ಏನು ನಡೆಯುತ್ತಿದೆ ಎಂದು ಹೇಳುವುದಾದರೆ, ಅಲ್ಲಿ ಕೆಲಸ ಮಾಡುತ್ತಿರುವ ನೌಕರರು ಅವರು ಕೆಲಸಕ್ಕೆ ಸೇರಿದಾಗಿನಿಂದ ಅಲ್ಲಿಯೇ ಇದ್ದಾರೆ. ಇಂದು ನಮ್ಮ ರಾಜ್ಯದ ಎಲ್ಲ ಕಡೆ ಈ ಇಲಾಖೆಯ ಬಗ್ಗೆ ಅನ್ಯಾಯವಾಗುತ್ತಿದ್ದರೆ ಅದಕ್ಕೆ ಇವರೇ ಕಾರಣಕರ್ತರು ಎಂದು ನಾನು ಹೇಳುತ್ತೇನೆ. ಇವರ ಹೆಸರಿನ ಒಂದು ಪಟ್ಟಿ ನನ್ನ ಹತ್ತಿರ ಇದೆ. ಅದನ್ನು ತಮ್ಮ ಕಡೆಗೆ ಕಳಿಸಿಕೊಡುತ್ತೇನೆ. ತಾವು ನೋಡಬಹುದು. 15-20 ವರ್ಷಗಳಿಂದ ಒಂದೇ ಕಡೆ ಇದ್ದುಕೊಂಡು ಹೆಗ್ಗಣ ಬೆಳೆದ ಹಾಗೆ ಬೆಳೆದಿದ್ದಾರೆ. ಇವರ ಹತ್ತಿರ ಬಂದ ಫೈಲ್‌ಗಳನ್ನು ಮುಂದೆ ಹೋಗುವುದಕ್ಕೆ ಬಿಡುವುದಿಲ್ಲ. ಇದಕ್ಕೆ ಒಂದು ಉದಾಹರಣೆ ಕೊಡಬೇಕೆಂದರೆ, ಮಾನ್ಯ ಮಂತ್ರಿಗಳು ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದ ನಂತರ ನನ್ನ ಗುರುಗಳ ಪೆನ್‌ಷನ್‌ಗೆ ಸಂಬಂಧಪಟ್ಟ ರಿಕಾರ್ಡ್‌ಗಳನ್ನು ತಮ್ಮ ಹತ್ತಿರ ತಂದುಕೊಟ್ಟೆ. ಆದರೆ ಅದು ಇನ್ನೂ ಇತ್ಯರ್ಥವಾಗಿಲ್ಲ. ಡಿ. ಪಿ. ಐ. ಆಫೀಸ್‌ನಲ್ಲಿ ಫೈಲ್ ಮೂವ್ ಆಗದಿರುವುದೇ ಇದಕ್ಕೆ ಕಾರಣ. ಅನೂಚಾನವಾಗಿ ಮುಂದುವರೆದುಕೊಂಡು ಬಂದಿರುವ ಈ ಅಧಿಕಾರಿಗಳನ್ನು ತಾವು ಬದಲಾವಣೆ ಮಾಡುವವರೆಗೆ ಈ ಇಲಾಖೆಯನ್ನು

(ಶ್ರೀ ಕೋಣಂದೂರು ಲಿಂಗಪ್ಪ)

ಸ್ಪಷ್ಟ ಮಾಡುವುದಕ್ಕೆ ಸಾಧ್ಯವಿಲ್ಲ. ಆದ ಕಾರಣ ಇವರನ್ನು ಮೊದಲು ಈ ಜಾಗದಿಂದ ಬೇರೆ ಕಡೆಗೆ ವರ್ಗ ಮಾಡಬೇಕು. ಮತ್ತು ದಿಕ್ಕು ದೇಶಾಂತರ ಮಾಡಬೇಕು. ಇದು ಬೆಂಗಳರಿನಲ್ಲಿರುವ ಖಾಸಗೀ ಶಾಲೆಗಳ ಅಧ್ಯಾಪಕರಿಗೆ ಆದರ ಮೇನೇಜ್‌ಮೆಂಟ್‌ನವರು ಸರಿಯಾಗಿ ಸಂಬಳ ಸಾರಿಗೆ ಕೊಡದಿರುವುದಕ್ಕೆ ಈ ಅಧಿಕಾರಿಗಳೇ ಕಾರಣಕರ್ತರಾಗಿದ್ದಾರೆ. ಆದ ಕಾರಣ ಇವರ ಬಗ್ಗೆ ಸೂಕ್ತವಾದ ಕ್ರಮವನ್ನು ಮಾನ್ಯ ಮಂತ್ರಿಗಳು ಕೈಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸ್ಥಳೀಯ ಅಭ್ಯರ್ಥಿಗಳ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಇವರು ಶಾಲೆಗಳಲ್ಲಿ ಎರಡು ಮೂರು ವರ್ಷ ಸರ್ವಿಸ್ ಮಾಡಿದ್ದರೂ ಸಹ ಅವರ ಸೇವೆಯನ್ನು ಖಾಯಂ ಮಾಡಿಲ್ಲ. ಇವರುಗಳು ಕೆಲಸದಲ್ಲಿ ಮುಂದುವರೆಯಲು ಏಪ್ರಿಲ್ ಕೊನೆಯವರೆಗೆ ಅವಕಾಶ ಕೊಟ್ಟಿದ್ದೀರಿ. ಅನಂತರ ಅವರನ್ನು ಕೆಲಸದಿಂದ ತೆಗೆಯುವುದು ಸರಿಯಲ್ಲ. ಟೈಂ ಸ್ಕೇಲ್ ಕೊಡುವುದು, ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂಗೊಳಿಸುವುದು ಈ ಅಧ್ಯಾಪಕರ ಬೇಡಿಕೆಗಳು ಏನೇನಿವೆ, ಆ ಬಗ್ಗೆ ಮಾನ್ಯ ಮಂತ್ರಿಗಳು ಆಸಕ್ತಿವಹಿಸಿ ಅವರಿಗೆ ನ್ಯಾಯ ದೊರಕಿಸಿಕೊಡಬೇಕು.

ಶ್ರೀ ಎ. ಆರ್. ಬದರಿನಾರಾಯಣ.—ಆ ವಿಚಾರದಲ್ಲಿ 3 ಸಲ ಮೀಟಿಂಗ್ ಮಾಡಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಕೇವಲ ಮೀಟಿಂಗ್ ಮಾಡಿದರೆ ಸಾಲದು. ಅವರ ಬೇಡಿಕೆಗಳನ್ನು ಪೂರೈಸಿಕೊಡಬೇಕು. ಮೀಟಿಂಗ್ ಮಾಡುತ್ತಿದ್ದರೆ, ಮೀಟಿಂಗ್‌ನಲ್ಲಿ ನಿಮ್ಮ ಅಧಿಕಾರಿಗಳು ಇಲ್ಲದ ಕೊಕ್ಕೆ ಹಾಕುತ್ತಿರುರುತ್ತಾರೆ.

ಶ್ರೀ ಎ. ಆರ್. ಬದರೀನಾರಾಯಣ.—ಅವರನ್ನು ಕೆಲಸದಿಂದ ತೆಗೆಯದಿದ್ದರೆ ಬೇರೆಯವರಿಗೆ ಅಪಾಯವಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಬೇರೆಯವರಿಗೆ ತೊಂದರೆಯಾಗುವುದಿದ್ದರೆ ಇವರನ್ನು ಏತಕ್ಕೆ ಕೆಲಸಕ್ಕೆ ತೆಗೆದುಕೊಳ್ಳಬೇಕಾಗಿತ್ತು ? ಮುಖ್ಯವಾಗಿ ಇವರಿಗೂ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಗೌರ್ನಮೆಂಟ್ ಕಾಲೇಜಿನ ಆಡಳಿತದ ಬಗ್ಗೆ ಈ ಸಂದರ್ಭದಲ್ಲಿ ಒಂದು ಮೆಚ್ಚುಗೆಯ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿರತಕ್ಕಂಥ ಡೈರೆಕ್ಟರ್ ಅವರು ಬಹಳ ಬಿಗುವಾಗಿ ಕೆಲಸ ಮಾಡುತ್ತಾರೆ. ಆದರೆ ಅವರ ಕೈಕೆಳಗೆ ಕೆಲಸ ಮಾಡುವವರು ನಮ್ಮ ತಲೆ ಕೆಡಿಸುತ್ತಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅವರು ತಮ್ಮ ತಲೆ ಕೆಡಿಸಿದರೆ ನಮಗೆ ಕಷ್ಟವಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಟೆಕ್ನಿಕಲ್ ಎಜುಕೇಷನ್ ಬಗ್ಗೆ ಒಂದು ಮಾತನ್ನು ವಿಷಾದದಿಂದ ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ಟೆಕ್ನಿಕಲ್ ಎಜುಕೇಷನ್ ಏನಿದೆ, ಇಲ್ಲಿ ಭ್ರಷ್ಟಾಚಾರ ಎಂಬುದು ತುಂಬಿತುಳುಕುತ್ತಿದೆ. ಭ್ರಷ್ಟಾಚಾರದ ತವರು ಮನೆಯಾಗಿದೆ ಎಂದು ಹೇಳಬಹುದು. ದಾವಣಗೆರೆಯಲ್ಲಿರುವ ಇಂಜಿನಿಯರಿಂಗ್ ಕಾಲೇಜ್, ಬೆಂಗಳೂರಿನಲ್ಲಿರುವ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಹಾಗೂ ಇನ್ನಿತರ ಕಾಲೇಜುಗಳಲ್ಲಿ ಡೈರೆಕ್ಟರ್ ಎಂದು ಯಾರು ಇದ್ದಾರೋ, ಅವರಿಂದ ಹಿಡಿದು ಕೆಳಗಿನವರೆಗೆ ಈ ಭ್ರಷ್ಟಾಚಾರ ಎಂಬುದು ಕ್ಯಾನ್ಸರ್ ರೋಗದಂತೆ ಹರಡಿದೆ. ಇದಕ್ಕೆ ತಕ್ಕ ಶಸ್ತ್ರ ಚಿಕಿತ್ಸೆಯನ್ನು ಮಾನ್ಯ ಮಂತ್ರಿಗಳು ಮಾಡಲೇಬೇಕು. ತಮಗೆ ಶಕ್ತಿಇದ್ದರೆ ಇನ್ನು 15 ದಿವಸಗಳೊಳಗೆ ಅಲ್ಲಿರತಕ್ಕಂಥ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಾವಣೆ ಮಾಡಬೇಕು. ಹಾಗೆ ಮಾಡದಿದ್ದರೆ ಬಹಳ ಅನ್ಯಾಯವಾಗುತ್ತದೆ ಮತ್ತು ಪರಿಸ್ಥಿತಿ ಬಹಳ ಪ್ರಕೋಪಕ್ಕೆ ಹೋಗಬಹುದೆಂದು ಹೇಳುತ್ತೇನೆ.

ಇನ್ನು ವಿಶ್ವವಿದ್ಯಾನಿಲಯಗಳ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಈ 3 ವಿಶ್ವವಿದ್ಯಾನಿಲಯಗಳಿಗೂ ಅನ್ವಯವಾಗುವಂತೆ ಒಂದು ಸಮಗ್ರವಾದ ಕಾಯಿದೆಯನ್ನು ತರುವುದಾಗಿ ತಾವು ಹಿಂದೆ ಹೇಳಿದ್ದಿರಿ. ಆ ರೀತಿ ಕಾಯಿದೆಯನ್ನು ತಾವು ತಂದಾಗ ನಾನು ಹೆಚ್ಚು ವಿಷಯಗಳನ್ನು ವಿಶ್ವವಿದ್ಯಾನಿಲಯಗಳ ಬಗ್ಗೆ ಹೇಳುತ್ತೇನೆ. ಮುಖ್ಯವಾಗಿ ನರ್ಸರಿಯಿಂದ ಹಿಡಿದು ವಿಶ್ವವಿದ್ಯಾನಿಲಯದ ಮಟ್ಟದವರೆಗೆ ಎಲ್ಲ ಹಂತಗಳಲ್ಲಿಯೂ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡುವುದಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡಬೇಕು. ಇಂದು ಕನ್ನಡವನ್ನು ಹೇಳಿಕೊಡದ ನರ್ಸರಿ ಮತ್ತು ಕಾನ್‌ವೆಂಟ್ ಶಾಲೆಗಳಿಗೆ ಎಷ್ಟು ಗ್ರಾಂಟ್ ಕೊಡುತ್ತಿದ್ದೀರಿ ಎಂಬುದನ್ನು ಹೇಳಬೇಕು. ತಮಿಳುನಾಡು, ಮಹಾರಾಷ್ಟ್ರ, ಕೇರಳಾ ರಾಜ್ಯಗಳಲ್ಲಿ, ಅಲ್ಲಿಯ ನರ್ಸರಿ ಶಾಲೆಗಳಲ್ಲಿ ಮತ್ತು ಇತರೇ ಶಾಲಾಕಾಲೇಜುಗಳಲ್ಲಿ ಪ್ರಾಂತೀಯ ಭಾಷೆಯನ್ನು ಕಡ್ಡಾಯವಾಗಿ ಕಲಿಸದೇಇದ್ದರೆ

ಅಲ್ಲಿಯ ಸರ್ಕಾರದವರು ಮೂರು ಕಾಸಿನ ಗ್ರ್ಯಾಂಟ್ ಸಹ ಕೊಡುತ್ತಿಲ್ಲ. ಆದರೆ ನಮ್ಮ ಸರ್ಕಾರದ್ದು ವಿಶಾಲ ಮನೋಭಾವ. ಮನೆಗೆ ಬೆಂಕಿ ಹಚ್ಚಿಕೊಂಡು ಊರಿಗೆ ಬೆಳಕು ಕೊಡುವಂತಹ ಮನೆ ಮುರುಕುಬುದ್ಧಿ ಇರುವುದು ಸರಿಯಲ್ಲ. ಯಾರು ಕನ್ನಡವನ್ನು ಕಡ್ಡಾಯವಾಗಿ ಕಲಿಸುವುದಿಲ್ಲವೋ ಅಂತಹ ವಿದ್ಯಾಸಂಸ್ಥೆಗಳಿಗೆ ಮೂರು ಕಾಸಿನ ಗ್ರ್ಯಾಂಟನ್ನೂ ಸಹ ಕೊಡಬಾರದು. ಕೊಡುತ್ತಿದ್ದರೆ ಅದನ್ನು ತಕ್ಷಣ ತಡೆಹಿಡಿಯಬೇಕು. ಬೇರೆ ಭಾಷೆಯನ್ನು ಸಹ ಕಲಿಯಲಿ. ಆದರೆ ಕನ್ನಡವನ್ನು ಮಾತ್ರ ಕಡ್ಡಾಯವಾಗಿ ಕಲಿಯಲೇಬೇಕು. ಈ ಬಗ್ಗೆ ತೀವ್ರವಾದಂಥ ಕಾರ್ಯಕ್ರಮ ಹಾಕಿಕೊಳ್ಳ ಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಅಕೆಡೆಮಿ ವಿಷಯವನ್ನು ಶ್ರೀಮಾನ್ ದೇವೇಗೌಡರು ಈಗಾಗಲೇ ಹೇಳಿದ್ದಾರೆ. ಇಂದು ನಮ್ಮ ರಾಜ್ಯದಲ್ಲಿ ಸಂಗೀತ, ನೃತ್ಯ ಮತ್ತು ಲಲಿತಕಲೆಗೆ ಸಂಬಂಧಪಟ್ಟಂತೆ ಮೂರು ಅಕೆಡೆಮಿಗಳಿವೆ. ಇವುಗಳ ಪೈಕಿ ಒಂದು ರಿಜಿಸ್ಟರ್ಡ್ ಆಗಿದೆ, ಇನ್ನು ಉಳಿದ ಎರಡು ರಿಜಿಸ್ಟರ್ಡ್ ಆಗಿಲ್ಲ. ಈ ಅಕೆಡೆಮಿಗಳ ಹೆಸರಿನಲ್ಲಿ ಇಂದು ನಮ್ಮ ಸರ್ಕಾರದ ಲಕ್ಷಗಟ್ಟಲೆ ಹಣ ಲೂಟಿಯಾಗುತ್ತಿದೆ. ಈ ಅಕೆಡೆಮಿಗಳಿಗೆ ಅಧ್ಯಕ್ಷರಾಗುವವರು ಮತ್ತು ಸದಸ್ಯರಾಗುವವರು ಎಂತಹವರಿರಬೇಕು ಎಂಬ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ. ಇಂತಹ ಅಕೆಡೆಮಿಗಳಲ್ಲಿ ಸಂಗೀತ, ಕಲೆ, ಸಾಹಿತ್ಯ, ಜನಪದ ಮುಂತಾದವುಗಳಲ್ಲಿ ಅರಿತಂತಹವರು, ನುರಿತಂತಹವರು ಇರಬೇಕು. ನಮ್ಮ ದೇಶದ ಮತ್ತು ನಮ್ಮ ರಾಜ್ಯದ ಸಂಸ್ಕೃತಿಯನ್ನು ಪ್ರತಿನಿಧಿಸತಕ್ಕಂಥವರು ಇರಬೇಕು.

ಸಂಗೀತ ನಾಟಕ ಅಕಾಡೆಮಿಯಲ್ಲಿ ಯಾರು ನಮ್ಮ ರಾಜ್ಯದ ಸಂಸ್ಕೃತಿಗೆ ತಿಲಾಂಜಲಿಯನ್ನು ಕೊಟ್ಟು ನಮ್ಮ ನಾಡಿಗೆ ಕೆಟ್ಟ ಹೆಸರನ್ನು ತರತಕ್ಕಂಥವರನ್ನು ತಂದು ಕೂರಿಸಿದ್ದಾರೆ. ಸಂಗೀತ ನಾಟಕ ಅಕಾಡೆಮಿಯಲ್ಲಿ ಧರ್ಮವೀರರ ಬೋಳು ತಲೆಯ ಮೇಲೆ ಕೈಯ್ಯಾಡಿಸಿ ನೇಮಕಗಳು ಆಗಿವೆ. 3 ಅಕಡೆಮಿಗಳನ್ನು ಒಂದುಗೂಡಿಸಿ ನಮ್ಮ ಸಂಸ್ಕೃತಿಯನ್ನು ಪ್ರತಿನಿಧಿಸುವ ಕುವೆಂಪು, ಕಾರಂತರೂ, ಬೇಂದ್ರೆ, ಶ್ರೀರಂಗರಂಥವರನ್ನು ಅದಕ್ಕೆ ಅಧ್ಯಕ್ಷರನ್ನಾಗಿ ಮಾಡಿ, ಅದು ಚೆನ್ನಾಗಿ ನಡೆದುಕೊಂಡು ಹೋಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಬೆಂಗಳೂರಿನಲ್ಲಿ ಬಿಳಿಯ ಅಂಗಿಯ ಜನ ಒಂದು ನಾಟಕ ಮಾಡಿ ಲಕ್ಷಗಟ್ಟಲೆ ಹಣವನ್ನು ಹೊಡೆಯುತ್ತಿದ್ದಾರೆ. ಆದರೆ ಜನಸಾಮಾನ್ಯರಿಗೆ ಉಪಯುಕ್ತವಾಗುವಂತಹ ನಾಟಕಗಳನ್ನು ಪ್ರದರ್ಶನ ಮಾಡಿದರೆ ಯಾವ ಸಹಾಯವನ್ನು ಮಾಡುತ್ತಿಲ್ಲ. ಆದ್ದರಿಂದ ಸರ್ಕಾರದವರು ಅದನ್ನು ಗಮನಿಸಬೇಕು ಎಂದು ನಾನು ಹೇಳುತ್ತೇನೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ವಿಷಯವನ್ನು ಹೇಳುತ್ತೇನೆ. ಅದೇನೆಂದರೆ ಮಹಾಕವಿ ಪಂಪನ ಸಾವಿರ ವರ್ಷದ ಸಮಾರಂಭವನ್ನು ಬನವಾಸಿಯಲ್ಲಿ ಮಾಡಬೇಕು. ಅದನ್ನು ಬಹಳ ವಿಜೃಂಭಣೆಯಿಂದ ಆಚರಿಸಬೇಕು. ಹಾಗೆಯೇ ನಮ್ಮ ಕನ್ನಡದ ಕವಿಗಳು, ಸಾಹಿತಿಗಳು ದೊಡ್ಡವರು ಯಾರು ಯಾರು ಇದ್ದಾರೆ ಅವರು ವಾಸವಾಗಿದ್ದಂತಹ ಮನೆಗಳನ್ನು ಸರ್ಕಾರದವರೇ ತೆಗೆದುಕೊಂಡು ಅವುಗಳನ್ನು ಮ್ಯೂಜಿಯಂ ಮಾಡಬೇಕು. ಈಗ ಉದಾಹರಣೆಗೆ ಮಾಸ್ತಿಯವರು, ಬೇಂದ್ರೆಯವರು, ಕುವೆಂಪು ಅವರು, ಶಿವರಾಮಕಾರಂತರು ಇವರುಗಳು ವಾಸ ಮಾಡುತ್ತಿದ್ದಂತಹ ಮನೆಗಳನ್ನು ಸರ್ಕಾರದವರು ತೆಗೆದುಕೊಂಡು ಅದನ್ನು ದೇಶದ ಆಸ್ತಿಯಾಗಿ ಅವುಗಳನ್ನು ರಕ್ಷಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಪ್ರಿಂಟಿಂಗ್ ಪ್ರೆಸ್ ಮತ್ತು ಸ್ಟೇಷನರಿ ವಿಷಯದಲ್ಲಿ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿ ಕೆಲಸ ಚೆನ್ನಾಗಿ ನಡೆಯುತ್ತಿದೆ. ಕನ್ನಡದ ಮಹಾಕಾವ್ಯಗಳು, ದೊಡ್ಡ ದೊಡ್ಡ ಪುಸ್ತಕಗಳು ಸುಲಭ ಬೆಲೆಗೆ ದೊರೆಯುವಂತಾಗಬೇಕು. ಈ ಇಲಾಖೆಗೆ ಬೇಕಾದ ಕೆಲವು ಪುಸ್ತಕಗಳನ್ನು ಬ್ಲಾಕ್ ಮಾರ್ಕೆಟ್ಟಿನಲ್ಲಿ ಬಲ್ಕಾಗಿ ಪರ್ಚೇಜ್ ಮಾಡುತ್ತಿದ್ದಾರೆ ಎಂದು ಗೊತ್ತಾಗಿದೆ. ಅದು ಸರಿಯಲ್ಲ. ಅದನ್ನು ಪರಿಪಡಿಸಬೇಕು ಎಂದು ನಾನು ಹೇಳುತ್ತೇನೆ.

ಯೂತ್ ಸರ್ವೀಸಿಗೆ ಸಂಬಂಧಪಟ್ಟ ಹಾಗೆ ಒಂದು ಮಾತನ್ನು ಹೇಳುತ್ತೇನೆ. ಯುವಕ ಕೇಂದ್ರಗಳಿಗೆ ನೆಹರೂ ಅವರ ಹೆಸರನ್ನು ಇಡುವುದಕ್ಕೆ ಬದಲಾಗಿ ಶೌರ್ಯ ಸಾಹಸಗಳಿಗೆ ಪರಾಕ್ರಮಗಳಿಗೆ ಹೆಸರಾದ ನೇತಾಜಿ ಸುಭಾಷರ ಹೆಸರನ್ನು ಇಡುವುದು ಒಳ್ಳೆಯದು. ಈ ಯುವಕ ಕೇಂದ್ರಗಳಲ್ಲಿ ಇರತಕ್ಕ ವಿದ್ಯಾವಂತ ನಿರುದ್ಯೋಗಿಗಳನ್ನು ಹಳ್ಳಿಗಳಿಗೆ ಕರೆದುಕೊಂಡು ಹೋಗಿ ಅವಿದ್ಯಾವಂತ ಜನಗಳಿಗೆ ಅಕ್ಷರವನ್ನು ಕಲಿಸಿ ಜನಗಳನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ.

(ಶ್ರೀ ಕೋಣಂದೂರು ಲಿಂಗಪ್ಪ)

ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಕ್ಷಾಮಪೀಡಿತ ಪ್ರದೇಶಗಳಿಗೆ ಹೋಗಿ ಅಲ್ಲಿನ ಪರಿಸ್ಥಿತಿಯನ್ನು ನೋಡಿಕೊಂಡು ಬರುವುದಕ್ಕೆ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಅವರು ಅಲ್ಲಿಗೆ ಹೋಗಿ ಬರಲಿ. ಅಲ್ಲಿ ಸರ್ಕಾರದವರು ಏನು ತಪ್ಪು ಮಾಡುತ್ತಿದ್ದಾರೆ ಎಂಬುದನ್ನು ನೋಡಿಕೊಂಡು ಬರಲಿ. ಅವರಾದರೂ ಸರ್ಕಾರಕ್ಕೆ ಬುದ್ಧಿಯನ್ನು ಕಲಿಸಲಿ.

ಈ ಸಂದರ್ಭದಲ್ಲಿ ಮಾನ್ಯ ವಿದ್ಯಾಮಂತ್ರಿಗಳಿಗೆ ಒಂದು ಮಾತು ಹೇಳುತ್ತೇನೆ. ಮಾನ್ಯ ವಿದ್ಯಾಮಂತ್ರಿಗಳು ನಮ್ಮ ಜಿಲ್ಲೆಯವರು. ಅವರು ನನಗೆ ಚೆನ್ನಾಗಿ ಗೊತ್ತು. ಅವರು ಒಳ್ಳೆಯ ಮೃದು ಸ್ವಭಾವದವರು ಮತ್ತು ಸುಸಂಸ್ಕೃತರು ಹಾಗೂ ಸಜ್ಜನರು. ಅವರು ಇನ್ನು ಮುಂದೆ ಸ್ವಲ್ಪ ಕಠೋರವಾಗಿ ಆಗಬೇಕು. ಅವರು ಹೆಚ್ಚು ದಾಕ್ಷಿಣ್ಯಕ್ಕೆ ಒಳಗಾಗಬಾರದು. ಶ್ರೀಮಾನ್ ಕೆ. ಎಚ್. ಪಾಟೀಲರಷ್ಟು ಮುಂದೆ ಹೋಗದಿದ್ದರೂ ಪರವಾಯಿಲ್ಲ, ನಿಮ್ಮ ಮಟ್ಟದಲ್ಲಿ ಮುಂದೆ ಹೋಗಿ ಶಿವಮೊಗ್ಗದಲ್ಲಿ, ಮಲೆನಾಡಿನಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕು. ಶ್ರೀಮಾನ್ ಕೆ. ಎಚ್. ಪಾಟೀಲರು ಬಹಳ ಮುಂದೆ ಹೋಗಿದ್ದಾರೆ, ಮುಖ್ಯ ಮಂತ್ರಿಗಳು ಒಪ್ಪಲಿ ಬಿಡಲಿ ಮಾಡುವುದನ್ನು ಮಾಡಿಯೇ ತೀರುತ್ತಾರೆ. ಆದರೆ ನೀವು ಉಗ್ರವಾಗಿ ವ್ಯಗ್ರವಾಗಿ ಹೋಗದಿದ್ದರೂ ಧೈರ್ಯವಾಗಿ ಮುಂದೆ ಹೋಗಿ ಸುಸಂಸ್ಕೃತ ನಡೆನುಡಿಯ ಮೂಲಕ ಮಲೆನಾಡಿಗೆ ಒಂದು ವಿಶ್ವವಿದ್ಯಾನಿಲಯವನ್ನು ತಂದು ಕೊಡಬೇಕು. ಆ ಕೆಲಸವನ್ನು ಮಾಡಿ ತಮ್ಮ ಹೆಸರು ಅಜರಾಮರವಾಗಿ ಉಳಿಯುವಂತೆ ಮಾಡಬೇಕು. ನಾನು ಪೋಲೀಸ್ ಸ್ಟೇಷನ್ ಕೇಳುತ್ತಾ ಇಲ್ಲ. ವಿಶ್ವವಿದ್ಯಾನಿಲಯವನು ಕೇಳುತ್ತಿದ್ದೇನೆ. ಮಾನ್ಯ ವಿದ್ಯಾ ಮಂತ್ರಿಗಳಿಂದ ಶಿಕ್ಷಣ ಇಲಾಖೆಗೆ ಕಾಯ ಕಲ್ಪವಾಗಲಿ ಎಂದು ಹೇಳಿ ಮಾನ್ಯ ಉಪಾಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

5-00 P. M.

ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರ್).—ಸನ್ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ವಿದ್ಯಾ ಮಂತ್ರಿಯವರು ಮಂಡಿಸಿರತಕ್ಕಹ 67 ಕೋಟಿ ಚಿಲ್ಲರೆ ಮೊತ್ತದ ಬೇಡಿಕೆಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ ಕೆಲವು ಸಲಹೆ ಸೂಚನೆಗಳನ್ನು ಕೊಡಬಯಸುತ್ತೇನೆ. ನಮ್ಮ ಸರ್ಕಾರ ಖರ್ಚು ಮಾಡತಕ್ಕಂತಹ ಹಣದಲ್ಲಿ ದೊಡ್ಡ ಮೊತ್ತದ ಹಣವನ್ನು ಈ ಇಲಾಖೆಗೆ ಖರ್ಚು ಮಾಡುತ್ತಿದ್ದೇವೆ. ಇದನ್ನು ಸರ್ಕಾರಿಯಿಂದ ಹಿಡಿದು ಮೇಲೆ ಇರುವ ಎಲ್ಲಾ ವಿದ್ಯಾ ಸಂಸ್ಥೆಗಳಿಗೂ ಖರ್ಚು ಮಾಡುತ್ತಿದ್ದೇವೆ. ಇದು ಎಲ್ಲಿಯೂ ಸೋರದೆ, ಲೂಟಿಯಾಗದೆ, ಸದ್ವಿನಿಯೋಗವಾಗಬೇಕೆಂಬುದೇ ಎಲ್ಲರ ಇಚ್ಛೆ. ಏಕೆಂದರೆ ಇವೊತ್ತಿನ ದಿವಸ ಅನೇಕ ಕಡೆಗಳಲ್ಲಿ ವಿಚಾರ ಮಾಡಿದರೆ, ಅನೇಕರು ಹೆಚ್ಚಿನ ಶಿಕ್ಷಕರನ್ನು ತೆಗೆದುಕೊಳ್ಳದೆ, ವಿನಾ ಕಾರಣ ಹೆಚ್ಚು ಶಿಕ್ಷಕರು ಇದ್ದಾರೆಂದು ತೋರಿಸಿ ಪಗಾರವನ್ನು ತೆಗೆದುಕೊಳ್ಳುತ್ತಿದ್ದಾರೆ. ಇವತ್ತು 29 ಕೋಟಿ 85 ಲಕ್ಷ ರೂಪಾಯಿ ಪ್ರಾಥಮಿಕ ಶಿಕ್ಷಣಕ್ಕಾಗಿ ಖರ್ಚು ಮಾಡುತ್ತಿದ್ದೇವೆ. ಆದರೂ ಸಹ ಈ ಪ್ರಾಥಮಿಕ ಶಿಕ್ಷಣ ಒಳ್ಳೆಯ ರೀತಿಯಲ್ಲಿ ದೊರೆಯುತ್ತಾ ಇಲ್ಲ. ನಮ್ಮ ರಾಜ್ಯದಲ್ಲಿರುವಂತಹ 40 ಲಕ್ಷ ವಿದ್ಯಾರ್ಥಿಗಳಿಂದ ನಮ್ಮ ರಾಜ್ಯದ ಆಗುಹೋಗುಗಳು ಅವಲಂಬಿಸಿಕೊಂಡಿದೆ. ಇವರ ಶಿಕ್ಷಣ ಉತ್ತಮ ರೀತಿಯಲ್ಲಿ ನಡೆಯಬೇಕು; ಇವರು ಉತ್ತಮ ನಾಗರೀಕರಾಗಬೇಕು ಎಂಬುದು ಎಲ್ಲರ ಇಚ್ಛೆ. ಆದರೆ ಪ್ರಾಥಮಿಕ ಶಿಕ್ಷಣ ಪದ್ಧತಿ ಅಷ್ಟೊಂದು ಸರಿಯಿಲ್ಲ. ಇವತ್ತು 100ಕ್ಕೆ 50 ಜನ ಮಕ್ಕಳು ಪ್ರಾಥಮಿಕ ಶಾಲೆಯನ್ನು ಮುಗಿಸಿ ತಮ್ಮ ಕಸಬಾದ ಒಕ್ಕಲುತನಕ್ಕೋ ಅಥವಾ ಇತರ ವ್ಯವಹಾರದ ಕಡೆಗೋ ಹೋಗುತ್ತಿದ್ದಾರೆ. ಇವರು ಉತ್ತಮ ವ್ಯಾಪಾರಸ್ಥರಾಗಿ ಇರಬೇಕಾದರೆ, ಅಥವಾ ಉತ್ತಮವಾಗಿ ಒಕ್ಕಲುತನವನ್ನು ಮಾಡಬೇಕಾದರೆ, ಶಿಕ್ಷಣ ಅಗತ್ಯ. ಇವತ್ತು ಎಸ್. ಎಸ್. ಎಲ್. ಸಿ. ಆದ ವಿದ್ಯಾರ್ಥಿ ಒಕ್ಕಲುತನವನ್ನು ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ಈ ದೃಷ್ಟಿಯಿಂದ ಪ್ರಾಥಮಿಕ ಶಾಲೆಗಳನ್ನು ಮುಗಿಸುವಾಗ ಮಕ್ಕಳಿಗೆ ನಿಜವಾದ ಒಕ್ಕಲುತನದ ಮತ್ತಿತರ ಕಸಬಿನ ಮಾಹಿತಿಯನ್ನು ಕೊಡುವಂತೆ ಮಾಡಬೇಕು. ಇದರ ಬಗ್ಗೆ ಪಠ್ಯ ಪುಸ್ತಕಗಳಲ್ಲಿ ಸಹ ಅಗತ್ಯವಾದಂತಹ ಬದಲಾವಣೆಗಳನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಆದ್ದರಿಂದ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ, ಸರ್ಕಾರೀ ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಸರ್ಕಾರೇತರ ಪ್ರಾಥಮಿಕ ಶಾಲೆಗಳಲ್ಲಿ ಈ ರೀತಿ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕು. ಪ್ರಾಥಮಿಕ ಶಾಲೆಗಳನ್ನು ಎಲ್ಲಿ ವ್ಯಕ್ತಿಗಳಿಂದ ನಡೆಸುವುದಕ್ಕೆ ಸಾಧ್ಯವಿದೆ ಅಂಥ ಕಡೆ ಮಾತ್ರ ನಡೆಸಲಿ ಮತ್ತು ಎಲ್ಲಾ ಕಡೆ ನಡೆಸುವುದು ಸರಿಯಲ್ಲ. ಇನ್ನು ಸ್ಥಳೀಯ ಸಂಸ್ಥೆಗಳು ಪ್ರಾಥಮಿಕ ಶಾಲೆಗಳನ್ನು ನಡೆಸುವುದರಲ್ಲಿ ಇನ್ನೂ ಉತ್ತಮವಾಗಿ ನಡೆಸುವಂತೆ

ಬದಲಾವಣೆ ಮಾಡಬೇಕು. ಇನ್ನು ಪ್ರಾಥಮಿಕ ಶಿಕ್ಷಣದ ಬಗ್ಗೆ ಗ್ರಾಮಾಂತರ ಪ್ರದೇಶಗಳಲ್ಲಿರುವಂತಹ ಸ್ಥಳೀಯ ಸುಧಾರಣಾ ಸಮಿತಿಗಳು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಆದ್ದರಿಂದ ಪ್ರತಿಯೊಂದು ಸ್ಥಳಗಳಲ್ಲಿರುವಂತಹ ಸ್ಥಳೀಯ ಸುಧಾರಣಾ ಸಮಿತಿಗಳು ಇನ್ನೂ ಉತ್ತಮವಾದ ಕೆಲಸವನ್ನು ಮಾಡುವಂತಹ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇವೆ.

ಇನ್ನೂ ಗ್ರಾಮದ ಅನುಕೂಲಗಳನ್ನು ಪರಿಶೀಲಿಸಿ ಮೇಲಾಧಿಕಾರಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ಪಬ್ಲಿಕ್ ಲೈಬ್ರರಿಯನ್ನು ಸ್ಥಾಪನೆ ಮಾಡಬೇಕು. ಈ ಆಕ್ಟ್ ಪ್ರಕಾರ ಬೆಂಗಳೂರು, ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಇಂಥ ಲೈಬ್ರೆರಿಗಳನ್ನು ಮಾಡಿದರೆ ಸಾಲದು. ಇಂಥ ಲೈಬ್ರೆರಿಗಳನ್ನು ಹಳ್ಳಿಗಳಲ್ಲಿ ಪ್ರಾರಂಭ ಮಾಡಬೇಕು. ಅಲ್ಲಿರುವಂತಹ ರೈತರಿಗೆ ವಿರಾಮ ದೊರೆತಾಗ ಇಂಥ ಗ್ರಂಥಾಲಯಕ್ಕೆ ಹೋಗಿ ಪತ್ರಿಕೆಗಳನ್ನು ಮತ್ತು ಪುಸ್ತಕಗಳನ್ನು ಓದಿ ದಿನಂಪ್ರತಿ ನಡೆಯುವ ವಿಚಾರಗಳನ್ನು ತಿಳಿದುಕೊಳ್ಳುವುದಕ್ಕೆ ಅವಕಾಶ ಇರಬೇಕು. ಆದ್ದರಿಂದ ಪ್ರತಿಯೊಂದು ಗ್ರಾಮಗಳಲ್ಲಿಯೂ ಸಹ ಒಂದೊಂದು ಗ್ರಂಥಾಲಯಗಳನ್ನು ಸ್ಥಾಪನೆ ಮಾಡಿ, ಅಲ್ಲಿ ಪ್ರತಿಯೊಂದು ಕನ್ನಡ ಪತ್ರಿಕೆ ಮತ್ತು ವಾರಪತ್ರಿಕೆಗಳನ್ನು ಕಳಿಸಿ, ಗ್ರಾಮಾಂತರ ಪ್ರದೇಶದ ಜನರಿಗೆ ಅನುಕೂಲವಾಗುವಂತೆ ಮಾಡಿ, ಅವರ ಜೀವನ ಇನ್ನೂ ಉತ್ತಮಗೊಳ್ಳುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಅನೇಕ ಕಡೆ ವರ್ಲ್ಡ್ ಫುಡ್ ಪ್ರೊಗ್ರ್ಯಾಂ ಪ್ರಕಾರ ಮಿಡ್ಡೇ ಮೀಲ್ ಕೊಡುವುದು ಸರಿಯಾದ ರೀತಿಯಲ್ಲಿ ನಡೆಯುತ್ತಾ ಇಲ್ಲ. ಅದರಲ್ಲಿ ಅನೇಕ ತರದ ಅವ್ಯವಹಾರಗಳು ನಡೆಯುತ್ತಿವೆ ಎಂಬುದನ್ನು ಕೇಳುತ್ತಿದ್ದೇವೆ. ಆದ್ದರಿಂದ ಅಲ್ಲಿರುವ ಸ್ಥಳೀಯ ಅಧಿಕಾರಿಗಳು ಪ್ರತಿಯೊಂದು ಗ್ರಾಮಕ್ಕೂ ಹೋಗಿ ಈ ಪ್ರೊಗ್ರ್ಯಾಂ ಸರಿಯಾದ ರೀತಿಯಲ್ಲಿ ದಕ್ಷತೆಯಿಂದ ನಡೆಯುವಂತೆ ಏರ್ಪಾಡ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಾ ಕಡೆಯೂ ಪ್ರಾಥಮಿಕ ಶಾಲೆಗಳನ್ನು ಕಟ್ಟಿಸುತ್ತಿದ್ದಾರೆ. ಈ ದಿಸೆಯಲ್ಲಿ ಹೆಚ್ಚು ಪ್ರಗತಿಯನ್ನು ಸಾಧಿಸಲಾಗಿದೆ. ಆದರೂ ಕೂಡ ಇನ್ನೂ ಅನೇಕ ಕಡೆಗಳಲ್ಲಿ ಸರಿಯಾದ ಸ್ಥಳಾವಕಾಶ ಇಲ್ಲ. ಅದನ್ನು ಇನ್ನು ಮುಂದಿನ ಒಂದೆರಡು ಮಾಡಿ ಎಲ್ಲಾ ಕಡೆಯೂ ಸ್ಥಳಾವಕಾಶ ಇರುವ ಹಾಗೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಪ್ರಾಥಮಿಕ ಶಾಲೆಗಳ ಶಿಕ್ಷಕರ ವರ್ಗಾವಣೆಯ ವಿಚಾರದಲ್ಲಿ ಸರ್ಕಾರ ಒಂದು ನಿರ್ದಿಷ್ಟವಾದ ಧೋರಣೆಯನ್ನು ಹಾಕಿಕೊಳ್ಳುವುದು ಒಳ್ಳೆಯದೆಂದು ಹೇಳುತ್ತೇನೆ. ಕೆಲವು ಕಡೆ 10 ವರ್ಷಗಳಿಗೆ ಮೇಲ್ಪಟ್ಟು ಇದ್ದವರನ್ನು ನಾವು ಹಂತ ಹಂತವಾಗಿ ವರ್ಗ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಕೆಲವು ಕಡೆ 10 ವರ್ಷಗಿಂತಲೂ ಮೇಲ್ಪಟ್ಟು ಇದ್ದಾರೆ. ಆದರೆ ಇವತ್ತು ಒಂದು ಜಿಲ್ಲೆಯಲ್ಲಿ ಒಂದು ರೀತಿ, ಇನ್ನೊಂದು ಜಿಲ್ಲೆಯಲ್ಲಿ ಇನ್ನೊಂದು ರೀತಿಯಾಗಿ ಧೋರಣೆಗಳನ್ನು ಇಟ್ಟುಕೊಳ್ಳುವುದು ಸರಿಯಲ್ಲ. ಇಡೀ ರಾಜ್ಯಕ್ಕೆ ಒಂದೇ ನೀತಿಯನ್ನು ಪಾಲನೆ ಮಾಡಿಕೊಳ್ಳಬೇಕು. 10 ವರ್ಷಗಳಿಗಿಂತ ಹೆಚ್ಚು ಯಾರು ಒಂದು ಊರಿನಲ್ಲಿರುತ್ತಾರೋ, ಅವರನ್ನು ನಿರ್ದಾಕ್ಷಿಣ್ಯವಾಗಿ ವರ್ಗ ಮಾಡಬೇಕೆನ್ನುವ ಮಾತನ್ನು ಹೇಳುತ್ತೇನೆ. ಮತ್ತು ಎಲ್ಲೆಲ್ಲಿ ಉತ್ತಮವಾದ ಶಿಕ್ಷಕರು ರಾಜಕೀಯದಲ್ಲಿ ಕೈಹಾಕದೆ ಇದ್ದಾರೋ, ಅಂಥವರನ್ನು ಕೆಣಕುವುದು ಬೇಡ. ಅಲ್ಲದೆ ಅಲ್ಲ ರಾಜಕೀಯವನ್ನು ಮಾಡಿಕೊಂಡು ತನ್ನ ಸ್ವಂತ ಕೆಲಸಗಳನ್ನೋ ಅಥವಾ ಒಕ್ಕಲುತನವನ್ನೋ ಮಾಡಿಕೊಂಡು ಯಾರು ಇರುತ್ತಾರೋ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅವರ ತಪ್ಪುಗಳು ಕಂಡು ಬಂದರೆ, ಅವರನ್ನು ನಿರ್ದಾಕ್ಷಿಣ್ಯವಾಗಿ ಡಿಸ್‌ಮಿಸ್ ಮಾಡಬೇಕು. ಇನ್ನು ಕೆಲವು ಕಡೆ ಸರ್ಪ್ಲಸ್ ಟೀಚರುಗಳು ಇದ್ದಾರೆ ; ಕೆಲವು ಕಡೆ ಟೀಚರ್‌ಸೇ ಇಲ್ಲ. ಅವರನ್ನು ಜಾಸ್ತಿ ಇರುವ ಕಡೆಯಿಂದ ವರ್ಗ ಮಾಡಿದರೆ, ಅವರು ಬೇರೆ ಕಡೆಗೆ ಸಹ ಹೋಗುವುದಿಲ್ಲ. ಸರ್ಕಾರ ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡಬಹುದು. ಹೆಣ್ಣನ್ನು ಗಂಡು ಮಾಡುವುದು ಮತ್ತು ಗಂಡನ್ನು ಹೆಣ್ಣು ಮಾಡುವುದು ಬಿಟ್ಟರೆ ಏನು ಬೇಕಾದರೂ ಸರ್ಕಾರ ಮಾಡಬಹುದು. ಆದ್ದರಿಂದ ವರ್ಗ ಮಾಡಿದರೆ ಅವರು ಹೋಗುವುದಿಲ್ಲವೆಂಬ ನೆಪವನ್ನು ಹೇಳುವುದು ಸರಿಯಲ್ಲ. ಆದ್ದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ತಮ್ಮ ಮಾತನ್ನು ಕೇಳುವುದಿಲ್ಲವೆಂಬ ಮಾತನ್ನು ಹೇಳುವುದು ಬೇಡ. ಅವರನ್ನು ಎಲ್ಲಿ ಅವಶ್ಯಕತೆ ಇದೆ ಅಲ್ಲಿಗೆ ವರ್ಗಾವಣೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಅನೇಕ ಕಡೆ ಮಾಧ್ಯಮಿಕ ಶಿಕ್ಷಣದಲ್ಲಿ ಅಕ್ರಮ ವ್ಯವಹಾರ ನಡೆಯುತ್ತಿದೆ. ಎಲ್ಲಿ 40 ಮಾರ್ಕ್ಸ್‌ಗಳು ಬರುತ್ತವೆ, ಅಲ್ಲಿ 80 ಮಾರ್ಕು ಎಂದು ಮಾಡುತ್ತಾರೆ, ಮತ್ತು ಎಲ್ಲಿ 80 ಬರುತ್ತದೆ ಅಲ್ಲಿ 35 ಅಥವಾ 40 ಮಾರ್ಕ್ಸ್ ಎಂದು ಕೆಲವು ಕಡೆ ಮಾಡುತ್ತಿದ್ದಾರೆ. ಇವುಗಳನ್ನು ಬಿಜಾಪುರ ಜಿಲ್ಲೆಯಲ್ಲಿ ಈಗಾಗಲೇ ಕಂಡು ಹಿಡಿದಿದ್ದಾರೆ. ಇಂತಹ ಶಾಲೆಗಳ ಮೇಲೆ ಅತಿ ನಿಷ್ಠೂರವಾಗಿ ಕ್ರಮ ತೆಗೆದುಕೊಂಡು ಒಂದು ಹೆಚ್ಚಿನ ಹಿಡಿತವನ್ನು ಇಟ್ಟುಕೊಳ್ಳಬೇಕು.

(ಶ್ರೀ ಬಿ. ಜಿ. ಬಣಕಾರ್)

ಇನ್ನು ವಿಶ್ವವಿದ್ಯಾನಿಲಯದ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಈಗ ಅನೇಕ ವಿಶ್ವ ವಿದ್ಯಾನಿಲಯಗಳಿವೆ. ಅವುಗಳಲ್ಲಿ ಬೇಕಾದಷ್ಟು ಅಕ್ರಮ ವ್ಯವಹಾರಗಳು ನಡೆಯುತ್ತಿವೆ. ಅಲ್ಲಿ ಅಕ್ರಮ ಹುದ್ದೆಗಳನ್ನು ನಿರ್ಮಾಣ ಮಾಡುತ್ತಾರೆ. ಇದರ ಬಗ್ಗೆ ಸಿಕ್ಕಾಬಟ್ಟೆ ಪುಕಾರುಗಳನ್ನು ಹಿಂದಿನಿಂದಲೂ ಮಾಡುತ್ತಿದ್ದಾರೆ. ಇನ್ನು ಕೆಲವು ಕಡೆ ಸಾಕಷ್ಟು ಅನ್ಯಾಯದಿಂದ ಅಧಿಕಾರಿಗಳು ಕೆಲಸಮಾಡುತ್ತಿದ್ದಾರೆ. ಇಂತಹ ವಿಶ್ವವಿದ್ಯಾನಿಲಯಗಳ ಮೇಲೆ ಸರ್ಕಾರದ ಹತೋಟಿ ಇರಲಿ. ಸರ್ಕಾರ ಹಣವನ್ನು ಬೇಕಾದಷ್ಟು ವಿಶ್ವವಿದ್ಯಾನಿಲಯಗಳಿಗೆ ಕೊಡುತ್ತಿರುವಾಗ ಆ ವಿಶ್ವವಿದ್ಯಾನಿಲಯ ಗಳನ್ನು ಆ ಹಣದ ಬಗ್ಗೆ ಕೇಳಬಾರದೆಂದರೇನು ? ಇನ್ನು ಕಾಲೇಜುಗಳ ಬಗ್ಗೆ ಹೇಳುವುದಾದರೆ ಕೆಲವು ಕಡೆಗಳಲ್ಲಿ 9 ಜನರು ಶಿಕ್ಷಕರು ಇದ್ದರೆ ಕೇವಲ 6 ಜನ ವಿದ್ಯಾರ್ಥಿಗಳು ಅಲ್ಲಿ ಇರುತ್ತಾರೆ. ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನಲ್ಲಿ ಒಬ್ಬ ಶಿಕ್ಷಕನಿದ್ದರೆ ಇಬ್ಬರು ಹುಡುಗರು ಇರುತ್ತಾರೆ. ಇನ್ನು ಕೆಲವು ಕಾಲೇಜುಗಳಲ್ಲಿ ಒಬ್ಬ ಶಿಕ್ಷಕನಿದ್ದರೆ, 14 ವಿದ್ಯಾರ್ಥಿಗಳ ರೇಷಿಯೊ ಇರುತ್ತದೆ. ಆಯುರ್ವೇದ ಕಾಲೇಜಿನಲ್ಲಿ ಒಬ್ಬ ಶಿಕ್ಷಕ, 3 ಜನ ವಿದ್ಯಾರ್ಥಿಗಳು, ಮತ್ತೊಬ್ಬ ಶಿಕ್ಷಕನಿಗೆ ಕೇವಲ 2 ವಿದ್ಯಾರ್ಥಿಗಳು ಇದ್ದಾರೆ. ಆರ್ಟ್ಸ್ ಕಾಲೇಜಿನಲ್ಲಿ ಒಬ್ಬ ಶಿಕ್ಷಕನಿಗೆ 41 ವಿದ್ಯಾರ್ಥಿಗಳು ಇದ್ದಾರೆ. ಸೈನ್ಸ್ ಕಾಲೇಜಿನಲ್ಲಿ ಒಂದು ಕಡೆ ಒಬ್ಬ ಶಿಕ್ಷಕನಿಗೆ 10 ವಿದ್ಯಾರ್ಥಿಗಳು, ಇನ್ನೊಂದು ಕಡೆ ಒಬ್ಬ ಶಿಕ್ಷಕನಿಗೆ 9 ವಿದ್ಯಾರ್ಥಿಗಳು, ಮತ್ತೊಂದು ಕಡೆ ಒಬ್ಬ ಶಿಕ್ಷಕನಿಗೆ 14 ವಿದ್ಯಾರ್ಥಿಗಳು, ಲಾ ಕಾಲೇಜಿನಲ್ಲಿ ಒಬ್ಬ ಶಿಕ್ಷಕನಿಗೆ ಒಂದು ಕಡೆ 35 ವಿದ್ಯಾರ್ಥಿಗಳು, ಇನ್ನೊಂದು ಕಡೆ ಒಬ್ಬ ಶಿಕ್ಷಕನಿಗೆ 50 ವಿದ್ಯಾರ್ಥಿಗಳು, ಮತ್ತೊಂದು ಕಡೆ ಒಬ್ಬ ಶಿಕ್ಷಕನಿಗೆ 38 ವಿದ್ಯಾರ್ಥಿಗಳು, ಮೆಡಿಕಲ್ ಕಾಲೇಜಿನಲ್ಲಿ ಒಂದು ಕಡೆ ಒಬ್ಬ ಶಿಕ್ಷಕನಿಗೆ 10 ವಿದ್ಯಾರ್ಥಿಗಳು, ಇನ್ನೊಂದು ಕಡೆ ಒಬ್ಬ ಶಿಕ್ಷಕನಿಗೆ 6 ವಿದ್ಯಾರ್ಥಿಗಳು ಇದ್ದಾರೆ. ಈ ಪ್ರಕಾರ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ತರಗತಿಗಳು ನಡೆಯುತ್ತಿವೆ.

ಇನ್ನು ಗ್ರಾಂಟ್ ಕೊಡುವ ವಿಚಾರದಲ್ಲಿ ಕೆಲವು ಕಡೆ ಸರ್ಕಾರದವರು ಹೆಚ್ಚಿಗೆ ಕೊಟ್ಟಿದ್ದಾರೆ. ಆದರೆ ಯು. ಜಿ. ಸಿ ಅವರು ಹೆಚ್ಚಿಗೆ ಕೊಟ್ಟಿಲ್ಲ. ಸರ್ಕಾರದ ಗ್ರಾಂಟ್ ಕೊಡುವಾಗ ಅವರ ಅವಶ್ಯಕತೆ ನೋಡಿಕೊಂಡು ಅಲ್ಲಿರತಕ್ಕ ಶಿಕ್ಷಕರ ಸಂಖ್ಯೆಯನ್ನು ನೋಡಿಕೊಂಡು ಯೋಗ್ಯ ರೀತಿಯಲ್ಲಿ ಸರ್ಕಾರ ಗ್ರಾಂಟನ್ನು ಹಂಚಬೇಕಾಗಿದೆ. ಈ ಕ್ಷೇತ್ರದಲ್ಲಿ ನಿಜವಾಗಿ ಕಾಯಿದೆಗಳ ಅವಶ್ಯಕತೆ ಬಹಳವಾಗಿ ಇದೆ. ಇವತ್ತು ಯಾವ ರೀತಿಯಲ್ಲಿ ಸಹಕಾರ ಸಂಘಗಳಲ್ಲಿ ಪ್ರೈಮರಿ ವಿಲೇಜ್ ಪಂಚಾಯತಿ, ತಾಲ್ಲೂಕು ಬೋರ್ಡ್‌ಗಳನ್ನು ಇಟ್ಟುಕೊಂಡಿದ್ದಾರೆ ಅದೇ ರೀತಿಯಲ್ಲಿ ಮುನಿಸಿಪಲ್ ಆಕ್ಟ್‌ನಲ್ಲಿ ಟೌನ್ ಮುನಿಸಿಪಾಲಿಟಿ ಮತ್ತು ಸಿಟಿ ಮುನಿಸಿಪಾಲಿಟಿ ಎಂಬುದಾಗಿ ಇಟ್ಟುಕೊಂಡಿದ್ದಾರೆ. ಈ ರಾಜ್ಯದಲ್ಲಿ ಎಜುಕೇಷನಲ್ ಆಕ್ಟ್‌ನಲ್ಲಿ ಪ್ರೈಮರಿ, ಸೆಕೆಂಡರಿ, ಮತ್ತು ಕಾಲೇಜ್ ಸಿಸ್ಟಂ ಒಂದು ರೀತಿಯಲ್ಲಿ ಬರುವುದು ಸಂಶಯಾತ್ಮಕವಾಗಿದೆ. ಈ ಎಜುಕೇಷನಲ್ ಆಕ್ಟನ್ನು ಜಾರಿಗೆ ತರುವಾಗ ದಕ್ಷ ಕ್ರಮವನ್ನು ತೆಗೆದುಕೊಳ್ಳಬೇಕು. ಈ ದೇಶದಲ್ಲಿ ಆದಷ್ಟು ಜಾಗ್ರತೆಯಾಗಿ ಎಜುಕೇಷನಲ್ ಆಕ್ಟ್ ಅಥವಾ ಬಿಲ್ ಇರುವುದಕ್ಕೆ ಸರ್ಕಾರ ಪ್ರಯತ್ನಮಾಡಲಿ ಎಂಬ ಮಾತನ್ನು ನಾನು ಒತ್ತಿ ಹೇಳುತ್ತೇನೆ. ಒಟ್ಟಿನಲ್ಲಿ ನಮ್ಮ ವಿದ್ಯಾಮಂತ್ರಿಗಳು ತಂದಂಥ ಬೇಡಿಕೆಗೆ ಸಂಪೂರ್ಣ ಬೆಂಬಲವನ್ನು ಕೊಟ್ಟು, ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ಅಭಿನಂದಿಸಿ ನಾನು ನನ್ನ ಈ ಒಂದು ಚಿಕ್ಕ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಾಚಾಳ್ ನಾಗರಾಜ್.—ನಿನ್ನೆಯ ದಿವಸ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೆ. 43 ಜನ ಸದಸ್ಯರು ಸಹಿ ಹಾಕಿ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಮನೆಯಲ್ಲಿ ಈಗ ಮೀಟಿಂಗ್ ನಡೆಯುತ್ತಾ ಇದೆ. ಅದು ಮಂತ್ರಿ ಮಂಡಲವನ್ನು ಬದಲಾವಣೆ ಮಾಡುವ ವಿಷಯ. ಈ ವಿಚಾರದಲ್ಲಿಯೇ ಚರ್ಚೆ ನಡೆಯುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಅವರಲ್ಲಿ ಕೆಲವರನ್ನು ಕರೆದು ಇಂಟರ್‌ವ್ಯೂ ಮಾಡುತ್ತಿದ್ದಾರೆ. ಇದು ಮಂತ್ರಿ ಮಂಡಲದ ಬದಲಾವಣೆಗೆ ಸಂಬಂಧಪಟ್ಟ ಪ್ರಶ್ನೆಯಾಗಿದೆ.

MR. DEPUTY SPEAKER.—I cannot permit it now. I have called upon the Hon. Member Sri Ramaswamy to speak.

SRI M. MALLAPPA.—I rise to a point of order, Sir. It is a party matter. After all, the party will decide it. How are they concerned with it ?

Sri M. H. JAYAPRAKASH NARAYANA.—I rise to a point of order, Sir. ಮಾನ್ಯ ಉಪಾಧ್ಯಕ್ಷರಲ್ಲಿ ನಾನು ಹೇಳುವುದೇನೆಂದರೆ, ಇದ್ದಕ್ಕಿದ್ದ ಹಾಗೆ ಮಾನ್ಯ ಮಂತ್ರಿಗಳಾಗಿರತಕ್ಕವರು ಹೊರಗಡೆಯಿಂದ ಬಂದು ಏನೋ ಹೇಳುವುದಕ್ಕೆ ಶುರು ಮಾಡಿದರು. ತಮ್ಮ ಒಂದು ಪಟ್ಟಿಯ ಪ್ರಕಾರ ಮಾನ್ಯ ಶ್ರೀ ರಾಮಸ್ವಾಮಿಯವರು ಮಾತನಾಡುವುದಕ್ಕೆ ಶುರುಮಾಡಿದರು. ಇಬ್ಬರೂ ಒಂದೇ ಕಾಲದಲ್ಲಿ ಏನು ಹೇಳುತ್ತಾರೋ ಗೊತ್ತಾಗುವುದಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ಈ ಸಭೆಯಲ್ಲಿ ಸದಸ್ಯರು ಸಾಕಷ್ಟು ಇಲ್ಲದೆಯೇ ಇರುವಾಗ, ಸದಸ್ಯರ ಹಾಗೂ ಸದನದ ಸ್ಪಷ್ಟ ಅಭಿಪ್ರಾಯ ಇದರ ಬಗ್ಗೆ ಎಲ್ಲಿಂದ ಬಂತು ?

Mr. DEPUTY SPEAKER.—There is force in the point of order raised by the hon. Member Sri Mallappa. If something has been discussed somewhere, it is purely a domestic and party matter and it is a matter on which on innumerable occasions rulings have been given. I called upon the hon. Member Sri Jayaprakash Narayan thinking that he too wanted to raise an idential matter. But he has raised a different matter. There is some force in his point of order also. When I have called upon the hon. Member Sri Ramaswamy to speak he has the right to speak and he cannot be interrupted by any other hon. Member. If somebody wants to interrupt him, then the hon Member called upon to speak must yield. In this case Sri Ramaswamy has not yielded. I call upon him to speak.

(ಶ್ರೀ ವಾಟಾಳ್ ನಾಗರಾಜ್ ಮತ್ತು ಶ್ರೀ ಎಂ. ರಾಮಸ್ವಾಮಿ ಇವರಿಬ್ಬರೂ ಏಕಕಾಲಕ್ಕೆ ಮಾತನಾಡುತ್ತಿದ್ದರು. ಯಾರ ಮಾತುಗಳೂ ಸ್ವಚ್ಛವಾಗಿ ತಿಳಿಯುತ್ತಿರಲಿಲ್ಲ)

Mr. DEPUTY SPEAKER.—These things shall not form part of the proceedings. They should not be reported in the papers.

I am quite competent to take action against the hon. member Sri Vatal Nagaraj. But it hurts me to take action against him. He will please resume his seat.

ಶ್ರೀ ವಾಟಾಳ್ ನಾಗರಾಜ್.—ತಾವು ಏನು ಆಕ್ಷನ್ ಬೇಕಾದರೂ ನನ್ನ ಬಗ್ಗೆ ತೆಗೆದುಕೊಳ್ಳಬಹುದು ತಮಗೆ ಅಧಿಕಾರ ಚಲಾಯಿಸುವುದಕ್ಕೆ ಅವಕಾಶವಿದೆ ನಾನು ತಮಗೆ ಬಹಳ ನಮ್ರತೆಯಿಂದ ಅರಿಕೆ ಮಾಡಿಕೊಳ್ಳಬೇಕಾಗಿರುವುದೇನೆಂದರೆ..............

ಶ್ರೀ ಕೆ. ಪ್ರಭಾಕರ್.— ಸ್ವಾಮಿ, ನನ್ನದೊಂದು ಕ್ರಿಯಾಲೋಪವಿದೆ. ಈಗ ಶ್ರೀ ವಾಟಾಳ್ ನಾಗರಾಜ್ ಅವರೇನು ಒಂದು ವಿಚಾರವನ್ನೆತ್ತಿದ್ದಾರೆ ಅದನ್ನು ಸಾಮಾನ್ಯವಾಗಿ '೦' ಅವರಿನಲ್ಲಿ ಎತ್ತಬೇಕಾದಂಥ ವಿಚಾರ ಅದು. ಆದರೆ ಈಗ ಸಭೆಯ ಮುಂದೆ ಒಂದು ಪ್ರಾಮುಖ್ಯವಾದ ಬೇಡಿಕೆ ಬಗ್ಗೆ ಚರ್ಚೆಗಳು ನಡೆಯುತ್ತಿರುವಾಗ ಅವರು ಮಧ್ಯೆ ಪ್ರವೇಶ ಮಾಡಿದ್ದನ್ನು ಅಧ್ಯಕ್ಷರು ನೋಡಿ ಅವರ ಬಗ್ಗೆ ಏನೋ ಒಂದು ಕರುಣೆ ಉಂಟಾಗಿ ಇಲ್ಲಿ ನಡೆಯತಕ್ಕ ಪ್ರೊಸೀಡಿಂಗ್ಸನ್ನು ರೆಕಾರ್ಡ್ ಮಾಡಬಾರದೆಂದು ತಾವು ಆಜ್ಞೆ ಮಾಡಿದ್ದೀರಿ. ಇಂಥ ವಿಚಾರದಲ್ಲಿ ಏನು ಮಾಡಬೇಕು ಎಂಬುದಕ್ಕೆ ನಿರ್ದಿಷ್ಟವಾದ ನಿಯಮಗಳಿವೆ. ಆದರಂತೆ ಅಧ್ಯಕ್ಷರು ಕ್ರಮ ಕೈಗೊಳ್ಳದಿದ್ದರೆ, ಸಭೆಯ ಕೆಲಸ ಕಾರ್ಯಗಳು ನಡೆಯುವುದಕ್ಕಾಗುವುದಿಲ್ಲ.

Mr. DEPUTY SPEAKER.—Since he has stated it is a point of order I must give a reply. He ought not to have raised it now. Even during zero hour whether to allow or not, is the discretion of the Chair. During zero hours, such matters which are serious or anything like breach of peace, etc., are raised. On any account such things cannot be allowed.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, ಮಾನ್ಯ ಸಭಾಧ್ಯಕ್ಷರೇ...... .....

ಶ್ರೀ ಟಿ. ಎಂ. ಮಂಜುನಾಥ.—ಮಾನ್ಯ ಪಾಲಕರು ಮತ್ತು ಗಮನಕ್ಕೆ ತರುತ್ತಿದ್ದ ವಿಚಾರ ಏನೆಂದರೆ ಸಭೆಯಲ್ಲಿ ಬಹಳ ಪ್ರಾಮುಖ್ಯವಾದ ವಿಷಯ ಚರ್ಚೆಯಾಗುತ್ತಿದೆ, ಆದರೆ ಅದನ್ನು ಕೇಳ ತಕ್ಕ ಮುಖ್ಯಮಂತ್ರಿಗಳಾಗಲಿ ಅಥವಾ ಸಭಾ ಉಪನಾಯಕರಾಗಲಿ ಒಬ್ಬರೂ ಸಭೆಯಲಿಲ್ಲವಲ್ಲಾ ಎಂಬ ವಿಷಯವನ್ನು ಅವರು ತಮ್ಮ ಗಮನಕ್ಕೆ ತರಬೇಕೆಂದು ಪ್ರಯತ್ನ ಮಾಡುತ್ತಿದ್ದರು.........

Mr. DEPUTY SPEAKER.—I an understand your asking but what am I to do ? The matter is not provided in the agenda, do not worry me. I am only concerned with the Agenda.

ಶ್ರೀ ಎಂ. ಬಿ. ರಾಮಸ್ವಾಮಿ. –ನಮ್ಮ ವಿದ್ಯಾ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರ ತಕ್ಕ...............

Sri H. S. SIDDAPPA.—I rise to a point of order. When the hon. Deputy Speaker is giving some ruling or directions to the House, the hon. member Sri Ramaswamy goes on speaking. Should he not obey the Chair ?

Mr. DEPUTY SPEAKER.—I am concerned with the maintenance of dignity and decorum of the House.

Sri H. S. SIDDAPPA.—While the hon. Deputy Speaker was giving ruling or directions to the House, the hon. member Sri Ramaswamy keeps on speaking.

Mr. DEPUTY SPEAKER.—It is a very interesting point of order and I require a lot of time to consider it (Laughter).

† ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್).—ಮಾನ್ಯ ಸಚಿವರು ಈ ವಿದ್ಯಾ ಖಾತೆಗೆ 67 ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ. ನಮ್ಮ ವಿದ್ಯಾಮಂತ್ರಿವರ್ಯರಾದರೋ ಬಹಳ ಅರಿತು ನುರಿತಂಥಾ ವ್ಯಕ್ತಿಗಳು. ಒಳ್ಳೆಯ ಅನುಭವಸ್ಥರು. ಅನೇಕ ವಿಚಾರಗಳನ್ನು ಪಾರಾಯಣ ಮಾಡಿರತಕ್ಕವರು. ಇವರು ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ಡಿಮ್ಯಾಂಡನ್ನು ನಾನು ಬೆಂಬಲಿಸುತ್ತ ಪುಷ್ಟೀಕರಿಸುತ್ತ ನಾಲ್ಕೈದು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಆದರೆ ಒಬ್ಬ ಅಮೇರಿಕಾದ ವಿಜ್ಞಾನಿ ಹೇಳಿರುವಂತೆ ನಮ್ಮಲ್ಲಿ ಏನಾಗಿದೆ ಎಂದರೆ ನಮ್ಮ ವಿದ್ಯಾ ಇಲಾಖೆಯಲ್ಲಿ ಪರಿಪೂರ್ಣವಾಗಿ ರಚನಾತ್ಮಕವಾಗಿ ಏನೊಂದು ಕೆಲಸಕಾರ್ಯಗಳು ನಡೆಯಬೇಕಾ ಗಿತ್ತು, ಅದು ನಡೆಯದೆ ಕುಂಠಿತವಾಗಿವೆ. ಶಾಲೆಗಳಲ್ಲಿ ಮಕ್ಕಳಿಗೆ ಪಾಠಪ್ರವಚನಗಳನ್ನು ನಡೆಸ ತಕ್ಕ ಅಧ್ಯಾಪಕ ವರ್ಗ ಏನಿದೆ, ಅದು ತಾಲ್ಲೂಕ್ ಮಟ್ಟದಿಂದ ಪ್ರಾರಂಭವಾಗಿ ಮೇಲಿನ ಮಟ್ಟದವರಗೂ ಯಾವ ಉಪಾಧ್ಯಾಯರು ಎ. ಇ. ಓ. ಕೈಕೆಳಗೆ ಕೆಲಸಮಾಡುತ್ತಿದ್ದಾರೆ ಅವರೆಲ್ಲಾ ಶಿಸ್ತನ್ನು ಕಳೆದುಕೊಂಡು; ಸರಿಯಾಗಿ ಮಕ್ಕಳಿಗೆ ಪಾಠಗಳನ್ನು ಮಾಡದೆ ತಮ್ಮ ಕರ್ತವ್ಯವೇನು ಎಂಬುದನ್ನು ಮರೆತಿದ್ದಾರೆ. ಅವರು ಹಿಡಿದಿರುವ ದಾರಿಯೇ ಬೇರೆಯಾಗಿದೆ. ಕಳೆದ ಚುನಾವಣೆಯಲ್ಲಿ ನ್ಯೂನತೆಗಳಿದ್ದುವು, ಬಹುಶಃ ಜನಸಂಘಕ್ಕೆ, ಕೆಲವು ಕೋಮುಗಳವರಿಗೆ ಉಪಾಧ್ಯಾಯರು ಸಹಾಯಮಾಡಲು ತಮ್ಮ ಕೈವಾಡವನ್ನು ನಡೆಸಿದರು ಎಂಬ ಆರೋಪವಿದೆ. ವಿದ್ಯಾಕ್ಷೇತ್ರದಲ್ಲಿರುವ ಉಪಾಧ್ಯಾಯರು ಇದರಲ್ಲಿ ತಾವು ಕೈಹಾಕುವುದು ಸರಿಯಲ್ಲ. ಮಾತೃ ದೇವೋಭವ, ಪಿತೃದೇವೋಭವ, ಆಚಾರ್ಯದೇವೋಭವ ಎಂದು ಹೇಳುವುದುಂಟು. ಈ ಗೌರವ ವನ್ನುಳಿಸಿಕೊಳ್ಳದೆ ರಾಜಕೀಯಕ್ಕಿಳಿದು ಪಿತೂರಿಮಾಡುವುದು ಸರಿಯಲ್ಲ. ಸತ್ಯಕ್ಕೆ ಎಂದೂ ಅಪಾಯವಿಲ್ಲ. ಇದಕ್ಕೆ ನಾನು ಸಲಹೆಮಾಡುವುದು ಏನೆಂದರೆ ಎ. ಇ. ಓ. ಗಳಿಗೆ ತಾಲ್ಲೂಕು ಮಟ್ಟದಲ್ಲಿ ಸೂಕ್ಷ್ಮವಾಗಿ ಆದೇಶ ಕೊಟ್ಟು ಉಪಾಧ್ಯಾಯರು ಅವರ ಚೌಕಟ್ಟನ್ನು ಬಿಟ್ಟು ಬೇರೆ ಕೆಲಸಕ್ಕೆ ಕೈಹಾಕಬಾರದು, ಹಾಗಿರುವಂತೆ ನೋಡಿಕೊಳ್ಳಬೇಕು ಎಂದು ತಿಳಿಸಬೇಕು.

5. 30 P.M.

ಪ್ರೌಢಶಾಲೆಗಳಲ್ಲಿ ಹಾಗೂ ಕಾಲೇಜುಗಳಲ್ಲಿ ಅನೇಕ ರೀತಿಯಲ್ಲಿ ಸ್ಟ್ರೈಕ್ ನಡೆಯುತ್ತಿದೆ, ಅಸಹಕಾರವಿದೆ. ಬಹುಶಃ ಇದಕ್ಕೆ ರಾಜಕಾರಣಿಗಳ ಪ್ರೇರಣೆಯಿದೆಯೋ ಏನೋ ಅರ್ಥವಾಗುವು ದಿಲ್ಲ. ವಿದ್ಯೆಯ ವಿಚಾರದಲ್ಲಿ ರಾಜಕಾರಣ ಪ್ರವೇಶ ಮಾಡಬಾರದು. ವಿದ್ಯಾವಂತರಾಗಲು ತಂದೆ

ತಾಯಿಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವರು, ಅವರಿಗೆ ಸರಿಯಾದ ಫಲ ಸಿಕ್ಕಬೇಕು. ನಮಗೆ ಸ್ವರಾಜ್ಯ ಬಂದು 25 ವರ್ಷವಾಯಿತು. ಇಂದಿನ ಸೆನ್ಸಸ್ ಪ್ರಕಾರ ಅಕ್ಷರಸ್ಥರು ಪ್ರತಿಶತ 31 ರಷ್ಟಿದ್ದಾರೆ. ಇದನ್ನು ಹೆಚ್ಚಿಸಬೇಕು. ಅದಕ್ಕಾಗಿ ತಾಲ್ಲೂಕು ಮಟ್ಟದಲ್ಲಿರುವ ಎ. ಇ. ಓ. ಮತ್ತು ಉಪಾಧ್ಯಾಯರುಗಳು ಮನೆಗಳಿಗೆ ಹೋಗಿ ಪ್ರಾರ್ಥನೆ ಮಾಡಿ ಹೆಚ್ಚು ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮಾಡಬೇಕು. ಹಾಗೆ ಮಾಡಿದರೆ ಅನಕ್ಷರಸ್ಥರ ಸಂಖ್ಯೆ ಕಡಿಮೆಯಾಗುವುದು. ಹಾಗೆ ಮಾಡಿದರೆ ಸಮಾಜವಾದಕ್ಕೆ ಮೆರಗು ಕೊಟ್ಟಂತಾಗುವುದು. ಪ್ರತಿ ಜಿಲ್ಲೆಯಲ್ಲೂ ಡೆಪ್ಯುಟಿ ಡೈರೆಕ್ಟರಿದ್ದಾರೆ, ಅವರು ತಮ್ಮ ಕಾರ್ಯವನ್ನು ಪ್ರಾಮಾಣಿಕರಾಗಿ ಮಾಡಬೇಕು. ಒಂದು ಅಕ್ರಮ ಅಥವ ಅನ್ಯಾಯ ನಡೆದು ಎ. ಇ. ಓ. ಗೆ ತಿಳಿಸಿದರೆ ಒಂದೆರಡು ವಾರಗಳಲ್ಲಿ ಕ್ರಮ ತೆಗೆದುಕೊಳ್ಳ ಬೇಕು. ವಿದ್ಯಾರ್ಥಿ ವೇತನ, ಗ್ರಾಂಟ್ ಇನ್ ಎಡ್ ಮುಂತಾದವುಗಳ ಬಗ್ಗೆ ತಿಳಿಸಿದಾಗ ತಕ್ಷಣ ಉತ್ತರ ಕೊಡಬೇಕು. ಜಿಲ್ಲಾ ಮಟ್ಟದಲ್ಲಿ ಡೆಪ್ಯುಟಿ ಡೈರೆಕ್ಟರಿಗೆ ಕೊಟ್ಟಿರುವಂತೆ ಜೀಪು ಮತ್ತು ಟೆಲಿಫೋನ್ ಸೌಲಭ್ಯ ತಾಲ್ಲೂಕು ಮಟ್ಟದಲ್ಲೂ ಕೊಟ್ಟು ಸುಲಭವಾಗಿ ಕೆಲಸಕಾರ್ಯ ನಡೆಯು ವಂತೆ ಮಾಡಬೇಕು. ಜಿಲ್ಲಾ ಮಟ್ಟದಲ್ಲಿ ಅನೇಕ ಪ್ರೈಮರಿ ಮತ್ತು ನರ್ಸರಿ ಶಾಲೆಗಳಿವೆ. ಅವು ಗಳಲ್ಲಿ ಹರಿಜನ ಗಿರಿಜನರಿಗೆ ಹೆಚ್ಚು ಪ್ರಾತಿನಿಧ್ಯ ಕೊಡಬೇಕು. ಇದನ್ನು ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಇಂದು ಖಾಸಗಿ ಶಾಲೆಗಳಲ್ಲಿ ಪ್ರೈಮರಿ, ನರ್ಸರಿ, ಹೈಸ್ಕೂಲು ಮುಂತಾದವುಗಳಲ್ಲಿ ಸರಕಾರದ ಆದೇಶ, ಕಾನೂನು ಉಲ್ಲಂಘಿಸಿ ಫೀಜನ್ನು ವಸೂಲು ಮಾಡುತ್ತಿದ್ದಾರೆ. ಹರಿಜನ ಗಿರಿ ಜನರಿಗೆ ಪ್ರೈಮರಿಯಿಂದ ಕಾಲೇಜಿನವರೆಗೆ ಮುಫತ್ತಾಗಿ ವಿದ್ಯಾಭ್ಯಾಸ ಕೊಡಬೇಕೆಂದಿರುವುದನ್ನು ಉಲ್ಲಂಘಿಸಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿಷಯ ಗಮನಕ್ಕೆ ತರುವುದು ಅನೇಕ ಖಾಸಗಿ ಸಂಸ್ಥೆಗಳು ಹೆಚ್ಚಿನ ರೀತಿಯಲ್ಲಿ ಮಕ್ಕಳಿಗೆ ಪ್ರೋತ್ಸಾಹ ಕೊಟ್ಟು ಒಳ್ಳೆಯ ರೀತಿಯಲ್ಲಿ ಪಾಠ ಹೇಳುವುದನ್ನು ಬಿಟ್ಟು ಹಣ ಸಂಪಾದನೆಗೆ ಹೊರಟಿವೆ. ಸರಕಾರದ ವತಿಯಿಂದ ಸಾವಿರಗಟ್ಟಲೆ ಸಹಾಯ ಪಡೆಯುತ್ತಿದ್ದಾರೆ. ಹಾಗೆ ಪಡೆಯುವ ಖಾಸಗಿ ಶಾಲೆಗಳವರು ಸರಿಯಾದ ರೀತಿಯಲ್ಲಿ ಸರಕಾರದ ನೀತಿಯನ್ನು ಪರಿಪಾಲಿಸದಿದ್ದರೆ ಧನಸಹಾಯವನ್ನು ನಿಲ್ಲಿಸಬೇಕು ಮತ್ತು ಖಾಸಗಿ ಸಂಸ್ಥೆಗಳ ವಿಷಯದಲ್ಲಿ ದೂರು ಬಂದರೆ ಕಠಿಣ ಕ್ರಮ ಕೈಗೊಳ್ಳಬೇಕು.

ಇನ್ನು ಯೂನಿವರ್ಸಿಟಿ ಬಗ್ಗೆ ಹೇಳುತ್ತೇನೆ. ಸಿಂಡಿಕೇಟ್ ಮತ್ತು ಸೆನೇಟ್‌ಗಳಲ್ಲಿ ಹರಿಜನರಿಗೆ ಪ್ರಾತಿನಿಧ್ಯವಿಲ್ಲ. ಇದನ್ನು ಗಮನಕ್ಕೆ ತರಲಾಗಿದೆ. ಬಹುಶಃ ಐದನೆಯ ಒಂದು ಭಾಗದಷ್ಟು ಹರಿಜನ ಗಿರಿಜನರಿದ್ದಾರೆ, ಅವರಿಗೆ ಯೂನಿವರ್ಸಿಟಿಯಲ್ಲಿ, ಸಿಂಡಿಕೇಟ್ ಮತ್ತು ಸೆನೇಟುಗಳಲ್ಲಿ ಇನ್ನುಮುಂದಾದರೂ ಪ್ರಾತಿನಿಧ್ಯ ಕೊಡಬೇಕು. ಕಾಲೇಜಿಗಾಗಲಿ ಅಥವ ಪ್ರೌಢಶಾಲೆಗಾಗಲಿ ಸರಕಾರದಿಂದ ಸೌಲತ್ತು ಪಡೆದು ಕಾನೂನನ್ನು ಉಲ್ಲಂಘನೆ ಮಾಡಿದರೆ ತಕ್ಷಣ ಕ್ರಮ ತೆಗೆದು ಕೊಳ್ಳಬೇಕು.

ಇನ್ನು ನನ್ನ ಕ್ಷೇತ್ರದ ವಿಚಾರ ಪ್ರಸ್ತಾಪಿಸುತ್ತೇನೆ. ನನ್ನ ಕ್ಷೇತ್ರದಲ್ಲಿ ನೇತಾಜಿ ಹೈಸ್ಕೂಲ್ ಎಂಬ ಶಾಲೆಯಿದೆ. ಅದು ಸರಕಾರದ ಗ್ರಾಂಟನ್ನು ಪಡೆಯುತ್ತಿದೆ, ಅಲ್ಲಿ ರಾಜಕೀಯ ಗೊಂದಲವೋ ಅಥವ ಬೇರೆ ಗಲಾಟೆಯೋ ಏನಿದೆಯೋ ಗೊತ್ತಿಲ್ಲ. ಅಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಹರಿಜನ ಅಟೆಂಡರನ್ನು ಹೊರಗೆ ಹಾಕಿದ್ದಾರೆ, ಅವನು ಬಡ ಹುಡುಗ, ಬಹುಶಃ ಅವನಿಗೆ ಹೊಟ್ಟೆಗಿಲ್ಲ. ಅವನು ಚುನಾವಣೆಯಲ್ಲಿ ನನ್ನ ಪಕ್ಷಕ್ಕೆ ಸಹಾಯ ಮಾಡಿದ ಎಂದು ಆರೋಪಿಸಿ ಹೊರಗೆ ಹಾಕಿದ್ದಾರೆ. ಅದಲ್ಲದೆ 120 ರೂಪಾಯಿ ಸಂಬಳದಲ್ಲಿ 60 ರೂಪಾಯಿ ಮಾತ್ರ ಕೊಟ್ಟು ಹೊರಗೆ ಹಾಕಿದ್ದಾರೆ. ಇದರ ಬಗ್ಗೆ ಜಾಯಿಂಟ್ ಡೈರೆಕ್ಟರಿಗೆ ದೂರು ಕೊಟ್ಟರು, ಸರಿಯಾದ ಕ್ರಮ ಅವರು ತೆಗೆದು ಕೊಂಡರು. ಆ ಶಾಲೆಗೆ ಸರಕಾರದಿಂದ ಸಹಾಯ ಮಾಡಲಾಗುತ್ತಿದೆ. ಮ್ಯಾನೇಜ್‌ಮೆಂಟ್ ಸರಕಾರದ ಕಟ್ಟುಪಾಡಿಗೆ ಒಳಪಡದೆ ಇದ್ದರೆ, ಕಾನೂನನ್ನು ಉಲ್ಲಂಘಿಸಿದರೆ ಗ್ರಾಂಟನ್ನು ನಿಲ್ಲಿಸುವು ದಾಗಿ ತಿಳಿಸಿದರು. ಆದಾದ ಒಂದು ತಿಂಗಳಲ್ಲಿ ಡಿ. ಪಿ. ಐ. ರವರು ಆ ಆಜ್ಞೆಯನ್ನು ವಜಾ ಮಾಡಿ ದರು. ಇದರ ಬಗ್ಗೆ ಎನ್‌ಕ್ವೈರಿ ಮಾಡಿ ನ್ಯಾಯ ದೊರಕಿಸಿಕೊಡಬೇಕು.

ರಾಜಕೀಯದ ಜೊತೆಗೆ ಇನ್‌ಸ್ಟಿಟ್ಯೂಷನ್ ಹಾಳಾಗಿ ಹೋಗುವ ಸ್ಥಿತಿ ಬಂದಿದೆ. ಆದ್ದರಿಂದ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಈ ಒಂದು ಇನ್‌ಸ್ಟಿಟ್ಯೂಷನ್ ಹಾಳಾಗಬಾರದು. ಮ್ಯಾನೇಜ್‌ಮೆಂಟ್ ಅನ್ನು ಬದಲಾವಣೆ ಮಾಡಿ ಯಾರಿಗೆ ಅನ್ಯಾಯವಾಗಿದೆ, ಅವರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ನಾನು ಹೇಳಬೇಕಾಗಿದೆ.

ಲೈಬ್ರರಿ ಬಗ್ಗೆ, ನಮ್ಮ ರಾಜ್ಯದಲ್ಲಿ ಎಲ್ಲರೂ ಪುಸ್ತಕಗಳನ್ನು ಬರೆಯುವುದಕ್ಕೆ ಹೊರಟಿದ್ದಾರೆ. ಅವುಗಳು ತಮ್ಮ ಜಾತಿಗೆ ಸಂಬಂಧಪಟ್ಟ ಪುಸ್ತಕಗಳು, ಅವರ ಕೋಮಿಗೆ ಸಂಬಂಧಪಟ್ಟ ಪುಸ್ತಕ ಗಳು, ಅವರ ಜಾತಿಯ ಹೆಸರಿನಲ್ಲಿ ಕುಲದ ಹೆಸರಿನಲ್ಲಿ ಇರತಕ್ಕ ಪುಸ್ತಕಗಳಾಗಿವೆ. ಇಂಥ ಪುಸ್ತಕ ಗಳನ್ನು ರದ್ದು ಮಾಡಬೇಕು. ಯಾವುದು ನ್ಯಾಯವಾಗಿ, ಸತ್ಯವಾಗಿ, ರಚನಾತ್ಮಕವಾಗಿದೆ, ಆ

(ಶ್ರೀ ಎಂ. ಬಿ. ರಾಮಸ್ವಾಮಿ)

ಒಂದು ಪುಸ್ತಕಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು. ನಮ್ಮಲ್ಲಿ ಕವಿಗಳು ಇದ್ದಾರೆ, ತಜ್ಞರು ಇದ್ದಾರೆ, ಹಾಗೂ ಅನುಭವಿಗಳು ಇದ್ದಾರೆ, ವಿದ್ಯಾ ಇಲಾಖೆಯು ಅನೇಕ ರಂಗದಲ್ಲಿ ಹೊರದೇಶಕ್ಕೆ ಹೋಗಿ ಹೆಚ್ಚಿನ ರೀತಿಯಲ್ಲಿ ಪರಿಣತಿಯನ್ನು ಮಾಡಿಕೊಂಡು ಬಂದಿದ್ದಾರೆ. ಅವರಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು, ಅವರ ಒಂದು ಅನುಭವವನ್ನು ಪ್ರಯೋಜನ ಮಾಡಿಕೊಳ್ಳಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಟೆಕ್ಸ್ಟ್ ಬುಕ್ ಕಮಿಟಿಯಲ್ಲಿ, ಪುಸ್ತಕಗಳನ್ನು ಸೆಲೆಕ್ಟ್ ಮಾಡುವಾಗ ಯೋಗ್ಯ ಶಾಸಕರಿಗೂ ಮತ್ತು ಕವಿಗಳಿಗೂ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಯಾವುದೋ ಒಂದು ವಿಲಾಸಿಗೋ, ಒತ್ತಾಯಕ್ಕೆ ಮಣಿದು ಏನೂ ಉಪಯೋಗವಾಗದೇ ಇರತಕ್ಕ ಪುಸ್ತಕವನ್ನು ಸೆಲೆಕ್ಟ್ ಮಾಡಿ ಅವರಿಗೆ ಸರ್ಕಾರದಿಂದ 40 ಸಾವಿರ ರೂಪಾಯಿ ಮತ್ತು ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿರುವ ಪ್ರಸಂಗಗಳನ್ನು ನಾನು ಕಂಡಿದ್ದೇನೆ, ಆದ್ದರಿಂದ ನಾನು ಮಂತ್ರಿವರ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಇನ್ನು ಮುಂದೆ ಇಂಥ ಅನ್ಯಾಯಗಳನ್ನು ತಪ್ಪಿಸಿ, ಕವಿತೆಯಲ್ಲಿ, ಬರವಣಿಗೆಯಲ್ಲಿ ಯಾರು ಅನುಭವ ಪಡೆದಿರುತ್ತಾರೋ ಯಾರು ಮೆಚ್ಚುಗೆಯನ್ನು ಪಡೆದಿರುತ್ತಾರೋ, ಯಾರು ಕನ್ನಡದ ಮೇಲೆ ಮಮತೆಯನ್ನು ಇಟ್ಟಿರುತ್ತಾರೋ ಅಂಥವರಿಗೆ ಪ್ರಾಶಸ್ತ್ಯ ಕೊಡಬೇಕು ಎಂದು ನಾನು ಹೇಳುತ್ತೇನೆ.

ಪ್ರಿಂಟಿಂಗ್ ಮತ್ತು ಸ್ಟೇಷನರಿ ಡಿಪಾರ್ಟ್‌ಮೆಂಟಿನಲ್ಲಿ ಹರಿಜನ ಗಿರಿಜನರ ಮಕ್ಕಳಿಗೆ ತರಬೇತಿ ಕೊಡುತ್ತಾರೆ. ಇದನ್ನು ಈಗ ಎಜುಕೇಷನ್ ಡಿಪಾರ್ಟ್‌ಮೆಂಟಿಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಿಂದ ವರ್ಗ ಮಾಡಿದ್ದಾರೆ. ಇವರಲ್ಲಿ ಬೈಂಡಿಂಗ್ ಮತ್ತು ಪ್ರಿಂಟಿಂಗ್, ಬಹುಭಾಗ ಜನ ಬೇರೆಯವರು ಅಕ್ರಮಿಸಿಕೊಂಡಿದ್ದಾರೆ. ಬೈಂಡರ್ಸ್ ಮತ್ತು ಪ್ರಿಂಟಿಂಗ್ ಪ್ರೆಸ್ ಇಟ್ಟುಕೊಂಡಿರುವವರು ಹರಿಜನರು ಕಡಿಮೆ. ಸರ್ಕಾರದ ನಿಯಮ ಇದೆ, ಹಾಗೂ ಕಾನೂನು ಇದೆ, ಅದೇ ರೀತಿಯಲ್ಲಿ 18 ಪರ್ಸೆಂಟ್ ರಿಸರ್ವೇಷನ್ ಅನ್ನು ಇಲ್ಲಿ ಇವರಿಗಾಗಿ ಮೀಸಲಾಗಿಡಬೇಕು ಎಂದು. ಇದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಅದೇ ರೀತಿಯಲ್ಲಿ ಹರಿಜನ ಗಿರಿಜನರಿಗೆ ಎಲ್ಲಾ ಸೌಲಭ್ಯವನ್ನು ಕೊಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಯೂತ್ ಕ್ಲಬ್ಸ್ ಬಗ್ಗೆ ಹೇಳಬೇಕಾದರೆ, ನಮ್ಮ ಮಂತ್ರಿವರ್ಯರು ಯುವಕರು. ಅವರು ಚಟುವಟಿಕೆಗಳನ್ನು ನಾವು ನೋಡುತ್ತಿದ್ದೇವೆ. ಗ್ರಾಮಾಂತರ ಪ್ರದೇಶದಲ್ಲಿ ಯೂತ್ ಕ್ಲಬ್‌ಗಳ ಜೊತೆಗೆ ಯಂಗ್ ಫಾರ್ಮರ್ಸ್ ಕ್ಲಬ್‌ಗಳನ್ನು ಮಾಡಿದ್ದಾರೆ. ಇದರಿಂದ ಅಲ್ಲಿ ಗೊಂದಲವಾಗಿದೆ ಎಂದು ತಿಳಿದಿದ್ದೇನೆ. ಆದ್ದರಿಂದ ನಾನು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ತಾವು ಯೂತ್ ಕ್ಲಬ್ಸ್ ಅನ್ನು ಪ್ರಾರಂಭ ಮಾಡುವಾಗ ಈ ಎಲ್ಲಾ ಸನ್ನಿವೇಶಗಳನ್ನು ಪರಿಶೀಲನೆ ಮಾಡಿ ಏನೇನು ರೂಪರೇಖೆಗಳು ಬೇಕು ಯಾವ ಮಟ್ಟದಲ್ಲಿ ಈ ಕ್ಲಬ್‌ಗಳು ನಡೆಯಬೇಕು, ಯಾವ ಚೌಕಟ್ಟಿನಲ್ಲಿ ಇವು ನಡೆಯಬೇಕು ಎನ್ನುವುದನ್ನು ವಿಚಾರ ಮಾಡಿ ಸರಿಯಾದ ರೀತಿಯಲ್ಲಿ ಇವುಗಳು ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ನಾನು ನೋಡಿದಂಥ ಯೂತ್ ಕ್ಲಬ್ಸ್‌ಗಳಲ್ಲಿ, ಬಹುಶಃ ಈ ಯುವಕರಿಗೆ ಬೇಕಾದ ಕಾರ್ಯಕ್ರಮಗಳನ್ನು ಅಳವಡಿಸದೆ, ಇವರ ಎಲ್ಲಾ ರೂಪರೇಖೆಗಳನ್ನು ಬಿಟ್ಟು ಗೂಂಡಾಗಿರಿ ಮಾಡುವುದು, ಬಡವರಿಗೆ ತೊಂದರೆ ಮಾಡುವುದು, ದರೋಡೆ ಮಾಡುವುದು, ಇಂಥ ಕ್ರಿಯಾಚಟುವಟಿಕೆಯನ್ನು ಈ ಕ್ಲಬ್‌ಗಳು ಒಳಗೊಂಡಿವೆ. ಆದ್ದರಿಂದ ಈ ಕ್ಲಬ್‌ಗಳಿಗೆ ಧನ ಸಹಾಯ ಮಾಡುವಾಗ ಪರಿಶೀಲನೆ ಮಾಡಿ ಇಂಥ ಕ್ಲಬ್ಸ್‌ಗಳಿಗೆ ಧನಸಹಾಯವನ್ನು ನಿಲ್ಲಿಸಬೇಕು. ಯಾವ ಒಬ್ಬ ವ್ಯಕ್ತಿಗೆ, ಯಾವ ಒಂದು ಗ್ರಾಮಕ್ಕಾಗಲೀ, ಯಾವ ಒಂದು ಹೋಬಳಿಯವರಿಗಾಗಲೀ, ಇವರು ಅನ್ಯಾಯ ಮಾಡಿದ್ದರೆ, ಅತ್ಯಾಚಾರ ಮಾಡಿದ್ದರೆ ಅವರ ಬಗ್ಗೆ ತೀಕ್ಷ್ಣ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ಯೂತ್ ಹಾಸ್ಟೆಲ್ಸ್ ಮಾಡುತ್ತೇವೆಂದು ತಮ್ಮ ವರದಿಯಲ್ಲಿ ಕೊಟ್ಟಿದ್ದೀರಿ, ಇದಕ್ಕೆ ಸುಮಾರು 26.5 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿ ಬೆಂಗಳೂರು ನಗರದಲ್ಲಿ ಮಾಡಬೇಕು ಎಂದು ಮಾಡಿದ್ದಾರೆ, ಬಹಳ ಸಂತೋಷ, ಆದರೆ ಇದನ್ನು ಮಾಡುವಾಗ ಒಳ್ಳೆಯ ಶ್ರದ್ಧೆಯಿಂದ, ಎಚ್ಚರಿಕೆಯಿಂದ ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಯಾವುದೇ ಒಂದು ಸೆಂಟರ್ ಅನ್ನು ಮಾಡುವಾಗ ಅದರ ಬುನಾದಿಯಲ್ಲಿಯೇ ಅದನ್ನು ಕುಂಠಿತ ಮಾಡುವ ಜನಗಳು ಇದ್ದಾರೆ. ಇದರಲ್ಲಿ ಮಕ್ಕಳಿಗೆ ಅನುಕೂಲತೆಯನ್ನು ಕಲ್ಪಿಸುವಾಗ, ಹಿಂದುಳಿದವರಿಗೆ ಹರಿಜನಗಿರಿಜನರಿಗೆ ಸೌಲಭ್ಯಗಳನ್ನು ಕಲ್ಪಿಸುವಾಗ ಹೆಚ್ಚು ನಿಗ ಕೊಡಬೇಕು, ಅದು ಬಿಟ್ಟು ಒಂದೇ ಜನಾಂಗಕ್ಕೆ, ಒಂದೇ ಜಾತಿಯವರಿಗೆ ಅವ

ಕಾಶ ಮಾಡಬಾರದು. ಯುವಕರು ನಮ್ಮ ದೇಶದ ಸಂಪತ್ತು, ಅವರು ದೇಶದ ಅಭಿಪ್ರಾಯವಾಗಿ ನಿಂತುಕೊಳ್ಳಬೇಕು ಎಂದು ಮಂತ್ರಿವರ್ಯರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದನ್ನು ಪ್ರಾರಂಭ ಮಾಡುವಾಗ ಎಲ್ಲಾ ಜನರಿಗೂ, ಜನಾಂಗಕ್ಕೂ ಎಲ್ಲಾ ರೀತಿಯಲ್ಲೂ ಸಮಾನವಾದ ಅವಕಾಶ ಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ವಿಷಯ ಲಾ ಕಾಲೇಜಿನಲ್ಲಿ ಬಹಳ ವಿಚಿತ್ರವಾದ ವಿಚಾರ ಇದೆ, ಅದು ನಮ್ಮ ಮಂತ್ರಿವರ್ಯರ ಗಮನಕ್ಕೆ ಬಂದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಲಾ ಕಾಲೇಜಿನಲ್ಲಿ ನನಗೆ ತಿಳಿದಮಟ್ಟಿಗೆ, ಅಲ್ಲಿ ಯಾವ ಒಬ್ಬ ವ್ಯಕ್ತಿ ಸೆಕೆಂಡ್ ಡಿವಿಷನ್ ಆಗಿ ಕೆಲಸಕ್ಕೆ ಸೇರಿದ್ದಾನೋ ಅವನು ಕೊನೆಯವರೆಗೂ ಸೆಕೆಂಡ್ ಡಿವಿಷನ್ ಆಗಿಯೇ ರಿಟೈರ್ ಆಗಬೇಕು. ಅಲ್ಲಿ ಕೇಡರ್ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲ, ನನಗೆ ತಿಳಿದ ಮಟ್ಟಿಗೆ, ಇವರು ಕೊಲೆಜಿಯೇಟ್ ಡೈರೆಕ್ಟರ್ ಅವರ ಕೆಳಗೆ ಇರಬೇಕು ಎಂದು ಆದೇಶ ಕೊಟ್ಟಿದ್ದಾರೆ, ಅಲ್ಲಿಗೆ ಹೋದರೆ, ಕೊಲಿಜಿಯೇಟ್ ಎಜುಕೇಷನ್ ಡಿಪಾರ್ಟ್‌ಮೆಂಟ್‌ನವರು ಆಗಲೇ ಸೀನಿಯಾರಿಟಿ ಮಾಡಿದ್ದಾರೆ, ಅವರೆಲ್ಲರ ಕೆಳಗೆ ಇವರು ಹೋಗಬೇಕಾಗುತ್ತದೆ ಇದು ತುಂಬಾ ಅನ್ಯಾಯವಾಗುತ್ತದೆ. ಆದ್ದರಿಂದ ಅಲ್ಲಿಗೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಅನ್ನು ತಕ್ಷಣ ಜಾರಿಗೆ ತರಬೇಕು. ಬೇರೆ ಡಿಪಾರ್ಟ್‌ಮೆಂಟಿನಲ್ಲಿ ಎಂ. ಎಫ್. ಸಿ. ಮತ್ತು ಎಂ. ಸಿ. ಎಸ್. ಆರ್. ನಲ್ಲಿ ಏನು ಇದೆ, ಅದನ್ನು ಇವರಿಗೂ ಅನ್ವಯವಾಗುವಂತೆ ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಕಾಡೆಮಿಯ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಇದರ ಬಗ್ಗೆ ಅನೇಕ ಮಿತ್ರರು ಹೇಳಿದ್ದಾರೆ. ಇದರಲ್ಲಿ, ಹೆಚ್ಚಿನ ಪರಿಶ್ರಮವುಳ್ಳವರು, ಅನುಭವ ಇರುವವರು ಇರಬೇಕು, ಅವರೆ ಏನೂ ಅನುಭವ ಇಲ್ಲದೆ, ಸಂಗೀತ ಗಂಧ ಇಲ್ಲದ ಇರುವವರನ್ನು ಈ ಅಕಾಡೆಮಿಯಲ್ಲಿ ಕೂಡಿಸಿದರೆ ಅವರಿಗೆ ಏನು ಅರ್ಥವಾಗುತ್ತದೆ ? ಇದು ನನಗೆ ತಿಳಿದಮಟ್ಟಿಗೆ ಮಾನ್ಯ ಧರ್ಮವೀರ ಅವರ ಕಾಲದಲ್ಲಿ ಆಗಿರತಕ್ಕ ಅನ್ಯಾಯ ಎಂದು ಕಂಡುಬರುತ್ತದೆ. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಇಂಥ ಲೋಪದೋಷಗಳನ್ನು ಸರಿ ಮಾಡುತ್ತದೆ ಎಂದು ನಾನು ನಂಬಿಕೊಂಡಿದ್ದೇನೆ. ಅನೇಕ ಕಡೆ ಈ ಅಕಾಡೆಮಿಯನ್ನು ನಾವು ನೋಡಿದಾಗ ನಮಗೆ ಕಣ್ಣೀರು ಬರುತ್ತದೆ. ನನ್ನ ಒಬ್ಬ ಗುರುಗಳು ಇದರ ಬಗ್ಗೆ ಅನೇಕ ರೀತಿಯಲ್ಲಿ ಬಹಳ ಅನುಭವ ಪಡೆದಿದ್ದಾರೆ. ಅಂಥ ಅನುಭವಿಗಳನ್ನು ಬಿಟ್ಟು, ದಕ್ಷರನ್ನು ಬಿಟ್ಟು, ಅನ್ಯಾಯ ಮಾಡಿದಂಥ ವ್ಯಕ್ತಿಗಳನ್ನು ಅಲ್ಲಿಗೆ ತಂದು ಹಾಕಿದ್ದಾರೆ. ಇದು ಆಶ್ಚರ್ಯವಾದ ವಿಚಾರ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ ತಾವುಗಳು ಬಹಳ ಒಳ್ಳೆಯವರು, ಸಾಧುಸ್ವಭಾವದವರು, ಏನಾದರೂ ಇಲ್ಲಿ ಅನ್ಯಾಯ ಕಂಡುಬಂದಪಕ್ಷದಲ್ಲಿ ತೀಕ್ಷ್ಣವಾದ ಕ್ರಮ ತೆಗೆದುಕೊಳ್ಳಬೇಕು. ಈ ಅಕಾಡೆಮಿಗಳನ್ನು ಮಾಡುವಾಗ ಒಳ್ಳೆಯ ರೀತಿಯಲ್ಲಿ ಯಾರು ಇದರ ಬಗ್ಗೆ ತಿಳಿದುಕೊಂಡಿದ್ದಾರೆ, ಯಾರು ಯೋಗ್ಯರು ಎಂದು ಇದ್ದಾರೆ, ಯಾರು ನೀತಿವಂತರು ಇದ್ದಾರೆ ಅಂಥವರನ್ನು ಇಲ್ಲಿಗೆ ಹಾಕಬೇಕು ಎಂದು ಈ ಸಂಧರ್ಭದಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನೆಹರೂ ಯುವಕ ಕೇಂದ್ರ, ಡೆವಲಪ್‌ಮೆಂಟ್ ಸ್ಟಡಿ ಕಮಿಟಿ ಫಾರ್ ಚೈಲ್ಡ್ ವೆಲ್‌ಫೇರ್, ಇದರ ಬಗ್ಗೆ ಯಾವ ಒಂದು ಕೇಂದ್ರವನ್ನು ಮಾಡಲಿ, ಅದು ನನಗನ್ನಿಸುತ್ತದೆ, ಗ್ರಾಮಾಂತರ ಪ್ರದೇಶಗಳಲ್ಲಿರುವ ಜನಗಳಿಗೆ, ಬಡವರಿಗೆ, ನಿರ್ಗತಿಕರಿಗೆ, ಅಲ್ಪಸಂಖ್ಯಾತರಿಗೆ, ಉಪಯೋಗವಾದರೆ ಮಾತ್ರ ಸಾರ್ಥಕವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಅನೇಕ ಕೇಂದ್ರಗಳು ಇವೆ, ಇವುಗಳಲ್ಲಿ ಸರ್ಕಾರದ ವತಿಯಿಂದ ನಿಜವಾಗಿಯೂ ಕೆಲಸ ಮಾಡುವ ಕೇಂದ್ರಗಳು ಎಷ್ಟು ಎಂದು ನಾನು ಪ್ರಶ್ನೆ ಮಾಡಬೇಕಾಗುತ್ತದೆ. ಇವುಗಳಿಗೆ ಸರ್ಕಾರದವರು ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಇಂಥ ಕೇಂದ್ರಗಳಲ್ಲಿ ಅಧಿಕಾರ ವರ್ಗದವರು ಮುತುವರ್ಜಿ ವಹಿಸಿ ಕೆಲಸ ಮಾಡುತ್ತಾರೆಯೇ ಆದ್ದರಿಂದ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಈ ಕೇಂದ್ರಗಳಿಗೆ ಚೇತನ ಕೊಟ್ಟು ಯೋಗ್ಯರಿರುವ ಅಧಿಕಾರಿಗಳನ್ನು ಹಾಕಿ ಸರಿಯಾದ ರೀತಿಯಲ್ಲಿ ಅದರ ಸೂತ್ರವನ್ನು ಹಿಡಿದು, ಎಲ್ಲಿ ಕುಂಠಿತವಾಗಿದೆ ಎಂದು ನೋಡಿ, ಮತ್ತು ಆಗಾಗ್ಗೆ ಪಿರಿಯಾಡಿಕಲ್ ರಿಪೋರ್ಟನ್ನು ತರಿಸಿಕೊಂಡು ಏನೇನು ಅನ್ಯಾಯವಾಗಿದೆ, ಎನ್ನುವ ಬಗ್ಗೆ ಮಾಹಿತಿ ತೆಗೆದುಕೊಂಡು ಕೆಲಸಕಾರ್ಯಗಳನ್ನು ಮಾಡಿದರೆ ಒಳ್ಳೆಯದು ಎಂದು ನಾನು ಅಂದುಕೊಂಡಿದ್ದೇನೆ.

ಇನ್ನು ಖಾಸಗೀ ಕಾಲೇಜುಗಳ ಬಗ್ಗೆ ಕೇಳುವುದಾದರೆ, ನಾನು ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೆ. ಮುಂದೆಯಾದರೂ ಅವರು ತಮ್ಮ ವರದಿಯಲ್ಲಿ ಯಾವ ಯಾವ ಕಾಲೇಜು ಏನೇನು ಮಾಡಿದೆ ಯಾವ ಕಾಲೇಜು ಎಷ್ಟು ಫೀಸನ್ನು ಕಲೆಕ್ಟ್ ಮಾಡಿದೆ. ಎನ್ನುವುದನ್ನು ಪ್ರಸ್ತಾಪ ಮಾಡಬೇಕು ಬಹುಶಃ ಆ ರೀತಿ ಪ್ರಸ್ತಾಪ ಮಾಡಿದ್ದರೆ ನಮಗೆ ಎಲ್ಲಾ ಮಾಹಿತಿ ಸಿಕ್ಕುತ್ತಿತ್ತು

(ಶ್ರೀ ಎಂ. ಬಿ. ರಾಮಸ್ವಾಮಿ)

ಅನೇಕರು ಪ್ರೈವೇಟ್ ಕಾಲೇಜು ನಡೆಸತಕ್ಕವರು ಬಿಸಿನೆಸ್ ಮೈಂಡ್ ಇಟ್ಟುಕೊಂಡಿದ್ದಾರೆಂದು ತಿಳಿದುಕೊಂಡಿದ್ದೇನೆ. ವಿದ್ಯಾ ಇಲಾಖೆಯಲ್ಲಿ ಬಹುಶಃ ಹೆಚ್ಚಿಗೆ ಅನ್ಯಾಯ ಆಗುವುದು ಈ ಪ್ರೈವೇಟ್ ಕಾಲೇಜುಗಳಲ್ಲಿ. ಅನೇಕ ಪ್ರೈವೇಟ್ ಕಾಲೇಜುಗಳಲ್ಲಿ ಈ ರೀತಿ ನಡೆಯುತ್ತಿದೆ ಎಲ್ಲ ಕಡೆಯಲ್ಲೂ ನಡೆಯುತ್ತಿದೆ ಎಂದು ನಾನು ಹೇಳುವುದಿಲ್ಲ. ನಾನು ಉದಾಹರಣೆಗೆ ಹೇಳುವುದಾದರೆ ಶಾಲೆಗೆ ನಮ್ಮ ಮಕ್ಕಳನ್ನು ಕಳುಹಿಸಬೇಕಾದರೆ 27 ರೂಪಾಯಿ ನಾನು ಕೊಡುತ್ತಿದ್ದೇನೆ. ಹರಿಜನರಿಗೆ ಸರ್ಕಾರದವಲ್ಲಿ ಅನೇಕ ಸವಲತ್ತುಗಳನ್ನು ಕೊಡುತ್ತಿದ್ದೇವೆ ಬೇಕಾದಷ್ಟು ಅನುಕೂಲ ಮಾಡುತ್ತೇವೆ ಎಂದು ಹೇಳುತ್ತಾರೆ. ಪ್ರೈಮರಿಯಿಂದ ಹಿಡಿದು ಕಾಲೇಜಿನವರೆಗೆ ಪುಕ್ಕಸಾಟೆ ವಿದ್ಯಾಭ್ಯಾಸ ಕೊಡುತ್ತೇವೆಂದು ಹೇಳುತ್ತಾರೆ. ಪ್ರೈವೇಟ್ ಇನ್‌ಸ್ಟಿಟ್ಯೂಷನ್ಸ್‌ರವರು ನಮ್ಮ ಮಕ್ಕಳ ಬಗ್ಗೆ ಏತಕ್ಕೆ ನಿಗಾ ವಹಿಸುತ್ತಾರೆ? ವಿದ್ಯಾಭ್ಯಾಸದಲ್ಲಿ ನಮಗೆ ಬಹಳ ಅನ್ಯಾಯವಾಗಿದೆ. ಹಿಂದೆ ಸರ್ಕಾರದಲ್ಲಿ ನಮ್ಮ ರಾಜ್ಯಪಾಲರ ಅವಧಿಯಲ್ಲಿ ವಿದ್ಯಾ ಇಲಾಖೆಯಲ್ಲಿ ಬಹಳ ಇನ್‌ಸ್ಟಿಟ್ಯೂಷನ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿದ್ದಾರೆ. ಇದು ಬಿಸಿನೆಸ್ ಆಗಿ ಹೋಗಿಬಿಟ್ಟಿದೆ. ಈ ಅನ್ಯಾಯವನ್ನು ತಕ್ಷಣ ನಿಲ್ಲಿಸಬೇಕು ಎಂದು ನಾನು ಪ್ರಾರ್ಥನೆ ಮಾಡುತ್ತೇನೆ. ಸರ್ಕಾರದ ಕಾನೂನಿನಲ್ಲಿ ಸರ್ಕಾರದ ಚೌಕಟ್ಟಿನಲ್ಲಿ ಯಾರು ಯಾರು ಹರಿಜನ ಮಕ್ಕಳು ಸೇರಿದ್ದಾರೆ ಅದು ಕಾರ್ಪೊರೇಷನ್ ಆಗಲಿ, ಬೇರೆ ಜಿಲ್ಲೆಯಲ್ಲಾಗಲಿ ರಾಜ್ಯದಲ್ಲಿ ಬೇರೆ ಯಾವ ಕಡೆಯಲ್ಲೇ ಆಗಲಿ ಅವರ ಬಗ್ಗೆ ಅವರಿಗೆ ದೊರಕಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡಲು ಇಲಾಖೆಯಿಂದ ಕ್ರಮ ತೆಗೆದುಕೊಳ್ಳಬೇಕು. ಅವರಿಂದ ಏನು ಫೀಸುಗಳನ್ನು ವಸೂಲು ಮಾಡಿದ್ದಾರೆ ಆ ಫೀಸ್‌ಗಳನ್ನು ವಾಪಸ್ ಕೊಡಬೇಕು ಎಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ನಾನು ಕಳೆದ ಅಧಿವೇಶನದಲ್ಲಿ ಪ್ರಶ್ನೆ ಹಾಕಿದ್ದೆ. ಅದಕ್ಕೆ ಉತ್ತರ ಕಳುಹಿಸದೆ, ಎಜುಕೇಷನ್ ಡಿಪಾರ್ಟ್‌ಮೆಂಟ್ ಡಿ.ಪಿ.ಐ. ಅಫೀಸಿನಲ್ಲಿ ಪೆಂಡಿಂಗ್ ಇದೆ. ನಮ್ಮ ರಾಜ್ಯದಲ್ಲಿ ಎಷ್ಟು ಪ್ರೈಮರಿ ಶಾಲೆಗಳು ಇವೆ; ಬೆಂಗಳೂರು ನಗರದಲ್ಲಿ ಹಾಗೂ ಬೆಂಗಳೂರು ಜಿಲ್ಲೆಯಲ್ಲಿ ಎಷ್ಟು ಹೈಸ್ಕೂಲುಗಳು ಇವೆ; ಎಷ್ಟು ಕಾಲೇಜುಗಳಿವೆ; ಎಷ್ಟು ಬೇರೆ ವಿಧವಾಗಿ ನಡೆಸುತ್ತಿದ್ದಾರೆ; ಎಷ್ಟು ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ಗಳು ಇವೆ ಎಂದು ಕೇಳಿದ್ದೇನೆ. ಇದುವರೆಗೂ ಅದಕ್ಕೆ ಉತ್ತರ ಬರದೇ ಇರುವುದು ನನಗೆ ಅರ್ಥವಾಗುವುದಿಲ್ಲ, ಡಿ.ಪಿ.ಐ. ಅಫೀಸಿನಲ್ಲಿ ಪೆಂಡಿಂಗ್ ಇದೆಯೆಂದು ಗೊತ್ತಾಯಿತು. ಅಲ್ಲಿ ಏನು ರಾಜಕೀಯ ಗೊಂದಲ ಇದೆಯೋ; ಇನ್‌ಫರ್ಮೇಷನ್ ಕೊಟ್ಟರೆ ನಮಗೆ ಪೆಟ್ಟಾಗುತ್ತದೆ ಎಂದು ತಿಳಿದುಕೊಂಡಿದ್ದಾರೋ ಏನೋ ಅರ್ಥವಾಗುವುದಿಲ್ಲ. ಆದಷ್ಟು ಬೇಗ ಯಾರು ಯಾರು ಅನ್ಯಾಯ ಮಾಡುತ್ತಿದ್ದಾರೆ ಮಕ್ಕಳಿಗೆ ಹಾಗೂ ಪೋಷಕ ವರ್ಗದವರಿಗೆ ಹಾಗೂ ಸರ್ಕಾರಕ್ಕೆ ಅವರು ಯಾವ ಕೋಮಿನವರೇ ಇರಲಿ ಅವರ ಬಗ್ಗೆ ಇಲಾಖೆಯಿಂದ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಮಾನವೀಯತೆ ದೃಷ್ಟಿಯಿಂದ ತಾಲ್ಲೋಕು ಮಟ್ಟದಲ್ಲಿ ಮಕ್ಕಳಿಗೆ ಕಂಪಲ್ಸರಿ ಎಜುಕೇಷನ್ ಇದೆ. ಕೆಲವು ಕಡೆ ಮಕ್ಕಳು ಇದ್ದಾರೆ. ಉಪಾಧ್ಯಾಯರು ಇಲ್ಲ, ಕೆಲವು ಕಡೆ ಇದ್ದ ಉಪಾಧ್ಯಾಯರನ್ನು ಬೇರೆ ಕಡೆಗೆ ವರ್ಗಮಾಡಿದ್ದಾರೆ. ಅಲ್ಲಿಗೆ ಬೇರೆ ಉಪಾಧ್ಯಾಯರನ್ನು ಹಾಕಿಲ್ಲ. ಅದರ ಬಗ್ಗೆ ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ನಾನು ಪ್ರಸ್ತಾಪ ಮಾಡುವುದು ಇಷ್ಟೆ. ಅನೇಕ ಕಡೆ ಅನೇಕ ಸ್ಕೂಲು ಕಟ್ಟಡಗಳು ಇದ್ದರೂ ಸುಮಾರು 5 ವರ್ಷಗಳಾದರೂ ಅವಕ್ಕೆ ಸುಣ್ಣ ಬಳಿದಿಲ್ಲ. ಇನ್ನು ಮಿಡ್ ಡೇ ಮೀಲ್ಸ್‌ನಿಂದ ಎಷ್ಟು ಮಕ್ಕಳಿಗೆ ಅನುಕೂಲವಾಗುತ್ತಿದೆ? ಉಪಾಧ್ಯಾಯರ ಮನೆಯಲ್ಲಿ ಅಡಿಗೆ ಮಾಡುತ್ತಾರೆ. ಉಪಾಧ್ಯಾಯರ ಮನೆಯಲ್ಲೇ ಮುಗಿಸುತ್ತಾರೆ. ಮಕ್ಕಳಿಗೆ ಕೊಡುವುದು ಕೊನೆಯಲ್ಲಿ ಉಳಿದಿರುವುದು ಏನು? ಇಂಥಾದ್ದು ಸರಿಪಡಿಸುವುದಕ್ಕೆ ಒಳ್ಳೆಯ ಸಲಹೆ ಕೊಡಬೇಕು. ಮಿಡ್ ಡೇ ಮೀಲ್ ಏನು ಇದೆ ಅದು ಒಳ್ಳೆಯ ರೀತಿಯಲ್ಲಿ ಉಪಯೋಗ ಆಗಬೇಕು ಎಂದು ಹೇಳಬೇಕಾಗಿದೆ, ಮತ್ತು ಅನೇಕ ರೀತಿಯ ಪುಷ್ಟಿಕರವಾದ ಆಹಾರ ಕೊಡುತ್ತಾ ಇದ್ದಾರೆ, ಆದರೂ ನಾನು ನೋಡಿದ ಹಾಗೆ ನನ್ನ ಕ್ಷೇತ್ರದಲ್ಲಿ ಅನೇಕ ಕಡೆ ಮಕ್ಕಳು ಬಡಕಲು ಆಗಿರುವುದನ್ನು ನೋಡಿದ್ದೇನೆ. ಸರ್ಕಾರದ ವತಿಯಿಂದ ಇಷ್ಟೊಂದು ಕೋಟ್ಯಾಂತರ ರೂಪಾಯಿ ಖರ್ಚುಮಾಡಿ ಬಡವರ ಮಕ್ಕಳು ಉದ್ಧಾರವಾಗಲಿ ಅವರ ಮಕ್ಕಳಿಗೆ ಬಟ್ಟೆ ಸಿಕ್ಕಲಿ, ಬೇರೆ ಮಕ್ಕಳ ಸಮಾನಕ್ಕೆ ಅವರು ಬರಲಿ ಎಂದು ಲಕ್ಷಾಂತರ ರೂಪಾಯಿಗಳನ್ನು ಹರಿಜನರಿಗೆ ಕೊಟ್ಟರೂ ಕೂಡ ಅವರಿಗೆ ಸರಿಯಾಗಿ ಸೇರುವುದಿಲ್ಲ, ಕಾರಣ ಇಷ್ಟೇ ಅಲ್ಲ. ಇರತಕ್ಕ ಕೆಲವೇ ಉಪಾಧ್ಯಾಯರು, ಎ.ಇ.ಓ. ಮತ್ತು ಅಲ್ಲಿರತಕ್ಕ ಇನ್‌ಸ್ಪೆಕ್ಟರ್ಸ್ ಅವರನ್ನು ಅಲ್ಲಿಂದ ತೆಗೆದು ಬೇರೆ ಕಡೆಗೆ ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ಯಾರೇ ಆಗಲಿ ಕಾನೂನಿನ ಪ್ರಕಾರ ಕೆಲಸ ಮಾಡಿದರೆ ಅವರನ್ನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಅಕ್ರಮ ನಡೆದಾಗ, ಅನ್ಯಾಯ ನಡೆದಾಗ ಅನೀತಿ,

ಅತ್ಯಾಚಾರ ನಡೆದಾಗ ಅದನ್ನು ಖಂಡಿಸದೇ ಹೋದ ಪಕ್ಷದಲ್ಲಿ ನ್ಯಾಯ ಕೊಡುವುದಕ್ಕೆ ಸಾಧ್ಯವಿಲ್ಲ. ಈ ಸೌಲತ್ತುಗಳನ್ನು ಒದಗಿಸಿ ಕೊಡುವ ಬಗ್ಗೆ ಎ.ಇ.ಓ. ಹೆಚ್ಚಿಗೆ ಸಹಾಯ ಮಾಡಬೇಕು. ಮತ್ತು ಎಲ್ಲಾ ರೀತಿಯಿಂದಲೂ ಏನು ಹೆಚ್ಚಿನ ಹಣ ಸರ್ಕಾರದವರು ವಿನಿಯೋಗ ಮಾಡುತ್ತಿದ್ದಾರೆ ಅದು ಯಾವ ಇಲಾಖೆಯಲ್ಲೇ ಆಗಲಿ ಸಫಲ ಆಗಬೇಕಾದರೆ ಸರಿಯಾದ ಸೂಪರ್‌ವಿಷನ್ ಇಲ್ಲದೆ ಹೋದರೆ, ಏನು ಮಾಡುವುದಕ್ಕೂ ಸಾಧ್ಯವಿರುವುದಿಲ್ಲ ಎಂದು ಈ ಸಂದರ್ಭದಲ್ಲಿ ಒತ್ತಾಯದಿಂದ ಹೇಳ ಬೇಕಾಗುತ್ತದೆ. ನಾನು ಇದುವರೆಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದೇನೆ. ಅದನ್ನು ಸಾಧ್ಯ ವಾದಷ್ಟು ಕಾರ್ಯಗತ ಮಾಡುವುದಕ್ಕೆ ಗಮನಕೊಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಸಭಾಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಮಾದೇಗೌಡ (ಬನ್ನೂರು).—ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡುವುದಕೆ, ಅವಕಾಶ ಕೊಟ್ಟಿದ್ದಕ್ಕಾಗಿ ಪ್ರಪ್ರಥಮವಾಗಿ ತಮಗೆ ವಂದಿಸಿ ಈ ವಿದ್ಯಾಭ್ಯಾಸದ ಬೇಡಿಕೆ ಮೇಲೆ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಅಧ್ಯಕ್ಷರೇ, ಸಮಾಜವಾದದಲ್ಲಿ ನಾವು ಎಲ್ಲರಲ್ಲೂ ಬಹಳವಾಗಿ ಒಂದು ಸಮಾನತೆಯನ್ನು ಕಲ್ಪಿಸಬೇಕು ಎಂದು ಹೊರಟಿದ್ದೇವೆ. ನಾನು ಹೇಳುವುದಾದರೂ ಇಷ್ಟೆ. ಮನುಷ್ಯನನ್ನು ಜ್ಞಾನವಂತನನ್ನಾಗಿ ಮತ್ತು ತಿಳಿದಂತವನನ್ನಾಗಿ ಮಾಡತಕ್ಕ ಅವಕಾಶಕ್ಕೆ ಯಾವ ಸರ್ಕಾರಕ್ಕೂ ಕೂಡ ಒಂದು ಮಿತಿಯಿಲ್ಲ. ದೇಶದಲ್ಲಿ ಮಾನವ ಜನ್ಮ ಎತ್ತಿದ ಮೇಲೆ, ತಿಳುವಳಿಕೆ ಪಡೆಯತಕ್ಕ ಹಕ್ಕು ಪ್ರತಿಯೊಬ್ಬ ಪ್ರಜೆಗಳ ಕೂಡ ಇದೆ. ಅದನ್ನು ಕೊಡತಕ್ಕ ಚೈತನ್ಯ ಮತ್ತು ಶಕ್ತಿ ಕೂಡ, ಅದರ ಹೊಣೆಯನ್ನು ಹೊತ್ತಿರತಕ್ಕ ಸರ್ಕಾರಕ್ಕೆ ಇದೆ. ಅದರಲ್ಲೂ ಕೂಡ ಸಮಾಜವಾದತತ್ವದ ಮೇಲೆ ಸ್ಥಾಪಿತವಾದ ಸರ್ಕಾರಕ್ಕ ಇದರ ಪೂರ್ಣವಾದ ಹೊಣೆ ಇದೆ. ಇಂಥ ಹೊಣೆಯನ್ನು ಬಹುಶಃ ಈ ಸರ್ಕಾರ ಕಡೆಗನಿಸಿದೆ ಎಂದು ನಾನಂತು ಬಹಳ ವಿಷಾದದಿಂದ ಹೇಳಬೇಕಾಗಿದೆ. ಅಧ್ಯಕ್ಷರೇ, ನಾವು ಇವೊತ್ತಿನ ದಿವಸ ತಾತ್ಕಾಲಿಕವಾಗಿ ತೃಪ್ತಿಯನ್ನು ಪಡೆಯುವುದಕ್ಕೆ ಬೇರೆ ಬೇರೆ ಸುಧಾರಣೆ ಗಳನ್ನು ನಾವು ಏನು ತಂದಿದ್ದೇವೆಯೋ ಅದಕ್ಕಿಂತಲೂ ಉನ್ನತವಾದ ಸುಧಾರಣೆಯನ್ನು ಇದರಲ್ಲಿ ತರಬಹುದಾದಂಥ ಅವಕಾಶವಿದೆ. ಕಾರಣವಾದರೂ ಕೂಡ ಇಷ್ಟೆ. ಒಬ್ಬನ ಐಶ್ವರ್ಯವನ್ನು ಎಲ್ಲರಿಗೂ ಹಂಚುವ ಅವಕಾಶಕ್ಕೆ ತಡೆ ಆಗತಕ್ಕಂಥ ಪರಿಸ್ಥಿತಿ ಯಾವ ಸರ್ಕಾರಕ್ಕೂ ಇಲ್ಲ. ಸಮಾಜ ದಲ್ಲಿ ವಿದ್ಯಾ ತಿಳುವಳಿಕೆ, ಜ್ಞಾನವನ್ನು ಕೊಡತಕ್ಕ ಶಕ್ತಿ ಮತ್ತು ಮನಸ್ಸು ಸರ್ಕಾರಕ್ಕೆ ಪೂರ್ಣ ವಾಗಿದೆ. ಆದರ ಒಂದು ಅವಶ್ಯಕತೆಯನ್ನು ನಮ್ಮ ಸರ್ಕಾರ ಮನಗಂಡಿದೆ, 67 ಕೋಟಿ ರೂಪಾಯಿ ಮಾತ್ರ ರೊಟೀನ್ ಕೆಲಸ ಮಾಡುವುದಕ್ಕೆ ವರ್ಷೇ ವರ್ಷೇ ಖರ್ಚು ಮಾಡುತ್ತಿದ್ದೇವೆ. ಇಷ್ಟು ದುಡ್ಡನ್ನು ನಾವು ವಿದ್ಯಾಭ್ಯಾಸಕ್ಕಾಗಿ ಒದಗಿಸಿ ಈ ಸರ್ಕಾರ ತನ್ನ ಜವಾಬ್ದಾರಿ ಪೂರ್ಣ ವಾಗಿ ತಪ್ಪಿಸಿಕೊಂಡಿದೆ. ನಾನಾದರೂ ಕೂಡ ಈ ಸಂದರ್ಭದಲ್ಲಿ ಅಧ್ಯಕ್ಷರ ಮುಖಾಂತರ ಈ ಸರ್ಕಾರಕ್ಕೆ ಸಲಹೆ ಹೇಳುವುದು ಏನೆಂದರೆ ಎಲ್ಲಾ ಸುಧಾರಣೆಗಳಿಗಿಂತಲೂ ಕೂಡ ಈ ಒಂದು ಜ್ಞಾನ ತಿಳುವಳಿಕೆಯ ಸುಧಾರಣೆಯನ್ನು ನಾವು ಮಾನವನಲ್ಲಿ ತರುವುದೇ ಆದರೆ, ಅವನೇ ಸುಧಾ ರಣೆ ತರತಕ್ಕ ಶಕ್ತಿ ಹೊಂದುತ್ತಾನೆ. ಈ ಸುಧಾರಣೆ ತರುವುದು ಸರ್ಕಾರದ ಮೇಲೆ ಬಿದ್ದಿರತಕ್ಕ ಜವಾಬ್ದಾರಿ. ಜನರಿಗೆ ಜ್ಞಾನ ಮತ್ತು ತಿಳುವಳಿಕೆ ಕೊಡುವ ಮುಖಾಂತರ ಅವರ ಹೊಣೆಯನ್ನು ಕಡಿಮೆ ಮಾಡಬಹುದು. ಇದೇ ನಾನು ಈ ಸರ್ಕಾರಕ್ಕೆ ಕೊಡತಕ್ಕ ಒಂದು ಸಲಹೆ. ಈ ಒಂದು ಜ್ಞಾನವನ್ನು ಕೊಡತಕ್ಕ ಸಂದರ್ಭದಲ್ಲಿ, ಸರ್ಕಾರದ ಈ ಬೇಡಿಕೆ ಮುಖಾಂತರ ಇಟ್ಟಿರ ತಕ್ಕ ಈ ಒಂದು ದುಡ್ಡು ನಿಜವಾಗಿ ಕೂಡ ಸಾಕಾಗುತ್ತದೆಯೇ ? ಇದು ನಮ್ಮ ಸಮಾಜವಾದಕ್ಕೆ ಅನುಗುಣವಾಗಿದೆಯೇ ಎಂದು ನೋಡಬೇಕು. ತಿಳುವಳಿಕೆ ಕೊಡುವು ದಕ್ಕೂ ಕೂಡ ಸಮಾಜವಾದದ ಹೊರೆಯನ್ನು ಹೊತ್ತಿರತಕ್ಕ ಸರ್ಕಾರ ಹಿಂತೆಗೆದರೆ, ನಾಳೆ ಬಾಕಿ ಕಠಿಣವಾದ ಸುಧಾರಣೆಗಳನ್ನು ತರತಕ್ಕ ಕಾಲದಲ್ಲಿ ಎಷ್ಟು ವಿಫಲರಾಗುತ್ತೀರಿ ? ಇದೇ ನನ್ನ ನಂಬಿಕೆಗೆ ಕಾರಣ ಆಗದೇ ಇರತಕ್ಕದ್ದು. ಆದುದರಿಂದ ಸರಿಯಾದ ಜ್ಞಾನದ ತಿಳುವಳಿಕೆ ಕೊಡವುದಕ್ಕೆ ಮೊದಲು ಸರ್ಕಾರ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

Mr. DEPUTY SPEAKER.—The House stands adjourned to meet the next day at 1 P.M,

The House adjourned at Six of the Clock to meet again at One of the Clock on Friday the 13th April 1973.